ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿತ್ರೋತ್ಸವ
ಮುಂಬೈನಲ್ಲಿ ನಡೆದ ಚಿತ್ರೋತ್ಸವದಲ್ಲಿ ಬಾಲಿವುಡ್ ನಟಿ ಭೂಮಿ ಪೆಡ್ನೇಕರ್ ಪಾಲ್ಗೊಂಡಿದ್ದರು



JEE Main & Advanced 2024 aspirants !

What will you lose if you don't join ?

FIITJEE's Computer Based

ALL INDIA TEST SERIES

THE ORIGINAL ONE

You will lose

- the opportunity to appear in JEE Main & JEE Advanced several times, before the actual exams. This in itself can transform your performance in the actual exams.
- live online concept strengthening classroom program (CSCP) to eliminate conceptual doubts and plug loopholes that cause you to underperform in JEE Main & JEE Advanced.
- the opportunity to master time management skills for highly competitive JEE Main & JEE Advanced exams.
- the opportunity to acquire the right examination temperament required for performing optimally in JEE Main & JEE Advanced.
- the opportunity to get your Rank Potential Index (RPI) after each exam, so you know how close you are to your desired goal.
- the opportunity to learn problem solving strategies for challenging problems of JEE Advanced.
- the only opportunity to compete at National Level competition for JEE Main & JEE Advanced.

For Class XII / XII Pass Students - Computer Based All India Test Series for JEE Main & JEE Advanced 2024

Program		No. of Main Tests	No. of Advanced Tests	No. of Live Online CSCP[Ω] Sessions (@6 hours)	Last Date to Enrol & Fee*		
Computer Based **All India Test Series** Multidimensional Analysis of Performance followed by Live Online Concept Strengthening Sessions by FIITJEE Delhi Centres + 24/7 myPAT Online Concept-wise Tests and Test Series (each Test will give you detailed Analysis Chart & Rank Potential Index)	From Part Test - I	18	18	19	15th November 2023	Rs. 19,200/-	12 Main &10 Advanced Tests will be conducted at fixed timings as per the actual JEE Main & JEE Advanced timings. Test can be taken from CBT Centers as well as from home on personal computer. 6 Main & 8 Advanced Tests can be taken online from home at any time and these tests will be live for seven days.
	From Part Test - II	17	17	17	1st December 2023	Rs. 17,000/-	
	From Part Test - III	16	16	15	15th December 2023	Rs. 16,000/-	
	From Full Test - I	15	15	13	26th December 2023	Rs. 15,000/-	
	From Open Test - Main	12	14	11	12th January 2024	Rs. 13,500/-	
	From Open Test - Advanced	7	14	10	2nd February 2024	Rs. 12,500/-	
	From Full Test VII	7	10	9	20th March 2024	Rs. 10,900/-	

For complete AITS schedule & to enrol online, please visit **www.fiitjeenonclassroomprograms.com/aits.htm**

Ω Concept Strengthening Classroom Program

AITS can push your All India Rank from Top 100 to Top 20 and from last selection to even in Top 10000 in JEE Advanced. In JEE Main also, AITS will propel your All India Rank by an unbelievable margin.

myPAT FIITJEE – Online Test Series (Accessible 24/7) for JEE Main & JEE Advanced 2024

Enrol at www.mypat.in | Sign up for a 14 day Free Trial now !

myPAT is an Online Platform for Learning through Assessment, Analysis and Identification of Improvement Areas. myPAT enables you to track your progress, giving an in depth analysis and allows you to assess yourself both in Test Mode and Learning Mode.

Program	JEE 2024 Fee*#	Last Date to Enrol[Ω]
"Concept-wise Tests" for JEE Main	Rs. 2,000/-	31st December 2023
	Rs. 2,100/-	2nd February 2024
"Concept-wise Tests" for JEE Advanced	Rs. 2,500/-	31st December 2023
	Rs. 2,600/-	2nd February 2024
"Concept-wise Tests" for JEE Main + JEE Advanced	Rs. 3,000/-	31st December 2023
	Rs. 3,100/-	2nd February 2024

Program		JEE 2024 Fee*#	Last Date to Enrol[Ω]
"Concept-wise Tests + Test Series" for JEE Main	M1	Rs. 5,000/-	31st December 2023
	M2	Rs. 4,500/-	31st January 2024
	M3	Rs. 3,500/-	29th February 2024
	M4	Rs. 2,500/-	31st March 2024
"Concept-wise Tests + Test Series" for JEE Advanced	A1	Rs. 5,500/-	31st December 2023
	A2	Rs. 5,000/-	29th February 2024

Program		JEE 2024 Fee*#	Last Date to Enrol[Ω]
"Concept-wise Tests + Test Series" for JEE Advanced	A3	Rs. 4,000/-	31st March 2024
	A4	Rs. 3,000/-	30th April 2024
"Concept-wise Tests + Test Series" for JEE Main + JEE Advanced	M1 + A1	Rs. 6,000/-	31st December 2023
	M2 + A2	Rs. 5,500/-	31st January 2024
	M3 + A3	Rs. 4,500/-	29th February 2024
	M4 + A4	Rs. 3,500/-	31st March 2024

*(including GST)

- **M1** - There are 600+ Concept-wise Tests for JEE Main and Test Series for JEE Main contains 10 Unit Tests + 5 Part Tests + 2 Half Course Tests + 10 Full Tests; **M2** - There are 600+ Concept-wise Tests for JEE Main and Test Series for JEE Main contains 5 Part Tests + 2 Half Course Tests + 10 Full Tests; **M3** - There are 600+ Concept-wise Tests for JEE Main and Test Series for JEE Main contains 2 Half Course Tests + 10 Full Tests; **M4** - There are 600+ Concept-wise Tests for JEE Main and Test Series for JEE Main contains 10 Full Tests.
- **A1** - There are 550+ Concept-wise Tests for JEE Advanced and Test Series for JEE Advanced contains 10 Unit Tests (Paper 1 + Paper 2) + 5 Part Tests (Paper 1 + Paper 2) + 2 Half Course Tests (Paper 1 + Paper 2) + 10 Full Tests (Paper 1 + Paper 2); **A2** - There are 550+ Concept-wise Tests for JEE Advanced and Test Series for JEE Advanced contains 5 Part Tests (Paper 1 + Paper 2) + 2 Half Course Tests (Paper 1 + Paper 2) + 10 Full Tests (Paper 1 + Paper 2); **A3** - There are 550+ Concept-wise Tests for JEE Advanced and Test Series for JEE Advanced contains 2 Half Course Tests (Paper 1 + Paper 2) + 10 Full Tests (Paper 1 + Paper 2); **A4** - There are 550+ Concept-wise Tests for JEE Advanced and Test Series for JEE Advanced contains 10 Full Tests (Paper 1 + Paper 2).
- All Tests can be taken multiple times. Each Test will give you detailed Analysis Chart & Rank Potential Index.

Do you want to make an even bigger difference ?

If yes, then join FIITJEE's **Intensive Contact Program for JEE Main & Advanced 2024**

(192 hrs of Classes ; program includes AITS)

If you follow us sincerely, then you can look forward to marks improvement of upto 85 marks in JEE Main & upto 100 in JEE Advanced depending upon your present level of preparation.

Admission cum Scholarship Test Dates : **17th Dec. 2023 & 11th Feb. 2024**

Batch Commencement Date : **29th Dec. 2023 & 20th Feb. 2024 (for XII Pass only)**

Register at **http://admissiontest.fiitjee.com**

Available through both offline as well as Live Online Mode. The classes in Live Online Mode will be conducted by FIITJEE Delhi Centres.

Non-Classroom Programs are available for Students presently in Class VIII, IX, X & XI. Visit www.fiitjeenonclassroomprograms.com | Call: 011 - 41828706 | e-mail : query.ncrp@fiitjee.com

Come, Study with the Best !

FIITJEE

31 YEARS OF INNOVATION, SINCERITY, ETHICS, CONSISTENCY & HARD WORK

Bangalore Centres - HSR Layout : 119, S. S. Plaza, 13th Cross, 6th Sector, Outer Ring Road, HSR Layout, Bangalore - 560 102 Ph: 9205953328, 9742288873 **Jayanagar** : 162, 36th Cross Road, 7th Main Road, 5th Block, Jayanagar, Bengaluru - 560041 Ph : 9742255583 **Sheshadripuram** : 113/114, 3rd Floor, HTR Chambers, Opp Hoysala Hotel, SC Road, Sheshadripuram Ph: 9742288873, 9742255583 **Web: www.fiitjeebangalore.com | Hostel Facility Available**

National Admissions Office: FIITJEE House, 29-A, Kalu Sarai, Sarvapriya Vihar, New Delhi **Helpline No: 7825895400** Web: www.fiitjee.com Buy books at www.megacosmcognitions.com www.facebook.com/fiitjeeindia123 www.twitter.com/fiitjee www.linkedin.com/company/fiitjee www.youtube.com/fiitjeeltd www.instagram.com/fiitjee.india

Prepare Stress Free & Tension Free for all Your Goals Only at FIITJEE

FIITJEE eSchool bringing offline expertise to online

Live Online Classroom Programs for Class VI to XII Pass Students

The next best learning medium after FIITJEE Offline Classroom Programs right at your doorstep. Join from anywhere & experience FIITJEE's legendary pedagogy.

For more information on Live Online Programs visit **www.fiitjee-eschool.com** | **e-Mail : query@fiitjee-eschool.com**
To receive a call back (for eSchool), give a missed call on 9289550392 | For Program Enquiry, call on **8400928400**
Book your video counselling session : **www.fiitjee-eschool.com/VCO**

ಭಾನುವಾರ, ಅಕ್ಟೋಬರ್ 29, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 299 | ಪುಟ 24

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಪ್ರತಿಮೆಗಳು, ಸಂಕೇತಗಳು ರಾಜಕಾರಣಕ್ಕೆ ಬಳಕೆಯಾಗುತ್ತಿರುವ ವಿದ್ಯಮಾನದ ಕುರಿತ ವಿಶ್ಲೇಷಣೆ..



ಈರುಳ್ಳಿ ರಫ್ತಿಗೆ ದರ ಮಿತಿ 9

ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಗಾಜಾ ಮೇಲೆ ದಾಳಿ ತೀವ್ರಗೊಳಿಸಿದ ಇಸ್ರೇಲ್ 8


ಎಸ್‌ಟಿ ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ 4

ಅಮಾಯಕರನ್ನು ವಂಚಿಸಲು ಒಂದು ಕ್ಲಿಕ್, ಕರೆ ಸಾಕು ● ಸಲಿಗೆಯ ದುರ್ಬಳಕೆ

ಸೈಬರ್ ಅಪರಾಧ: ಇಲ್ಲ ಕಡಿವಾಣ

● ನಾಗರಾಜ ಬಿ.ಎನ್

ಒಳನೋಟ




ಹುಬ್ಬಳ್ಳಿ: ಭಾರತೀಯರ ಜೀವನ ಮಟ್ಟ ಮತ್ತು ಆರ್ಥಿಕ ಸುಧಾರಣೆಗೆ ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು 'ಬಿಟಿಸಿ ಐಪ್ಲೆಕ್ಸ್ ಎಐ' ಎಂಬ ಬಿಟ್‌ಕಾಯಿನ್ ಕಂಪನಿ ಆರಂಭಿಸಿದ್ದಾರೆ ಎಂಬ ವಿಡಿಯೊ ಈಚೆಗೆ ಸಂಚಲನ ಮೂಡಿಸಿತು. 'ಈ ಕಂಪನಿಯಲ್ಲಿ ಯಾರೇ ಸಾವಿರಾರು ರೂಪಾಯಿ ಹೂಡಿದರೂ, ಒಂದೇ ವಾರದಲ್ಲಿ ಲಕ್ಷ ಅಥವಾ ಕೋಟಿ ಗಳಿಸಬಹುದು' ಎಂದು ನಾರಾಯಣಮೂರ್ತಿ ಅವರೇ ಹೇಳಿದಂತೆ ಬಿಂಬಿಸಲಾಯಿತು.

ಇಷ್ಟಕ್ಕೆ ಸೀಮಿತವಾಗದೆ, ದೇಶದ ಪ್ರಮುಖ ಪತ್ರಿಕೆಯು ತಾನೇ 'ಬಿಟಿಸಿ ಐಪ್ಲೆಕ್ಸ್ ಎಐ'ನಲ್ಲಿ ಹೂಡಿಕೆ ಮಾಡಿ ಸತ್ಯಾಸತ್ಯತೆಯನ್ನು ಪರಿಶೀಲಿಸಿ, ಈ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ ಲಾಭಗಳಿಸಬಹುದೆಂದು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ ಎಂದು ದೃಢೀಕರಿಸುವ ವ್ಯವಸ್ಥಿತ ಪ್ರಯತ್ನವೂ ನಡೆಯಿತು. ಆದರೆ, ಸತ್ಯಾಸತ್ಯತೆ ಪರಿಶೀಲಿಸಿದಾಗ ಇದೆಲ್ಲವೂ ಸುಳ್ಳು ಮತ್ತು ವಂಚಕರ ಕೃತ್ಯ ಎಂಬ ಅಂಶ ಬಯಲಿಗೆ ಬಂತು. ಸುಳ್ಳು ಮಾಹಿತಿ ಹರಡಲಾಗಿದೆ ಎಂಬುದು ಗೊತ್ತಾಯಿತು. 'ಇದೆಲ್ಲವೂ ಸುಳ್ಳು. ನಮ್ಮಲ್ಲಿ ಅಂಥ ಸುದ್ದಿ ಅಥವಾ ವಿಶೇಷ ವರದಿ' ಪ್ರಕಟವಾಗಿಲ್ಲ ಎಂದು ಆ ಪತ್ರಿಕೆ ಸಾರಿ ಸಾರಿ ಹೇಳಬೇಕಾಯಿತು.

ದೇಶದ ನಿವಾಸಿಗಳ ಏಳ್ಗೆಗಾಗಿ ಉದ್ಯಮಿ ನಂದನ್ ನಿಲೇಕಣಿ ಅವರು ಕ್ರಿಪ್ಟೊ ಯೋಜನೆ ಕೈಗೊಂಡಿದ್ದಾರೆ ಎಂಬ ವಿಷಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದಾಗ, ಅವರೇ ಖುದ್ದು ಟ್ವಿಟರ್‌ನಲ್ಲಿ (ಈಗಿನ ಎಕ್ಸ್) 'ಇದು ಸುಳ್ಳು ಸುದ್ದಿ. ಯಾರೂ ನಂಬಬೇಡಿ' ಎಂದು ಸ್ಪಷ್ಟನೆ ನೀಡಬೇಕಾಯಿತು. ಉದ್ಯಮಿಗಳಾದ ಮುಖೇಶ್ ಅಂಬಾನಿ, ಗೌತಮ ಅದಾನಿ ಅವರೂ ಸಹ ಕ್ರಿಪ್ಟೊ ಕರೆನ್ಸಿ ಬಳಕೆ ಕುರಿತು ಆಸಕ್ತಿ ಹೊಂದಿದ್ದಾರೆ ಎಂಬ ಸುದ್ದಿ ಹರಿದಾಡಿತು. ಅಸಲಿಗೆ, ಅದು ಕೂಡ ಸುಳ್ಳು ಸುದ್ದಿ. ಇವೆಲ್ಲದ್ದಕ್ಕೂ ಕಾರಣವಾಗಿದ್ದು ನಕಲಿ ವೆಬ್‌ಸೈಟ್‌ಗಳು.

ರಾಜ್ಯದ ಸೈಬರ್ ಕ್ರೈಂ ಅಪರಾಧಗಳ ವಿವರ



ಸದ್ಬಳಕೆಯಾಗದ ಮಾಹಿತಿ; ಆಗದ ಜಾಗೃತಿ

ಸೈಬರ್ ಅಪರಾಧಗಳ ಬಗ್ಗೆ ಅರಿವು ಮೂಡಿಸಲೆಂದೇ 'ರಾಷ್ಟ್ರೀಯ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್' ಇದೆ. ಅದರಲ್ಲಿ ಪ್ರಕರಣವನ್ನು ದಾಖಲಿಸಲು ಅವಕಾಶವಿದೆ. ಲೈಂಗಿಕ ಕಿರುಕುಳ, ಜೀವಭಯ ಅಥವಾ ಅನ್ಯಕಾರಣದಿಂದ ನಿಮ್ಮ ಗುರುತನ್ನು ಬಹಿರಂಗಪಡಿಸದೇ ದೂರು ದಾಖಲಿಸಬಹುದು. ದೂರನ್ನು ದಾಖಲಿಸಿ, ಅದು ಯಾವ ಹಂತದಲ್ಲಿದೆ ಎಂಬುದನ್ನು ಅರಿಯಬಹುದು.

ಜನರಿಗೆ ವಂಚನೆಯಾಗದಿರಲಿ ಎಂಬ ಉದ್ದೇಶದಿಂದ ಪೊಲೀಸ್ ಇಲಾಖೆಯು ಸೈಬರ್ ಬಳಕೆ ಬೇರೆ ಬೇರೆ ಸ್ವರೂಪದಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದೆ. ಆದರೆ, ಅಪರಾಧ ಪ್ರಕರಣಗಳು ಮಾತ್ರ ನಿಯಂತ್ರಣಕ್ಕೆ ಬರುತ್ತಿಲ್ಲ.

'ಸೈಬರ್ ಅಪರಾಧ ನಿಯಂತ್ರಣ ಕಾರ್ಯಕರ್ತನಾಗಿ ಕಾರ್ಯನಿರ್ವಹಿಸಲು ಹೆಸರು ನೋಂದಾಯಿಸಬಹುದು. ಅಲ್ಲದೇ, ಸೈಬರ್ ಕಾನೂನು ಮತ್ತು ಸದ್ಬಳಕೆ ಬಗ್ಗೆಯೂ ಮಾಹಿತಿ ಪಡೆಯಬಹುದು. ಆದರೆ, ಇಷ್ಟೆಲ್ಲ ಮಾಹಿತಿ ಕಣಜವಿದ್ದರೂ ಜನರು ಎಚ್ಚೆತ್ತುಕೊಳ್ಳುತ್ತಿಲ್ಲ ಎಂಬುದೇ ಬೇಸರದ ಸಂಗತಿ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪೋರ್ಟಲ್ ವಿಳಾಸ: https://cybercrime.gov.in

ಸಹಾಯವಾಣಿ 1930 / 112

ಅಂತರ್ಜಾಲವನ್ನು ದುರ್ಬಳಕೆ ಮಾಡಿಕೊಂಡು, ಬೇರೆ ಬೇರೆ ಮಾರ್ಗಗಳ ಮೂಲಕ ಜನಸಾಮಾನ್ಯರನ್ನು ವಂಚಿಸುವುದನ್ನು ಕರಗತ ಮಾಡಿಕೊಂಡಿರುವ ಕಿಡಿಗೇಡಿಗಳ ಕೃತ್ಯದಿಂದ ಹಲವರು ಹಣ ಕಳೆದುಕೊಂಡಿದ್ದಾರೆ. ನಂಬಿಕೆದ್ರೋಹದಿಂದ ಆದ ಮೋಸ ಸಹಿಸಲಾಗದೇ ಮತ್ತು ಕಳೆದುಕೊಂಡ ಹಣವನ್ನೂ ಪಡೆಯಲಾಗದೇ ಕೆಲವರು ಆತ್ಮಹತ್ಯೆ ಕೂಡ ಮಾಡಿಕೊಂಡಿದ್ದಾರೆ. ಮಾನ-ಮರ್ಯಾದೆ ಹೋಗುವುದೆಂದು ಇತ್ತ ಸೈಬರ್ ಪೊಲೀಸರಿಗೆ ಹೇಳಲಾಗದೇ, ಇತ್ತ ಆಪ್ತರೊಂದಿಗೂ ಮುಕ್ತವಾಗಿ ಮಾತನಾಡಲಾಗದೇ ಹಲವರು ನೋವು, ಅವಮಾನ ಸಹಿಸಿಕೊಂಡು ಬದುಕುತ್ತಿದ್ದಾರೆ.

ಸೈಬರ್ ಜಾಲ ವಿಸ್ತಾರವಾದಷ್ಟು, ಅಪರಾಧ ಪ್ರಕರಣಗಳು ಲೆಕ್ಕಕ್ಕೆ ಸಿಗದಷ್ಟು ದಾಖಲಾಗುತ್ತಿವೆ. ಅಸಲಿ ಎನ್ನುವ ಮಟ್ಟಿಗೆ ನಕಲಿ ಮತ್ತು ತಿರುಚಿದ ವಿಡಿಯೊ, ವೆಬ್‌ಸೈಟ್‌ಗಳು ಸೃಷ್ಟಿಯಾಗುತ್ತಿವೆ. ಖ್ಯಾತನಾಮರ ಹೇಳಿಕೆಗಳು ಸಂಶಯಕ್ಕೆ ಎಡೆ ಮಾಡಿಕೊಡುತ್ತಿವೆ. ಪ್ರಸಿದ್ಧ ವ್ಯಕ್ತಿಗಳ ವಿಡಿಯೊ ಎಡಿಟ್ ಮಾಡಿ, ಅದಕ್ಕೆ ಅವರದ್ದೇ ಮಾದರಿಯ ಧ್ವನಿಯನ್ನು ಸೇರಿಸಿ 'ಇಲ್ಲಸಲ್ಲದ್ದನ್ನು ಹೇಳಿಸಿ' ಪ್ರತಿಯೊಬ್ಬರೂ ನಂಬುವಂತೆ ಮಾಡಲಾಗುತ್ತಿದೆ.

ಬಿಟ್ ಕಾಯಿನ್ ಕಂಪನಿಯಲ್ಲಿ ಹಣ ಹೂಡಿಕೆ, ಒಟಿಪಿ, ಡೆಬಿಟ್-ಕ್ರೆಡಿಟ್ ಕಾರ್ಡ್ ಸ್ಕಿಮ್ಮಿಂಗ್, ಲಿಂಕ್ ಕಳುಹಿಸಿ ವಂಚನೆ, ಉಡುಗೊರೆ ಆಮಿಷ, ಎನಿಡೆಸ್ಕ್, ಟೀಮ್ ವ್ಯೂವರ್ ಸಪೋರ್ಟ್, ಆನ್‌ಲೈನ್ ಲೋನ್ ಸೇರಿ ಹಲವು ಸ್ವರೂಪಗಳಲ್ಲಿ ವಂಚಕರು ಹಣ ಸುಲಿಗೆ ಮಾಡುತ್ತಾರೆ. ವೈದ್ಯ, ಎಂಜಿನಿಯರ್, ಅಧಿಕಾರಿಗಳು, ವ್ಯಾಪಾರಸ್ಥರು ಸೇರಿ ಬೇರೆ ಬೇರೆ ಕ್ಷೇತ್ರದವರು ಮೋಸಕ್ಕೆ ಒಳಗಾಗಿದ್ದಾರೆ. ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಎಕ್ಸ್ ಮೇಲೆಯೂ ಕಣ್ಣಿಟ್ಟಿರುವ ಕೆಲ ಕಿಡಿಗೇಡಿಗಳು, ಯುವತಿಯರದ್ದು ಸೇರಿ ಕೆಲವರ ಖಾತೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅವರದ್ದೇ ಚಿತ್ರಗಳನ್ನು ಬಳಸಿಕೊಂಡು ಅವರ ಹೆಸರಿನಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿ, ಆಪ್ತರಿಗೆ 'ಫ್ರೆಂಡ್‌ಶಿಪ್ ರಿಕ್ವೆಸ್ಟ್' ಕಳುಹಿಸಿ ವಿಶ್ವಾಸ ಗಳಿಸಲು ಪ್ರಯತ್ನಿಸುತ್ತಾರೆ. ಸ್ನೇಹಿತರಾದ ಕೂಡಲೇ ಮೊಬೈಲ್ ನಂಬರ್ ಪಡೆದು ವಾಟ್ಸ್‌ಆ್ಯಪ್, ಎಸ್‌ಎಂಎಸ್ ಅಥವಾ ಮೆಸೆಂಜರ್ ಮೂಲಕ ಹಣ ಕೊಡುವಂತೆ ಪೀಡಿಸುತ್ತಾರೆ. ಯುವತಿಯರ ಮುಖದ ಚಿತ್ರಗಳನ್ನು ನಗ್ನಚಿತ್ರಕ್ಕೆ ಅಂಟಿಸಿ, ಅದನ್ನು ಆಯಾ ಯುವತಿಯರಿಗೆ ಕಳುಹಿಸಿ, 'ಮರ್ಯಾದೆ ಉಳಿಯಬೇಕಿದ್ದರೆ, ಹಣ ಕೊಡು' ಎಂದು ಬೆದರಿಸುತ್ತಾರೆ.

ಹಣದ ಅಮಿಷಕ್ಕೆ ಒಳಗಾಗಿ, ವಂಚನೆಯ ಸುಳಿಯಲ್ಲಿ ಸಿಲುಕಿ ಲಕ್ಷಾಂತರ ರೂಪಾಯಿ ಕಳೆದುಕೊಂಡ ಕಲ್ಯಾಣ ಕರ್ನಾಟಕ ಪ್ರದೇಶದ ಹಲವಾರು ನೌಕರರು ಪ್ರತಿ ತಿಂಗಳು ಕ್ರೆಡಿಟ್ ಕಾರ್ಡ್ ಇಎಂಐ ಕಟ್ಟುವಂತಾಗಿದೆ. ಬ್ಯಾಂಕ್ ಕ್ರೆಡಿಟ್ ಕಾರ್ಡ್, ಸರ್ಕಾರಿ ಯೋಜನೆಯಡಿ ಸಬ್ಸಿಡಿ ಸೇರಿ ಇತರೆ ಯೋಜನೆಗಳಿಗೆ ಅರ್ಜಿ ಹಾಕಿ, ದಾಖಲೆಗಳು ಸಲ್ಲಿಸಿದ ಕೆಲವೇ ನಿಮಿಷಗಳಲ್ಲಿ ವಂಚಕರಿಂದ ಅರ್ಜಿದಾರರಿಗೆ ಕರೆ ಹೋಗುತ್ತವೆ.

6ನೇ ಪುಟ ನೋಡಿ

ಅಧಿಕಾರಕ್ಕೇರಿದ ಐದು ತಿಂಗಳಲ್ಲೇ ಕಾಂಗ್ರೆಸ್‌ನಲ್ಲಿ ಭಿನ್ನಸ್ವರ

ಪರ್ಯಾಯ ಶಕ್ತಿಕೇಂದ್ರ ಸೃಷ್ಟಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಗಾದಿ ಮೇಲೆ ಕಣ್ಣಿಟ್ಟಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಭವಿಷ್ಯದ ನಡೆಗೆ ತಡೆಯೊಡ್ಡಲು ಪಕ್ಷದಲ್ಲೇ ಪರ್ಯಾಯ ಶಕ್ತಿಕೇಂದ್ರಗಳನ್ನು ಸೃಜಿಸುವ ಹೊಸ ದಾಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉರುಳಿಸಿದ್ದಾರೆ.

'ಎರಡೂವರೆ ವರ್ಷಗಳ ಬಳಿಕ ಶಿವಕುಮಾರ್ ಮುಖ್ಯಮಂತ್ರಿಯಾಗುವುದು ಖಚಿತ' ಎಂದು ಮಂಡ್ಯ ಶಾಸಕ ರವಿಕುಮಾರ್ ಗಣಿಗ ಶುಕ್ರವಾರ ಬೆಳಿಗ್ಗೆ ಹೇಳಿದ್ದರು. ಅದೇ ದಿನ ಮಧ್ಯಾಹ್ನ ಶಿವಕುಮಾರ್ ಜತೆ ಸಿದ್ದರಾಮಯ್ಯ ಸುದೀರ್ಘ ಸಭೆ ನಡೆಸಿದ್ದರು. ಅವರಿಗೆ, ಯಾವ ಸುಳಿವನ್ನೂ ನೀಡದೇ ಭೋಜನದ ಹೆಸರಿನಲ್ಲಿ ಗೃಹ ಸಚಿವ ಜಿ. ಪರಮೇಶ್ವರ ನಿವಾಸಕ್ಕೆ ರಾತ್ರಿ ತೆರಳಿದ ಮುಖ್ಯಮಂತ್ರಿ, ಅಲ್ಲಿಗೆ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಕರೆಸಿಕೊಂಡರು. ನಾಲ್ವರಿದ್ದ ಈ ಸಭೆ ತಡರಾತ್ರಿಯವರೆಗೂ ನಡೆದಿದೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಬೆಂಗಳೂರಿನಲ್ಲೇ ಇದ್ದರೂ ಅವರಿಗೆ ಈ ಭೋಜನ ಕೂಟಕ್ಕೆ ಆಹ್ವಾನ ನೀಡದೇ, ರಹಸ್ಯ ಕಾಯ್ದುಕೊಂಡಿರುವುದು ಪಕ್ಷದೊಳಗೆ ಹಲವು ರೀತಿಯ ಚರ್ಚೆಗೆ ಎಡೆಮಾಡಿಕೊಟ್ಟಿದೆ.

4ನೇ ಪುಟ ನೋಡಿ

ಸಿದ್ದರಾಮಯ್ಯ 'ದಲಿತ' ದಾಳ?

'ಎರಡೂವರೆ ವರ್ಷಗಳ ಬಳಿಕ ಅಧಿಕಾರ ಹಂಚಿಕೆ ಸೂತ್ರ ಜಾರಿಯಾಗಲಿದ್ದು, ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್' ಎಂದು ಕೆಲವು ಶಾಸಕರು ಬಹಿರಂಗ ಹೇಳಿಕೆ ನೀಡುತ್ತಿದ್ದಂತೆ ಸಕ್ರಿಯರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾಗಿದ್ದವರ ಜತೆ ಜೊತೆ ಸಭೆ ನಡೆಸಿರುವುದು ಹೊಸ ರೀತಿ ಚರ್ಚೆಗೆ ನಾಂದಿ ಹಾಡಿದೆ.

ಸಿದ್ದರಾಮಯ್ಯ ಜೊತೆ 'ಮುಸುಕಿನ ಗುದ್ದಾಟ' ನಡೆಸುತ್ತಿದ್ದ ಪರಮೇಶ್ವರ, ಅವಕಾಶ ಸಿಕ್ಕಾಗಲೆಲ್ಲಾ ದಲಿತ ಮುಖ್ಯಮಂತ್ರಿ ಹುದ್ದೆಯ ಪ್ರಸ್ತಾಪ ಮಾಡುತ್ತಿದ್ದರು. ಈಗ ಬಣ ಬದಲಿಸಿದಂತಿರುವ ಅವರು, ಸಿದ್ದರಾಮಯ್ಯ ಆಪ್ತ ಬಣದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಲೋಕಸಭೆ ಚುನಾವಣೆ ದೃಷ್ಟಿಯಿಂದ ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸುವಂತೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಇತ್ತೀಚೆಗೆ ಧ್ವನಿ ಎತ್ತಿದ್ದರು. ಕೆಲವರು ಅದಕ್ಕೆ ದನಿಗೂಡಿಸಿದ್ದರು. ಪರಿಶಿಷ್ಟ ಜಾತಿಯಿಂದ ಪರಮೇಶ್ವರ, ಪಂಗಡದಿಂದ ಸತೀಶ ಜಾರಕಿಹೊಳಿ ಉಪ ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿದ್ದಾರೆ. ಮುಖ್ಯಮಂತ್ರಿ ಬದಲಾವಣೆಗೆ ಹೈಕಮಾಂಡ್ ಮುಂದಾದರೆ, ದಲಿತ ಅಥವಾ ನಾಯಕ ಸಮುದಾಯಕ್ಕೆ ಅವಕಾಶ ನೀಡಿದರೆ ಬೆನ್ನಿಗೆ ನಿಲ್ಲುವ ಅಭಯವನ್ನೂ ಮುಖ್ಯಮಂತ್ರಿ ನೀಡಿದ್ದಾರೆ ಎಂದೂ ಹೇಳಲಾಗಿದೆ.

ಪ್ಯಾರಾ ಏಷ್ಯನ್ ಗೇಮ್ಸ್

ಭಾರತಕ್ಕೆ 111 ಪದಕ

ಹಾಂಗ್‌ಝೌ: ಚೀನಾದ ಹಾಂಗ್‌ಝೌನಲ್ಲಿ ಶನಿವಾರ ಕೊನೆಗೊಂಡ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ದಾಖಲೆಯ 111 ಪದಕಗಳೊಂದಿಗೆ ಐದನೇ ಸ್ಥಾನ ಗಳಿಸಿದರು. 2018ರ ಕೂಟದಲ್ಲಿ 72 ಪದಕಗಳನ್ನು ಜಯಿಸಿದ್ದು ಇದುವರೆಗಿನ ಶ್ರೇಷ್ಠ ಸಾಧನೆ ಎನಿಸಿತ್ತು. ವಿವರ ಪುಟ 9

ಚಿನ್ನ	ಬೆಳ್ಳಿ	ಕಂಚು
29	31	51

313 ಕೂಟದಲ್ಲಿ ಪಾಲ್ಗೊಂಡಿದ್ದ ಭಾರತದ ಕ್ರೀಡಾಪಟುಗಳು

17 ಪಾಲ್ಗೊಂಡಿದ್ದ ಕ್ರೀಡೆಗಳು

55 ಅಥ್ಲೆಟಿಕ್ಸ್‌ನಲ್ಲಿ ಗೆದ್ದ ಪದಕ

21 ಬ್ಯಾಡ್ಮಿಂಟನ್‌ನಲ್ಲಿ ಗೆದ್ದ ಪದಕ

ವಿಶ್ವಸಂಸ್ಥೆ ನಿರ್ಣಯದಿಂದ ಹೊರಗುಳಿದ ಭಾರತ

ವಿಶ್ವಸಂಸ್ಥೆ (ಪಿಟಿಐ): ಗಾಜಾ ಪಟ್ಟಿಯಲ್ಲಿ ಇಸ್ರೇಲ್– ಹಮಾಸ್ ತಕ್ಷಣ ಕದನ ವಿರಾಮವನ್ನು ಘೋಷಿಸಬೇಕು ಮತ್ತು ಮಾನವೀಯ ನೆರವಿಗೂ ಅನುವು ಮಾಡಿಕೊಡಬೇಕು ಎಂಬ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯದಿಂದ ಭಾರತ ಹೊರಗುಳಿದಿದೆ.

'ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆದ ದಾಳಿಯನ್ನು ನಿರ್ಣಯದಲ್ಲಿ ಖಂಡಿಸಿಲ್ಲ. ಭಯೋತ್ಪಾದನೆ ಮಾರಕ. ಅದಕ್ಕೆ ಗಡಿ, ರಾಷ್ಟ್ರೀಯತೆ, ಜನಾಂಗ ಎಂಬುದಿಲ್ಲ. ಭಯೋತ್ಪಾದನಾ ಕೃತ್ಯದ ಯಾವುದೇ ಸಮರ್ಥನೆಯಲ್ಲಿ ವಿಶ್ವ ಭಾಗಿಯಾಗಬಾರದು' ಎಂದು ಭಾರತ ಈ ಸಂದರ್ಭದಲ್ಲಿ ಹೇಳಿದೆ.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಂಗನವಾಡಿ ಮಕ್ಕಳಿಗಿಲ್ಲ ಮೊಟ್ಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಹಕಾರ ಕೋಳಿ ಒಕ್ಕೂಟದವರು ಹಾಗೂ ಇತರೆ ಗುತ್ತಿಗೆದಾರರು ದರ ಏರಿಕೆಯ ಕಾರಣ ನೀಡಿ ಅಂಗನವಾಡಿಗಳಿಗೆ ಮೊಟ್ಟೆ ಪೂರೈಕೆ ಸ್ಥಗಿತಗೊಳಿಸಿದ್ದಾರೆ.



ಇದರಿಂದ ರಾಜ್ಯದ 65,911 ಅಂಗನವಾಡಿ ಕೇಂದ್ರಗಳ 41 ಲಕ್ಷ ಮಕ್ಕಳು ಹಾಗೂ ಮಾತೃಪೂರ್ಣ ಯೋಜನೆಯಡಿ ಪೌಷ್ಟಿಕ ಆಹಾರ ಪಡೆಯುತ್ತಿರುವ ಗರ್ಭಿಣಿ, ಬಾಣಂತಿಯರಿಗೆ ಮೊಟ್ಟೆ ನೀಡಿಕೆಯಲ್ಲಿ ವ್ಯತ್ಯಯವಾಗಿದೆ. ಬಹುತೇಕ ತಾಲ್ಲೂಕುಗಳಲ್ಲಿ ಮೊಟ್ಟೆ ಸರಬರಾಜು ಮಾಡುವ ಗುತ್ತಿಗೆಯನ್ನು ಕರ್ನಾಟಕ ಸಹಕಾರ ಕೋಳಿ ಒಕ್ಕೂಟ ಪಡೆದಿದೆ. ಇದರಿಂದ ರಾಜ್ಯದಲ್ಲಿನ ಶೇ 80ರಷ್ಟು ಪೂರೈಕೆ ಸಂಪೂರ್ಣ ಸ್ಥಗಿತವಾಗಿದೆ.

'ಮೊಟ್ಟೆ ದರ ಹಾಗೂ ಸಾಗಾಣಿಕೆ ವೆಚ್ಚ ಎರಡರಲ್ಲೂ ಏರಿಕೆಯಾಗಿದೆ. ಇದರಿಂದ ಪೂರೈಕೆಯ ಜವಾಬ್ದಾರಿ ಹೊತ್ತವರು ನಷ್ಟದಲ್ಲಿದ್ದಾರೆ. ಮೊಟ್ಟೆ ದರದಲ್ಲಿ ಏರಿಕೆಯಾಗುತ್ತಿದ್ದು, ದರ ಪರಿಷ್ಕರಣೆ ಮಾಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಲಾಗಿತ್ತು. ಅವರಿಂದ ಸ್ಪಂದನೆ ಸಿಗದ ಕಾರಣ ಪೂರೈಕೆ ಸ್ಥಗಿತಗೊಳಿಸಲಾಗಿದೆ' ಎಂದು ವಿವರಿಸಿದರು ಒಕ್ಕೂಟದ ಅಧ್ಯಕ್ಷ ಡಿ.ಕೆ.ಕಾಂತರಾಜ್.

'ಪ್ರತಿ ಮೊಟ್ಟೆಗೆ ₹5.75ರಿಂದ ₹5.80 ನೀಡುತ್ತಿದ್ದಾರೆ. ಒಂದು ತಿಂಗಳಿನಿಂದ ಈ ದರ ₹6.50ರಿಂದ ₹7ರವರೆಗೆ ಏರಿಕೆಯಾಗಿದೆ. ಪ್ರತಿ ಮೊಟ್ಟೆಗೆ ₹1ರಿಂದ ₹1.25 ನಷ್ಟವಾಗುತ್ತಿದೆ. ನಷ್ಟ ಭರಿಸಲಾಗುತ್ತಿಲ್ಲ' ಎಂದು ಹೇಳಿದರು.

ಮೊಟ್ಟೆ ಪೂರೈಕೆ ಸ್ಥಗಿತವಾಗಿದ್ದರೂ, ಸ್ಥಳೀಯವಾಗಿ ಖರೀದಿಸಿ ವಿತರಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು (ಸಿಡಿಪಿಒ), ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಚಿಸಿದ್ದಾರೆ.

4ನೇ ಪುಟ ನೋಡಿ

ಸಪ್ನ ಬುಕ್ ಹೌಸ್ ಪುಸ್ತಕ ಕೊಡುಗೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಸಪ್ನ ಬುಕ್ ಹೌಸ್ ನ.1ರಂದು ಬೆಳಿಗ್ಗೆ 10 ಗಂಟೆಗೆ ಗಾಂಧಿನಗರದ ಮಳಿಗೆಯಲ್ಲಿ ಪುಸ್ತಕ ಜಾತ್ರೆ ಹಮ್ಮಿಕೊಂಡಿದ್ದು, ಅಂದು ಮಳಿಗೆಗೆ ಭೇಟಿ ನೀಡುವ ಪ್ರತಿಯೊಬ್ಬರಿಗೂ ಒಂದು ಪುಸ್ತಕವನ್ನು ಉಚಿತವಾಗಿ ನೀಡುವುದಾಗಿ ತಿಳಿಸಿದೆ.

ಪುಸ್ತಕ ಜಾತ್ರೆಯನ್ನು ಸಾಹಿತಿ ಕಮಲಾ ಹಂಪನಾ ಉದ್ಘಾಟಿಸಲಿದ್ದು, ಪುಸ್ತಕಗಳ ಉಚಿತ ವಿತರಣೆಗೆ ಸಾಹಿತಿ ದೊಡ್ಡರಂಗೇಗೌಡ ಚಾಲನೆ ನೀಡಲಿದ್ದಾರೆ. ಎಂ.ಎಸ್. ನರಸಿಂಹಮೂರ್ತಿ ಹಾಗೂ ಡುಂಡಿರಾಜ್ ಅವರಿಂದ ಹಾಡು–ಹರಟೆ ಹಮ್ಮಿಕೊಳ್ಳಲಾಗಿದೆ. ಚಲನಚಿತ್ರ ನಟಿ ಸಪ್ತಮಿ ಗೌಡ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಸಪ್ನ ಬುಕ್ ಹೌಸ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ತಿಳಿಸಿದ್ದಾರೆ.

ಹಂ.ಪ. ನಾಗರಾಜಯ್ಯ, ಎಚ್.ಎಸ್. ವೆಂಕಟೇಶಮೂರ್ತಿ, ಮಲ್ಲೇಪುರಂ ಜಿ. ವೆಂಕಟೇಶ್, ಎಸ್.ಜಿ. ಸಿದ್ಧರಾಮಯ್ಯ, ಬಿ.ಆರ್. ಲಕ್ಷ್ಮಣರಾವ್, ರಾ.ನಂ. ಚಂದ್ರಶೇಖರ್, ಡಿ.ವಿ. ಗುರುಪ್ರಸಾದ್, ಜೋಗಿ, ಎಸ್.ಕೆ. ಉಮೇಶ, ಹಿ.ಚಿ. ಬೋರಲಿಂಗಯ್ಯ, ವಸುಂಧರಾ ಭೂಪತಿ, ಎಚ್.ಎಲ್. ಪುಷ್ಪ ಸೇರಿದಂತೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಹಲವು ಪ್ರಮುಖರು ಭಾಗವಹಿಸುತ್ತಾರೆ ಎಂದು ಹೇಳಿದ್ದಾರೆ.

ಕನ್ನಡ ಪುಸ್ತಕಗಳ ಮೇಲೆ ಭಾರಿ ರಿಯಾಯಿತಿ, ಕಾಂಬೋ ಆಫರ್ ಸೇರಿದಂತೆ ಹಲವು ಕೊಡುಗೆಗಳನ್ನು ರಾಜ್ಯೋತ್ಸವ ಪ್ರಯುಕ್ತ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

‘ಭೂಮಿಕಾ ಕ್ಲಬ್’ನ 11ನೇ ಆವೃತ್ತಿ ಕಾರ್ಯಕ್ರಮದಲ್ಲಿ ಜಾನಪದ ವೈಭವ

ಒಂದೇ ಕಡೆ ಮಾಹಿತಿ, ಮನರಂಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನಪದ ವೈಭವ, ಪೌಷ್ಟಿಕ ಆಹಾರ ಸೇವನೆಯಿಂದ ದೊರೆಯುವ ಲಾಭಗಳು, ಹೃದಯದ ಆರೋಗ್ಯ ಕಾಪಾಡಿಕೊಳ್ಳುವ ಬಗೆ, ಒತ್ತಡ ನಿವಾರಣೆ, ಬೆಳಕಿನ ಹಬ್ಬದ ವೇಳೆ ಅಲಂಕಾರ ಮಾಡುವ ವಿಧಾನ... ಹೀಗೆ ಒಂದೇ ವೇದಿಕೆಯಲ್ಲಿ ಮಹಿಳೆಯರಿಗೆ ಹಲವು ಬಗೆಯ ಮಾಹಿತಿಗಳು ಲಭಿಸಿದವು.

ನಗರದ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಪತ್ರಿಕಾ ಬಳಗದಿಂದ ಮಣಿಪಾಲ್ ಆಸ್ಪತ್ರೆ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಭೂಮಿಕಾ ಕ್ಲಬ್ 11ನೇ ಆವೃತ್ತಿಯ ಕಾರ್ಯಕ್ರಮ ವೈವಿಧ್ಯಮಯವಾಗಿ ನಡೆಯಿತು. ಒಂದೇ ವೇದಿಕೆಯಲ್ಲಿ ಮನರಂಜನೆಯ ಜತೆಗೆ ಆರೋಗ್ಯ ಕಾಪಾಡಿಕೊಳ್ಳುವ ಕುರಿತೂ ಮಾಹಿತಿ ದೊರೆಯಿತು. ಇದಕ್ಕೆ ಇಡೀ ಸಭಾಂಗಣದಲ್ಲಿದ್ದ ಮಹಿಳೆಯರು ಸಾಕ್ಷಿಯಾದರು.

ನಟಿ ಪ್ರಿಯಾಂಕಾ ಉಪೇಂದ್ರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ‘ಉದ್ಯೋಗ, ಮನೆ ಕೆಲಸದ ಒತ್ತಡದಿಂದ ಮಹಿಳೆಯರು ತಮ್ಮ ಆರೋಗ್ಯ ಕಡೆಗಣಿಸುತ್ತಿದ್ದಾರೆ. ಇದರಿಂದ ಹೃದಯ ಸಂಬಂಧಿ ಕಾಯಿಲೆಗಳು ಮಹಿಳೆಯರಲ್ಲೂ ಹೆಚ್ಚುತ್ತಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಬದುಕಿನಲ್ಲಿ ಸಮತೋಲನ ಕಾಪಾಡಿಕೊಳ್ಳುವ ಅಗತ್ಯವಿದೆ. ಆಗ ಮಾತ್ರ ನೆಮ್ಮದಿಯ ಜೀವನ ನಡೆಸಲು ಸಾಧ್ಯ ಇದೆ’ ಎಂದು ಹೇಳಿದರು.



‘ಭೂಮಿಕಾ ಕ್ಲಬ್’ ಕಾರ್ಯಕ್ರಮದಲ್ಲಿ ಜಾನಪದ ಗಾಯನ ಕಾರ್ಯಕ್ರಮ ನಡೆಸಿಕೊಟ್ಟ ಅಪ್ಪಗೆರೆ ತಿಮ್ಮರಾಜು ಹಾಗೂ ತಂಡ – ಪ್ರಜಾವಾಣಿ ಚಿತ್ರ



ನಟಿ ಪ್ರಿಯಾಂಕಾ ಉಪೇಂದ್ರ ಮಾತನಾಡಿದರು

ಭೂಮಿಕಾ ಕ್ಲಬ್ presented by manipal hospitals LIFE'S ON

‘ಇದುವರೆಗೂ 50 ಚಿತ್ರಗಳಲ್ಲಿ ನಟಿಸಲು ಸಾಧ್ಯವಾಗಿದೆ. ಮದುವೆಯಾದ ಮೇಲೆ ಕುಟುಂಬದವರ ಪ್ರೋತ್ಸಾಹದಿಂದಲೇ 35 ಚಿತ್ರಗಳಲ್ಲಿ ನಟಿಸಲು ಸಾಧ್ಯ ಆಯಿತು. ಕೋಲ್ಕತ್ತ ಹಾಗೂ ವಿದೇಶದಲ್ಲಿ ಬೆಳೆದ ನನಗೆ, ಬೆಂಗಳೂರು ಅತ್ಯಂತ ಪ್ರೀತಿಯ ಊರು. ಮದುವೆಯಾದ ಕೆಲವೇ ದಿನಗಳಲ್ಲಿ ಅತ್ತೆಯ ಸಹಕಾರದಿಂದ ಕನ್ನಡ ಸಹ ಕಲಿತೆ. ಜನರು ನನ್ನನ್ನೂ ಅತ್ಯಂತ ಪ್ರೀತಿಯಿಂದಲೇ ಸ್ವೀಕರಿಸಿದರು. ಕರ್ನಾಟಕದ ಸಂಸ್ಕೃತಿ ಅಚ್ಚುಮೆಚ್ಚು’ ಎಂದರು.

‘ಉಪ್ಪಿ ಫೌಂಡೇಷನ್‌ನ ವತಿಯಿಂದ ಭವಿಷ್ಯದಲ್ಲಿ ಮತ್ತಷ್ಟು ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಿದ್ದೇವೆ. ನಗರ ಹಾಗೂ ಗ್ರಾಮೀಣ ಶಾಲೆಗಳಿಗೆ ನೆರವು ನೀಡುವ ಆಲೋಚನೆ ಇದೆ’ ಎಂದು ಹೇಳಿದರು.

ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು ತಂಡ ಪ್ರಸ್ತುತ ಪಡಿಸಿದ ಜಾನಪದ ವೈಭವವು ಮನಸೂರೆಗೊಳಿಸಿತು. ಭಾಗ್ಯಶ್ರೀ ಹಾಗೂ ವನಿತಾ ಅವರಿಗೆ ಸಾಥ್ ನೀಡಿದರು. ಗಾಯನಕ್ಕೆ ಪ್ರೇಕ್ಷಕರು ಮನಸೋತರು. ಇಡೀ ಸಭಾಂಗಣ ಮಹಿಳೆಯರಿಂದ ತುಂಬಿತ್ತು.

‘ಪೌಷ್ಟಿಕ ಆಹಾರ ಸೇವನೆ ವರದಾನ’



ವಾಣಿ ಕೃಷ್ಣ

ಹಬ್ಬ ಹಾಗೂ ಪಾರ್ಟಿ ವೇಳೆ ಆಹಾರ ಸೇವನೆ ಹೇಗಿರಬೇಕು ಎಂಬುದರ ಕುರಿತು ವರ್ತೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಪೌಷ್ಟಿಕ ಆಹಾರ ತಜ್ಞೆ ವಾಣಿ ಕೃಷ್ಣ ವಿಚಾರ ಮಂಡಿಸಿದರು.

ಗರ್ಭಿಣಿಯರು ಯಾವೆಲ್ಲ ಆಹಾರ ಪದಾರ್ಥ ಸೇವಿಸಬೇಕು, ಯಾವ ಆಹಾರದಿಂದ ಹೆಚ್ಚು ಪೌಷ್ಟಿಕಾಂಶ ಲಭಿಸಲಿದೆ ಎಂಬುದರ ಕುರಿತೂ ವಿವರಿಸಿದರು. ದೀಪಾವಳಿ ಹಬ್ಬಕ್ಕೆ ಅಲಂಕಾರ ಹೇಗಿದ್ದರೆ ಚೆಂದ ಎಂಬುದನ್ನು ಜತಿಂದರ್ ಸೈನಿ ತಿಳಿಸಿದರು.

‘ಎದೆ ನೋವು: ನಿರ್ಲಕ್ಷ್ಯ ಬೇಡ’



ಸುನಿಲ್ ದ್ವಿವೇದಿ

ಮಿಲ್ಲರ್ಸ್ ರಸ್ತೆಯ ಮಣಿಪಾಲ್ ಆಸ್ಪತ್ರೆ ಹೃದ್ರೋಗ ವಿಭಾಗದ ಸಲಹೆಗಾರ ಸುನಿಲ್ ದ್ವಿವೇದಿ ಅವರು ಮಹಿಳೆಯರ ಹೃದಯ ಆರೋಗ್ಯದ ಕುರಿತು ಮಾತನಾಡಿ, ‘ಎದೆಯ ಭಾಗದಲ್ಲಿ ನೋವು ಕಾಣಿಸಿಕೊಂಡರೆ ನಿರ್ಲಕ್ಷ್ಯ ತೋರಬಾರದು. ಧೂಮಪಾನ, ಅನುವಂಶೀಯತೆ, ವಿಪರೀತ ಮದ್ಯಸೇವನೆ, ಒತ್ತಡದ ಜೀವನ ಶೈಲಿ, ವಯಸ್ಸಿನ ಕಾರಣಕ್ಕೆ ಹೃದಯಾಘಾತ ಸಂಭವಿಸುವ ಸಾಧ್ಯತೆಯಿದೆ’ ಎಂದು ಎಚ್ಚರಿಸಿದರು.

‘ಜೀವನಶೈಲಿ ಬದಲಾವಣೆ ಮಾಡಿಕೊಳ್ಳುವ ಅಗತ್ಯ ಇದೆ. ಆಗಾಗ್ಗೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಉತ್ತಮ. ಪೌಷ್ಟಿಕ ಆಹಾರ ಸೇವನೆ ಮಾಡಬೇಕು. ಮೂಳೆಯ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು’ ಎಂದು ಸಲಹೆ ನೀಡಿದರು.

ಸುದ್ದಿ 2 ನಿಮಿಷ

‘ಈ ಹೊತ್ತಿಗೆ’ ಪ್ರಶಸ್ತಿ: ಕಥಾ–ಕವನ ಸಂಕಲನ ಆಹ್ವಾನ

ಬೆಂಗಳೂರು: ‘ಈ ಹೊತ್ತಿಗೆ’ ಟ್ರಸ್ಟ್ 2024ನೇ ಸಾಲಿನ ‘ಈ ಹೊತ್ತಿಗೆ ಪ್ರಶಸ್ತಿ’ಗಾಗಿ ಕನ್ನಡದ ಅಪ್ರಕಟಿತ ಕಥಾ ಸಂಕಲನ ಮತ್ತು ಕವನ ಸಂಕಲನಗಳನ್ನು ಆಹ್ವಾನಿಸಿದೆ.

ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಕಥಾ ಸಂಕಲನವು 8ರಿಂದ 10 ಕಥೆಗಳನ್ನು, ಕವನ ಸಂಕಲನವು 40ರಿಂದ 45 ಕವನಗಳನ್ನು ಒಳಗೊಂಡಿರಬೇಕು. ಪ್ರಶಸ್ತಿ ಘೋಷಣೆಯಾದ 30 ದಿನಗಳಲ್ಲಿ ಆಯ್ಕೆಯಾದ ಕೃತಿಯು ಮುದ್ರಣಗೊಳ್ಳಬೇಕು. ಆಗ ಮಾತ್ರ ಘೋಷಿತ ಬಹುಮಾನದ ಮೊತ್ತ ಹಾಗೂ ಪ್ರಶಸ್ತಿ ಫಲಕವನ್ನು ಈ ಹೊತ್ತಿಗೆಯ ‘ಹೊನಲು’ ಸಮಾರಂಭದಲ್ಲಿ ನೀಡಲಾಗುತ್ತದೆ. ಪ್ರಶಸ್ತಿ ಪಡೆದ ಕೃತಿಯನ್ನು ಮುದ್ರಿಸುವಾಗ ಮುಖಪುಟ ಹಾಗೂ ಒಳಪುಟದಲ್ಲಿ ಈ ಹೊತ್ತಿಗೆ (ಕಥೆ/ಕಾವ್ಯ) ಪ್ರಶಸ್ತಿ ವಿಜೇತ ಕೃತಿ ಎಂದು ಮುದ್ರಿಸಬೇಕು ಎಂದು ಟ್ರಸ್ಟ್‌ನ ಅಧ್ಯಕ್ಷೆ ಜಯಲಕ್ಷ್ಮಿ ಪಾಟೀಲ್ ತಿಳಿಸಿದ್ದಾರೆ.

ಅಪ್ರಕಟಿತ ಕಥಾ ಸಂಕಲನ ಮತ್ತು ಕವನ ಸಂಕಲನಗಳನ್ನು 2023ರ ನ.30 ರೊಳಗೆ ‘ಈ ಹೊತ್ತಿಗೆ’, #65, ಮುಗುಳ್ನಗೆ, 3ನೇ ಅಡ್ಡ ರಸ್ತೆ, ಪಿ.ಎನ್.ಬಿ. ನಗರ, ಕೋಣನಕುಂಟೆ, ಬೆಂಗಳೂರು–560062 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಂಪರ್ಕಕ್ಕೆ: 9611782621

‘ಮೆಟ್ರೊ ಫೀಡರ್ ಬಸ್ 300ಕ್ಕೆ ಹೆಚ್ಚಿಸಲು ಶೀಘ್ರ ಕ್ರಮ’



ಬೆಂಗಳೂರು: ಸದ್ಯ 121 ಮೆಟ್ರೊ ಫೀಡರ್ ಬಸ್‌ಗಳು ಸಂಚರಿಸುತ್ತಿದ್ದು ಏಪ್ರಿಲ್‌ನೊಳಗೆ ಇವುಗಳನ್ನು 300ಕ್ಕೆ ಹೆಚ್ಚಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬಿಟಿಎಂ ಬಡಾವಣೆ–ಬನಶಂಕರಿ ಮೆಟ್ರೊ ಫೀಡರ್ ಬಸ್‌ಗಳಿಗೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ಬಿಟಿಎಂ ಬಡಾವಣೆಯಿಂದ ಮಹದೇಶ್ವರನಗರ, ಮಡಿವಾಳ ಕೆರೆ, ಜೆ.ಪಿ.ನಗರ 3ನೇ ಹಂತ, ಡೆಲ್ಮಿಯಾ, ಜೆ.ಪಿ.ನಗರ 6ನೇ ಹಂತ ಮಾರ್ಗವಾಗಿ ಬನಶಂಕರಿಗೆ 2 ಬಸ್‌ಗಳ 44 ಟ್ರಿಪ್‌ಗಳನ್ನು ಆರಂಭಿಸಲಾಗಿದೆ. ಇದೂ ಸೇರಿದಂತೆ ನಗರದ ವಿವಿಧ ಮೆಟ್ರೊ ನಿಲ್ದಾಣಗಳಿಂದ 30 ಮಾರ್ಗಗಳಲ್ಲಿ 121 ಬಸ್‌ಗಳು 1874 ಟ್ರಿಪ್‌ಗಳಲ್ಲಿ ಸಂಚರಿಸುತ್ತಿವೆ. ಎಲ್ಲ ಮೆಟ್ರೊ ನಿಲ್ದಾಣಗಳಿಂದ ಕೊನೇ ಮೈಲಿ ಸಂಪರ್ಕ ನಮ್ಮ ಗುರಿ ಎಂದು ಮಾಹಿತಿ ನೀಡಿದರು.

ಬೆಂಗಳೂರು ನಗರ ಮತ್ತು ಹೊರವಲಯಗಳಲ್ಲಿ 5,596 ಬಸ್‌ಗಳು ನಿತ್ಯ 57,463 ಟ್ರಿಪ್ ನಡೆಸುತ್ತಿವೆ. ಮೆಟ್ರೊ ಫೀಡರ್ ಮಾರ್ಗಗಳಲ್ಲಿ ಕಾರ್ಯಾಚರಣೆಗೊಳಿಸುವ ಮಿನಿ ಬಸ್ಸುಗಳನ್ನು ವಿಶೇಷ ರೀತಿಯಲ್ಲಿ ಬ್ರ್ಯಾಂಡಿಂಗ್ ಮಾಡಲಾಗುವುದು ಎಂದು ಹೇಳಿದರು.

‘ಪುಸ್ತಕ ಸಂಸ್ಕೃತಿ ಉಳಿಸಲು ಹೋರಾಟ’

ಬೆಂಗಳೂರು: ‘ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಏಕಗವಾಕ್ಷಿ ಯೋಜನೆಯಡಿ ಮೂರು ವರ್ಷಗಳಿಂದ ಸಗಟು ಪುಸ್ತಕ ಖರೀದಿಸಿಲ್ಲ. ಹೀಗಾಗಿ, ಪುಸ್ತಕ ಸಂಸ್ಕೃತಿ ಉಳಿಸಲು ಕನ್ನಡದ ಮನಸ್ಸುಗಳೆಲ್ಲಾ ಸೇರಿ ಹೋರಾಡಬೇಕಾಗಿದೆ’ ಎಂದು ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ತಿಳಿಸಿದೆ.

‘ಯೋಜನೆಯಡಿ 2020ನೇ ಸಾಲಿನ ಪುಸ್ತಕ ಖರೀದಿಗೆ ಸಂಬಂಧಿಸಿ ಮುಖ್ಯಮಂತ್ರಿ, ಸಚಿವರು, ಸರ್ಕಾರದ ಕಾರ್ಯದರ್ಶಿ ಹಾಗೂ ನಿರ್ದೇಶಕರಿಗೆ ಮನವಿ ಸಲ್ಲಿಸುತ್ತಲೇ ಇದ್ದೇವೆ. ಆದರೂ ಖರೀದಿ ಈವರೆಗೂ ನಡೆದಿಲ್ಲ. ಪುಸ್ತಕ ಸಂಸ್ಕೃತಿಯ ಕತ್ತು ಹಿಸುಕುತ್ತಿರುವವರು ಯಾರು ಎನ್ನುವುದು ತಿಳಿಯುತ್ತಿಲ್ಲ. ಹಣ ಹೂಡಿಕೆ ಮಾಡಿ ಪುಸ್ತಕ ಪ್ರಕಟಿಸಿರುವ ಪ್ರಕಾಶಕರು ಹಾಗೂ ಲೇಖಕರು ರೋಸಿ ಹೋಗಿದ್ದಾರೆ. ಈ ಸಮಸ್ಯೆಗೆ ಪರಿಹಾರ ನೀಡುವವರು ಯಾರು? ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಕ್ರಮವಹಿಸಿ, ಮೂರು ವರ್ಷಗಳ ಪುಸ್ತಕ ಖರೀದಿಗೆ ಕ್ರಮವಹಿಸಬೇಕು’ ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಹಾಗೂ ಕಾರ್ಯದರ್ಶಿ ಆರ್. ದೊಡ್ಡೇಗೌಡ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಕಸಾಪ: ರಾಜ್ಯೋತ್ಸವ ಪ್ರಯುಕ್ತ ಪುಸ್ತಕ ಮೇಳ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ ಹಾಗೂ ‘ಸುವರ್ಣ ಕರ್ನಾಟಕ-50’ರ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನವೆಂಬರ್ ತಿಂಗಳು ಪೂರ್ತಿ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಮೇಳವನ್ನುಹಮ್ಮಿಕೊಂಡಿದೆ.

ಪುಸ್ತಕಗಳಿಗೆ ಶೇ 10 ರಿಂದ ಶೇ 75ರವರೆಗೆ ರಿಯಾಯಿತಿ ನೀಡಲಾಗುತ್ತದೆ. ಪರಿಷತ್ತಿನ ಎಲ್ಲಾ ಪ್ರಕಟಣೆಗಳು ಮಾರಾಟಕ್ಕೆ ಲಭ್ಯ. ಕನ್ನಡ ರತ್ನಕೋಶ ಮತ್ತು ಸಂಕ್ಷಿಪ್ತ ಕನ್ನಡ ನಿಘಂಟು, ಸಂಕ್ಷಿಪ್ತ ಕನ್ನಡ ಇಂಗ್ಲಿಷ್ ನಿಘಂಟು, ಬೃಹತ್ ಕನ್ನಡ-ಕನ್ನಡ ನಿಘಂಟು, ಪರೀಕ್ಷೆ ಪುಸ್ತಕಗಳು, ಗದ್ಯಾನುವಾದ, ಶತಮಾನೋತ್ಸವ ಮಾಲಿಕೆ ಪುಸ್ತಕಗಳು, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಎಲ್ಲಾ ಸಂಪುಟಗಳು, ಮಹಿಳಾ ಸಾಹಿತ್ಯ ಸಂಪುಟಗಳು, ದಲಿತ ಸಾಹಿತ್ಯ ಸಂಪುಟಗಳು, ಜೀವನ ಚರಿತ್ರೆಗಳು, ಪಿಎಚ್.ಡಿ ಪುಸ್ತಕಗಳು, ಜಿಲ್ಲಾ ಸಾಹಿತ್ಯ ಸಮ್ಮೇಳನದ ಪುಸ್ತಕಗಳು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಗಳು ಹಾಗೂ ಇತರೆ ಪ್ರಕಟಣೆಗಳ ಪ್ರದರ್ಶನ ಹಾಗೂ ಮಾರಾಟ ಇರುತ್ತದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ನ.1ರಿಂದ ನ.30ರವರೆಗೆ ರಜಾ ದಿನಗಳಲ್ಲಿಯೂ ಬೆಳಿಗ್ಗೆ 9ರಿಂದ ಸಂಜೆ 7 ಗಂಟೆಯವರೆಗೆ ಚಾಮರಾಜಪೇಟೆಯಲ್ಲಿರುವ ಕಸಾಪ ಕೇಂದ್ರ ಕಚೇರಿ ಆವರಣದಲ್ಲಿ ಈ ಮೇಳ ನಡೆಯುತ್ತದೆ.

ನಿರಂಜನಾರಾಧ್ಯ ಸೇರಿ ಹತ್ತು ಮಂದಿಗೆ ‘ಪರಮೇಶ್ವರ ಪುಲಕೇಶಿ ಪ್ರಶಸ್ತಿ’

ಬೆಂಗಳೂರು: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ನೀಡುವ 2023ನೇ ಸಾಲಿನ ‘ಶ್ರೀ ಪರಮೇಶ್ವರ ಪುಲಕೇಶಿ ಪ್ರಶಸ್ತಿ’ಗೆ ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಸೇರಿ ಹತ್ತು ಮಂದಿ ಆಯ್ಕೆಯಾಗಿದ್ದಾರೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಗುರುದೇವ್ ನಾರಾಯಣಕುಮಾರ್, ‘ಪ್ರಾಧ್ಯಾಪಕ ರೇಣುಕಾಪ್ರಸಾದ್, ಶಾಸನತಜ್ಞ ದೇವರಕೊಂಡಾರೆಡ್ಡಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಎಂ., ಪರಿಸರ ಕಾರ್ಯಕರ್ತ ಅಖಿಲೇಶ್ ಚಿಪ್ಪಿ, ಅರಣ್ಯಾಧಿಕಾರಿ ಶಿಲ್ಪಾ ಎಸ್.ಎಲ್., ಸಂಗೀತ ಕಲಾವಿದ ಭಾಸ್ಕರ್ ಎಸ್., ಚಿತ್ರಕಲಾವಿದ ಬಿ. ಜಯರಾಂ, ಪತ್ರಕರ್ತ ಸೋಮಸುಂದರರೆಡ್ಡಿ ಹಾಗೂ ಚಲನಚಿತ್ರ ನಟಿ ಭೂಮಿಕಾ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ’ ಎಂದು ಹೇಳಿದರು.

‘ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ನ.1ರಂದು ಬನ್ನಪ್ಪ ಆಟದ ಮೈದಾನದಲ್ಲಿ ನಿರ್ಮಿಸಿರುವ ಪರಮೇಶ್ವರ ಪುಲಕೇಶಿ ಮಹಾಮಂಟಪದ ಜಿ. ನಾರಾಯಣ ಕುಮಾರ್ ವೇದಿಕೆಯಲ್ಲಿ ಬೆಳಿಗ್ಗೆ 10ಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಪ್ರಶಸ್ತಿಗೆ ಆಯ್ಕೆಯಾದವರಿಗೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಿಸಲಾಗುತ್ತದೆ’ ಎಂದರು.

ಸಂಕ್ಷಿಪ್ತ ಸುದ್ದಿ

ದಸರಾ ಸ್ತಬ್ಧಚಿತ್ರ ಪ್ರಶಸ್ತಿ ಪ್ರಕಟ

ಮೈಸೂರು: ಇಲ್ಲಿ ದಸರಾ ಅಂಗವಾಗಿ ನಡೆದ ವಿಜಯದಶಮಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸ್ತಬ್ಧಚಿತ್ರಗಳಿಗೆ ಬಹುಮಾನ ಪ್ರಕಟಿಸಲಾಗಿದೆ.

ಜಿಲ್ಲೆಗಳ ವಿಭಾಗದಲ್ಲಿ ಧಾರವಾಡ, ಚಿಕ್ಕಮಗಳೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಸ್ತಬ್ಧಚಿತ್ರಗಳು ಬಹುಮಾನ ಗಳಿಸಿವೆ. ಹಾಸನ, ಮಂಡ್ಯ ಹಾಗೂ ಶಿವಮೊಗ್ಗ ಪ್ರೋತ್ಸಾಹಕರ ಬಹುಮಾನ ಪಡೆದಿವೆ.

ಇಲಾಖೆ ಹಾಗೂ ನಿಗಮಗಳ ವಿಭಾಗದಲ್ಲಿ ಪ್ರವಾಸೋದ್ಯಮ ಇಲಾಖೆ, ಕಾವೇರಿ ನೀರಾವರಿ ನಿಗಮ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ‘ಉತ್ತಮ ಸ್ತಬ್ಧಚಿತ್ರ’ ಬಹುಮಾನ ಗೆದ್ದಿವೆ. ಕರ್ನಾಟಕ ಸಹಕಾರಿ ಹಾಗೂ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) ಪ್ರೋತ್ಸಾಹಕರ ಬಹುಮಾನ ಪಡೆದಿದೆ ಎಂದು ಪ್ರಕಟಣೆ ತಿಳಿಸಿದೆ.

ಕೆಎನ್‌ಎನ್‌ಎಲ್ ಎಂ.ಡಿ ಹುದ್ದೆಗೆ ರಾಜೇಶ್ ವರ್ಗ

ಬೆಂಗಳೂರು: ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿರುವ ಕರ್ನಾಟಕ ನೀರಾವರಿ ನಿಗಮದ (ಕೆಎನ್‌ಎನ್‌ಎಲ್) ಉತ್ತರ ವಲಯ (ಬೆಳಗಾವಿ) ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿರುವ ರಾಜೇಶ್ ಅಮ್ಮಿನಭಾವಿ ಅವರನ್ನು ಇದೇ ನಿಗಮದ ವ್ಯವಸ್ಥಾಪಕರ ಹುದ್ದೆಗೆ ವರ್ಗಾವಣೆ ಮಾಡಿ ಶುಕ್ರವಾರ ಆದೇಶ ಹೊರಡಿಸಲಾಗಿದೆ.

ದೀರ್ಘ ಕಾಲದಿಂದ ಕೆಎನ್‌ಎನ್‌ಎಲ್ ವ್ಯವಸ್ಥಾಪಕರ ಹುದ್ದೆಯಲ್ಲಿರುವ ಮಲ್ಲಿಕಾರ್ಜುನ ಗುಂಗೆ ಅವರು ಇದೇ ಮಂಗಳವಾರ (ಅಕ್ಟೋಬರ್ 31) ವಯೋನಿವೃತ್ತಿ ಹೊಂದುತ್ತಿದ್ದಾರೆ. ಅವರ ನಿವೃತ್ತಿಯಿಂದ ತೆರವಾಗುವ ಹುದ್ದೆಗೆ ರಾಜೇಶ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ವರ್ಗಾವಣೆ ಮಾಡುವಂತೆ ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅದಕ್ಕೆ ಒಪ್ಪಿಗೆ ನೀಡಿದ್ದರು.

ಸಿಜಿಐ ಪ್ರಾಯೋಜಕತ್ವದಲ್ಲಿ ಬಿ–ಪ್ಯಾಕ್ ನಡೆಸಿದ ‘ಬಿ–ಸೇಫ್ ಕ್ಷೇತ್ರ’ ಸಮೀಕ್ಷೆಯ ವರದಿ ಬಿಡುಗಡೆ

ಸುರಕ್ಷತೆಗೆ ಬೀದಿ ದೀಪಗಳೇ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೀದಿ ದೀಪಗಳು ರಾಜಧಾನಿಯಲ್ಲಿ ಮಹಿಳಾ ಸುರಕ್ಷತೆಗೆ ಸವಾಲಾಗಿವೆ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಶೇ 54ರಷ್ಟು ಬೀದಿ ದೀಪಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಹೆಬ್ಬಾಳ ಕ್ಷೇತ್ರದಲ್ಲಿ ಈ ಪ್ರಮಾಣ ಶೇ 38ರಷ್ಟಿದೆ’ ಎಂದು ಬಿ-ಪ್ಯಾಕ್‌ನ ‘ಬಿ-ಸೇಫ್ ಕ್ಷೇತ್ರ’ ಸಮೀಕ್ಷಾ ವರದಿ ಹೇಳಿದೆ.

ಬಿ–ಪ್ಯಾಕ್ ಕೆನಡಾದ ಮಾಹಿತಿ ತಂತ್ರಜ್ಞಾನ ಕಂಪನಿ ಸಿಜಿಐ ಪ್ರಾಯೋಜಕತ್ವದಲ್ಲಿ ಈ ಸಮೀಕ್ಷೆ ನಡೆಸುತ್ತಿದೆ. ಎರಡನೇ ಕಂತಿನಲ್ಲಿ ದಾಸರಹಳ್ಳಿಯ 12 ವಾರ್ಡ್‌ಗಳು ಮತ್ತು ಹೆಬ್ಬಾಳದ ಎಂಟು ವಾರ್ಡ್‌ಗಳ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಲಾಗಿದೆ.

ಅಂಗನವಾಡಿ ಕೇಂದ್ರಗಳು, ಬಸ್ ನಿಲ್ದಾಣಗಳು, ಉದ್ಯಾನಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪೊಲೀಸ್ ಠಾಣೆಗಳು, ಸಾರ್ವಜನಿಕ ಶೌಚಾಲಯಗಳು, ಬೀದಿಗಳು ಸೇರಿದಂತೆ 298 ಸಾರ್ವಜನಿಕ ಸ್ಥಳಗಳಲ್ಲಿ ಈ ಸಮೀಕ್ಷೆ ನಡೆದಿದೆ. ಮಹಿಳೆಯರ ಸುರಕ್ಷತೆಗೆ ಕ್ರಿಯಾಯೋಜನೆ ರೂಪಿಸಲು ಸಮೀಕ್ಷಾ ವರದಿ ನೆರವಾಗಲಿದೆ ಎಂದು ಬಿ- ಪ್ಯಾಕ್ ತಿಳಿಸಿದೆ.

ವರದಿಯಲ್ಲಿ ಏನಿದೆ?’: ದಾಸರಹಳ್ಳಿ ಕ್ಷೇತ್ರದಲ್ಲಿ ಶೇ 58ರಷ್ಟು ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಬಸ್ ನಿಲ್ದಾಣಗಳು ಪ್ರಯಾಣಿಕ ಸ್ನೇಹಿ ಆಗಬೇಕು. ಅಂಗನವಾಡಿ ಕೇಂದ್ರಗಳನ್ನು ಪೂರ್ಣ ಹಗಲು ಆರೈಕೆ ಕೇಂದ್ರಗಳನ್ನಾಗಿ ವಿಸ್ತರಿಸಬೇಕು. ಉದ್ಯಾನಗಳ ಆವರಣ ಮತ್ತು ಸುತ್ತಮುತ್ತಲಿನಲ್ಲಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಹೆಚ್ಚಿಸಬೇಕು. ಭದ್ರತಾ ಸಿಬ್ಬಂದಿ ನೇಮಿಸಬೇಕು. ಸಾರ್ವಜನಿಕ ಶೌಚಾಲಯಗಳನ್ನು ದಿನವಿಡೀ ತೆರೆಯಬೇಕು ಮತ್ತು ಸ್ಯಾನಿಟರಿ ಪ್ಯಾಡ್‌ಗಳನ್ನು ಒದಗಿಸಬೇಕು.

ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ಶೇ 38ರಷ್ಟು ಬೀದಿ ದೀಪಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಬಸ್ ನಿಲ್ದಾಣಗಳು ಮತ್ತು ಸುತ್ತಮುತ್ತ ಮೂಲಸೌಕರ್ಯ ಸುಧಾರಣೆ ಆಗಬೇಕು. ಉದ್ಯಾನಗಳಲ್ಲಿ ಸಿಸಿಟಿವಿ ಕ್ಯಾಮೆರಾ ಮತ್ತು ಭದ್ರತೆ ಹೆಚ್ಚಿಸಬೇಕು. ಉದ್ಯೋಗಸ್ಥ ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗಿ ಅಂಗನವಾಡಿಗಳಲ್ಲಿ ಸುಧಾರಣೆ ತರಬೇಕು. ಸಾರ್ವಜನಿಕ ಶೌಚಾಲಯಗಳನ್ನು ನಿರಂತರವಾಗಿ ತೆರೆದಿಟ್ಟು, ಸ್ಯಾನಿಟರಿ ಪ್ಯಾಡ್ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

ನಿವೃತ್ತ ಐಪಿಎಸ್ ಅಧಿಕಾರಿ ಜೀಜಾ ಹರಿ ಸಿಂಗ್ ವರದಿ ಬಿಡುಗಡೆ ಮಾಡಿದರು. ಸಿಜಿಐನ ಹಿರಿಯ ಉಪಾಧ್ಯಕ್ಷ ರಾಹುಲ್ ಫೋಡ್ಕೆ, ಬಿ- ಸೇಫ್‌ನ ಕಾರ್ಯಕ್ರಮ ಮುಖ್ಯಸ್ಥೆ ಚಿತ್ರಾ ತಲ್ವಾರ್ ಉಪಸ್ಥಿತರಿದ್ದರು. ವರದಿ ಕುರಿತು ಚರ್ಚಾಗೋಷ್ಠಿಯೂ ನಡೆಯಿತು.

‘ನಗರದೆಲ್ಲೆಡೆ ವಿಸ್ತರಿಸಬೇಕು’

‘ನಾನು ಪೊಲೀಸ್ ಇಲಾಖೆಯಲ್ಲಿ ಸೇವೆಯಲ್ಲಿದ್ದ ಅವಧಿಯಲ್ಲಿ ಮಹಿಳೆಯರ ಮೇಲೆ ದಾಳಿ ನಡೆಯುತ್ತಿದ್ದುದನ್ನು ಕಂಡಿದ್ದೇನೆ. ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡುವ ಪ್ರಯತ್ನ ಆಗಬೇಕು ಎಂದು ಬಯಸುತ್ತಿದ್ದೆವು. ಈಗ ಬಿ–ಸೇಫ್‌ನಿಂದ ಅಂತಹ ಕೆಲಸ ಆಗುತ್ತಿದೆ. ಇದು ನಗರದ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೂ ವಿಸ್ತರಣೆಯಾಗಬೇಕು’ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಜೀಜಾ ಹರಿ ಸಿಂಗ್ ಹೇಳಿದರು.

‘ಕರ್ತವ್ಯಪಥಕ್ಕೆ 6,000 ಪಂಚಾಯಿತಿಗಳ ಮಣ್ಣು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುತಾತ್ಮರ ಗೌರವಾರ್ಥ ದೆಹಲಿಯ ಕರ್ತವ್ಯಪಥದಲ್ಲಿ ನಿರ್ಮಾಣವಾಗುವ ಅಮೃತ ಉದ್ಯಾನ ಸ್ಥಳಕ್ಕೆ ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಂದ ಮಣ್ಣು ಸಂಗ್ರಹಿಸಲಾಗಿದೆ ಎಂದು ಮಾಜಿ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದೇಶದಲ್ಲಿ 7,500 ಪುಣ್ಯ ಕ್ಷೇತ್ರಗಳೂ ಸೇರಿ ಎರಡು ಲಕ್ಷಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಿಂದ ಮಣ್ಣು ಸಂಗ್ರಹಿಸಲಾಗಿದೆ. ರಾಜ್ಯದ 6,000 ಗ್ರಾಮ ಪಂಚಾಯಿತಿಗಳಿಂದ ಸಂಗ್ರಹಿಸಿರುವ ಮಣ್ಣು ಸೋಮವಾರ ದೆಹಲಿಗೆ ತಲುಪಲಿದೆ’ ಎಂದರು.

ಸೆ.3ರಿಂದ ಶುರುವಾದ ಮಣ್ಣು ಸಂಗ್ರಹ ಅಭಿಯಾನ ಅ. 31ರವರೆಗೂ ನಡೆಯುತ್ತಿದೆ. ಅಮೃತವನಕ್ಕೆ ಮಣ್ಣು ಸಮರ್ಪಿಸುವ ಕಾರ್ಯಕ್ರಮ ದೆಹಲಿಯಲ್ಲಿ ಮಂಗಳವಾರ ನಡೆಯಲಿದೆ. ರಾಜ್ಯದ 2ಸಾವಿರಕ್ಕೂ ಹೆಚ್ಚು ಯುವಕ, ಯುವತಿಯರು ಸೇರಿ ದೇಶದ ವಿವಿಧೆಡೆಯಿಂದ ಲಕ್ಷಕ್ಕೂ ಹೆಚ್ಚು ಯುವಕ, ಯುವತಿಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಜಗದೀಶ ಹಿರೇಮನಿ ಮಾತನಾಡಿ, ‘ರಾಜ್ಯದಲ್ಲಿ ಈವರೆಗೆ 1,250 ಅಮೃತ ವನಗಳನ್ನು ನಿರ್ಮಿಸಲಾಗಿದೆ’ ಎಂದರು.

₹1.46 ಕೋಟಿ ವಿದೇಶಿ ಸಿಗರೇಟ್ ನಾಶ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆಯಲಾಗಿದ್ದ ವಿವಿಧ ಬ್ರ್ಯಾಂಡ್‌ಗಳ ಒಟ್ಟು 7.30 ಲಕ್ಷ ವಿದೇಶಿ ಸಿಗರೇಟ್‌ಗಳನ್ನು ಶನಿವಾರ ಬೆಂಕಿಗೆ ಹಾಕಿ ನಾಶ ಮಾಡಲಾಗಿದೆ. ನಾಶ ಪಡಿಸಿದ ಸಿಗರೇಟ್‌ಗಳ ಒಟ್ಟು ಮೌಲ್ಯ ₹1.46 ಕೋಟಿ ಎಂದು ಅಂದಾಜಿಸಲಾಗಿದೆ.

ವಾರ್ಡ್ ಹೆಸರು ಬದಲು: ಪ್ರತಿಭಟನೆ

ಬಸವನಗುಡಿಗೆ ‘ದೊಡ್ಡ ಗಣಪತಿ’ ಹೆಸರು– ಸ್ಥಳೀಯ ನಾಗರಿಕರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್ ಮರು ವಿಂಗಡಣೆಯಲ್ಲಿ ‘ಬಸವನಗುಡಿ’ ವಾರ್ಡ್ ಹೆಸರನ್ನು ‘ದೊಡ್ಡ ಗಣಪತಿ’ ಎಂದು ಬದಲಿಸಿರುವುದನ್ನು ವಿರೋಧಿಸಿ ಸ್ಥಳೀಯ ನಾಗರಿಕರು ಶನಿವಾರ ಶಾಂತಿಯುತ ನಡಿಗೆ ಮೂಲಕ ಪ್ರತಿಭಟಿಸಿದರು.

ನೆಟ್ಟಕಲ್ಲಪ್ಪ ಸರ್ಕಲ್‌ನಲ್ಲಿರುವ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಪ್ರಾರ್ಥಿಸಿ ಕಾಯಿ ಒಡೆದು ನಡಿಗೆಗೆ ಚಾಲನೆ ನೀಡಲಾಯಿತು. ಬಸವನೊಂದಿಗೆ (ಎತ್ತು) ಸ್ಥಳೀಯರು ವಾರ್ಡ್‌ನ ವಿವಿಧ ಬೀದಿಗಳಲ್ಲಿ ಸಂಚರಿಸಿದರು. ‘ಬಸವನಗುಡಿ ಬಿಡಲ್ಲ’, ‘ನಮ್ಮ ಹೆಮ್ಮೆ ನಮ್ಮ ಬಸವನಗುಡಿ ವಾರ್ಡ್’, ‘ನಮ್ದೇ ನಮ್ದೇ ಬಸವನಗುಡಿ’, ‘ಎಂದೆಂದಿಗೂ ಮುಂದೆಂದಿಗೂ ಬಸವನಗುಡಿ’ ಮುಂತಾದ ಘೋಷಣೆಗಳನ್ನು ಕೂಗಿದರು.

ಆಕ್ರೋಶ: ನಡಿಗೆ ಎನ್.ಆರ್. ಕಾಲೊನಿ ತಲುಪಿದಾಗ ಶಾಸಕ ರವಿಸುಬ್ರಹ್ಮಣ್ಯ ಅವರು ಬಂದು ನಡಿಗೆಗೆ ಬೆಂಬಲ ಸೂಚಿಸಿದರು. ‘ಅವರನ್ನು ಕರೆದಿಲ್ಲ. ಪ್ರಚಾರಕ್ಕಾಗಿ ಬಂದಿದ್ದಾರೆ’ ಎಂದು ಈ ಸಂದರ್ಭದಲ್ಲಿ ಸ್ಥಳೀಯ ನಿವಾಸಿ ಸತ್ಯಲಕ್ಷ್ಮಿ ರಾವ್ ಆಕ್ರೋಶ ವ್ಯಕ್ತಪಡಿಸಿದರು.

ಹೆಸರು ಬದಲಾವಣೆ ಬೇಡ: ‘ಸ್ಥಳೀಯ ಶಾಸಕನಾದ ನನ್ನ ಗಮನಕ್ಕೂ ತರದೇ ವಾರ್ಡ್ ಹೆಸರನ್ನು ಬದಲಾಯಿಸಲಾಗಿದೆ. ನಗರದ ಹಲವೆಡೆ ಈ ರೀತಿ ಮಾಡಿದ್ದಾರೆ. ಬಸವನಗುಡಿ ವಾರ್ಡ್ ಅನ್ನು ದೊಡ್ಡ ಗಣಪತಿ ವಾರ್ಡ್ ಎಂದು, ಪಕ್ಕದ ಹನುಮಂತನಗರ ವಾರ್ಡ್ ಅನ್ನು ಗವಿ ಗಂಗಾಧರೇಶ್ವರ ವಾರ್ಡ್ ಎಂದು, ಗಿರಿನಗರ ವಾರ್ಡ್ ಅನ್ನು ಸ್ವಾಮಿ ವಿವೇಕಾನಂದ ವಾರ್ಡ್ ಎಂದು ಬದಲಾಯಿಸಿದ್ದಾರೆ. ಯಾರಲ್ಲಿಯೂ ಚರ್ಚೆ ನಡೆಸದೇ ಏಕಾಏಕಿ ಈ ರೀತಿ ಮಾಡಿದ್ದಾರೆ’ ಎಂದು ಶಾಸಕ ರವಿಸುಬ್ರಹ್ಮಣ್ಯ ದೂರಿದರು.

‘ಬಿಬಿಎಂಪಿ ಆಯುಕ್ತ, ಸರ್ಕಾರದ ಕಾರ್ಯದರ್ಶಿ, ಮುಖ್ಯಮಂತ್ರಿಯ ಗಮನಕ್ಕೂ ತಂದಿದ್ದೇನೆ. ಚಳಿಗಾಲದ ಅಧಿವೇಶನದಲ್ಲಿ ಈ ಬಗ್ಗೆ ಗಮನ ಸೆಳೆಯುತ್ತೇನೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉತ್ತರ ನೀಡಬೇಕಾಗುತ್ತದೆ’ ಎಂದರು.

ಎನ್.ಆರ್. ಕಾಲೊನಿಯ ಅಂಬಾ ಭವಾನಿ ದೇವಸ್ಥಾನ, ಬಿಎಂಟಿಸಿ ಬಸ್ ನಿಲ್ದಾಣದ ಎದುರು ರಸ್ತೆಯ ಮೂಲಕ ದೊಡ್ಡ ಬಸವಣ್ಣನ ದೇವಾಲಯದ ವರೆಗೆ ನಡಿಗೆ ನಡೆಯಿತು.



ಬಸವನಗುಡಿ ವಾರ್ಡ್‌ನ ಹೆಸರು ಬದಲಾಯಿಸಿರುವುದನ್ನು ವಿರೋಧಿಸಿ ಸ್ಥಳೀಯ ನಿವಾಸಿಗಳು ಶನಿವಾರ ಶಾಂತಿಯುತ ನಡಿಗೆ ಮೂಲಕ ಪ್ರತಿಭಟನೆ ನಡೆಸಿದರು

ಬ್ಯಾಂಕಿಗೆ ವಂಚನೆ ಮೂವರ ಬಂಧನ

ನವದೆಹಲಿ / ಚಂಡೀಗಢ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಚಂಡೀಗಢ ಮೂಲದ ಫಾರ್ಮಾ ಕಂಪನಿ ಪ್ಯಾರಾಬೋಲಿಕ್ ಡ್ರಗ್ಸ್‌ನ ಇಬ್ಬರು ಪ್ರವರ್ತಕರು ಮತ್ತು ಆ ಕಂಪನಿಯ ಲೆಕ್ಕ ಪರಿಶೋಧಕನನ್ನು (ಸಿಎ) ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿದ್ದಾರೆ.

ಬ್ಯಾಂಕ್ ವಂಚನೆ ಪ್ರಕರಣದ ತನಿಖೆಗೆ ಸಂಬಂಧಿಸಿ, ಪ್ಯಾರಾಬೋಲಿಕ್ ಡ್ರಗ್ಸ್ ಪ್ರವರ್ತಕರಾದ ವಿನೀತ್ ಗುಪ್ತಾ ಮತ್ತು ಪ್ರಣವ್ ಗುಪ್ತಾ ಹಾಗೂ ಸಿಎ ಎಸ್.ಕೆ. ಬನ್ಸಾಲ್ ಅವರನ್ನು ಸುದೀರ್ಘ ವಿಚಾರಣೆಯ ನಂತರ, ಪಂಚಕುಲದ ವಿಶೇಷ ಪಿಎಂಎಲ್‌ಎ ಕೋರ್ಟ್ ಆದೇಶದಂತೆ ಇ.ಡಿ ಶನಿವಾರ ತನ್ನ ವಶಕ್ಕೆ ತೆಗೆದುಕೊಂಡಿದೆ.

ದೆಹಲಿಯ ಅಶೋಕ ವಿಶ್ವವಿದ್ಯಾನಿಲಯದ ಕಾರ್ಪೊರೇಟ್ ಆಫೀಸ್ ಮತ್ತು ನೋಂದಾಯಿತ ಕಚೇರಿಗಳು ಮತ್ತು ಹರಿಯಾಣದ ಸೋನೆಪತ್‌ನಲ್ಲಿರುವ ಕ್ಯಾಂಪಸ್ ಸೇರಿದಂತೆ ವಿವಿಧೆಡೆ ಇ.ಡಿ ಎರಡನೇ ದಿನವೂ ತನ್ನ ಶೋಧ ಮುಂದುವರೆಸಿತು. ವಿನೀತ್ ಗುಪ್ತಾ ಮತ್ತು ಪ್ರಣವ್ ಗುಪ್ತಾ ಅವರು ಅಶೋಕ ವಿಶ್ವವಿದ್ಯಾನಿಲಯದ ಸಹ ಸಂಸ್ಥಾಪಕರಾಗಿದ್ದಾರೆ.



ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ಸಚಿವ ನಾರಾಯಣ ರಾಣೆ ಪ್ರಧಾನಮಂತ್ರಿ ರೋಜ್‌ಗಾರ್ ಮೇಳ ಕಾರ್ಯಕ್ರಮದ ಅಡಿಯಲ್ಲಿ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಿದರು.

250 ಮಂದಿಗೆ ನೇಮಕ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಮಂತ್ರಿ ರೋಜ್‌ಗಾರ್ ಮೇಳ ಕಾರ್ಯಕ್ರಮದ ಅಡಿಯಲ್ಲಿ 250 ಮಂದಿಗೆ ನೇಮಕಾತಿ ಆದೇಶಗಳನ್ನು ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ನಾರಾಯಣ ರಾಣೆ ಶನಿವಾರ ವಿತರಿಸಿದರು.

ಉದ್ಯೋಗ ಮೇಳದ 10ನೇ ಕಂತಿನ ಕಾರ್ಯಕ್ರಮ ಇದಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ನೇಮಕಾತಿ ಮಾಡಿಕೊಳ್ಳುತ್ತಿವೆ.

ಅಮೃತ ಕಲಶ ರೈಲು: ‘ಮೇರಿ ಮಾಟಿ ಮೇರಾ ದೇಶ್’ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಅನುಕೂಲವಾಗಲಿ ಎಂದು ಶುಕ್ರವಾರ ಅಮೃತ ಕಲಶ ಯಾತ್ರೆ ವಿಶೇಷ ರೈಲು ಹೊರಟಿತ್ತು. ಶನಿವಾರ ಸಂಜೆ ಎರಡನೇ ಅಮೃತ ಕಲಶ ವಿಶೇಷ ರೈಲು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಹೊರಟಿತು.

ಮನೆಗಳಿಂದ ಸಂಗ್ರಹಿಸಿದ್ದ ಮಣ್ಣು ಇದ್ದ ಅಮೃತ ಕಲಶಗಳೊಂದಿಗೆ ಜನರು, ನೆಹರೂ ಯುವ ಕೇಂದ್ರ ಸಂಘಟನೆಯ ಸ್ವಯಂಸೇವಕರು, ಬೆಂಗಾವಲು ಅಧಿಕಾರಿಗಳು ತೆರಳಿದರು.

ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಅಭಿಮತ

ಸಾಮಾನ್ಯರಿಗೆ ಸಾಹಿತ್ಯ ತಲುಪಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಡಿತವರ್ಗಕ್ಕೆ ಮಾತ್ರವಲ್ಲದೆ ಜನಸಾಮಾನ್ಯರಿಗೂ ತಲುಪುವಂಥ ಸಾಹಿತ್ಯ ಇಂದಿನ ಅಗತ್ಯ. ಸಾಹಿತಿಗಳು ಸಮಾಜದ ಬಗ್ಗೆ ಯೋಚನೆ ಮಾಡಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ತಿಳಿಸಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಆದಿಕವಿ ಪುರಸ್ಕಾರ ಹಾಗೂ ವಾಗ್ದೇವಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಅತ್ಯಂತ ಸರಳ ಕನ್ನಡದಲ್ಲಿ ಕೃತಿಗಳನ್ನು ರಚಿಸಿ ಅದನ್ನು ಸಮಾಜದ ತಳಮಟ್ಟದವರೆಗೂ ತಲುಪಿಸುವ ಕೆಲಸ ಆಗಬೇಕು. ಇದರಿಂದ ಭಾರತೀಯ ಪ್ರಜ್ಞೆ ಮೂಡಿಸಲು ಸಾಧ್ಯ’ ಎಂದರು.

‘ಟಿವಿ, ಮೊಬೈಲ್, ಕಂಪ್ಯೂಟರ್ ಮೊದಲಾದ ಮಾಧ್ಯಮಗಳು ಆಧುನಿಕ ಜಗತ್ತನ್ನು ಆಳುತ್ತಿವೆ. ಅವುಗಳ ಬಳಕೆಯನ್ನು ದೂರುವ ಬದಲು ಆ ಎಲ್ಲ ಮಾಧ್ಯಮಗಳನ್ನು ಬಳಸಿಕೊಂಡು ಭಾರತೀಯ ಚಿಂತನೆಯನ್ನು ಪಸರಿಸುವ ಕೆಲಸ ಆಗಬೇಕು’ ಎಂದು ಸಲಹೆ ನೀಡಿದರು.

‘ಕನ್ನಡವನ್ನು ಕನ್ನಡ ಹೋರಾಟಗಾರರಿಂದ ರಕ್ಷಿಸಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸಮಾಜದ ಶಾಂತಿಯನ್ನು ಕದಡುವ ಅಂಥವರನ್ನು ಮೌನವಾಗಿ ಸಹಿಸುತ್ತಿರುವ ಪ್ರಜ್ಞಾವಂತರೂ ಇದಕ್ಕೆ ಹೊಣೆಯಾಗುತ್ತಾರೆ. ವಾಲ್ಮೀಕಿಯನ್ನು ಒಪ್ಪಿಕೊಳ್ಳುವ ಜನ ರಾಮನನ್ನು ವಿರೋಧಿಸುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಸಮಾಜಕ್ಕೆ ಸರಿಯಾದ ತಿಳಿವಳಿಕೆ ನೀಡುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟರು.

‘ಕನ್ನಡದ ಇತಿಹಾಸದ ಬಗ್ಗೆ ಹಲವು ಗೊಂದಲಗಳಿವೆ. ಯಾರಿಗೂ ಈ ಕುರಿತು ಸ್ಪಷ್ಟತೆ ಇಲ್ಲ. ನಮ್ಮ ಇತಿಹಾಸವನ್ನು ಬರೆದವರು ಪರಕೀಯರು. ಸುಳ್ಳಿನ ವಿಜೃಂಭಣೆಯಿಂದ ನೈಜ ಇತಿಹಾಸ ಮರೆಯಾಗಿದೆ. ಸತ್ಯ ಚರಿತ್ರೆಯನ್ನು ಪುನಾರಚಿಸುವ ಕೆಲಸವನ್ನು ಸಾಹಿತಿಗಳು ಕೈಗೊಳ್ಳಬೇಕು’ ಎಂದರು.

ಹಿರಿಯ ಸಾಹಿತಿ ಡಾ. ಸಂಗಮೇಶ ಸವದತ್ತಿಮಠ ಅವರಿಗೆ 2023ನೇ ಸಾಲಿನ ಆದಿಕವಿ ಪುರಸ್ಕಾರ ಹಾಗೂ ವಿದ್ವಾಂಸ ಎಸ್. ಕಾರ್ತಿಕ್ ಅವರಿಗೆ ವಾಗ್ದೇವಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ. ಸಂಗಮೇಶ ಸವದತ್ತಿಮಠ ಅವರ ಅನುಪಸ್ಥಿತಿಯಲ್ಲಿ ಅವರ ಪುತ್ರಿ ಸ್ಮಿತಾ ಪ್ರಶಸ್ತಿಯನ್ನು ಸ್ವೀಕರಿಸಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ರಾಜ್ಯ ಉಪಾಧ್ಯಕ್ಷ ಹರಿಪ್ರಕಾಶ್ ಕೋಣೆಮನೆ, ವಾಗ್ದೇವಿ ಶಿಕ್ಷಣ ಸಮೂಹದ ಅಧ್ಯಕ್ಷ ಕೆ. ಹರೀಶ್, ಉದ್ಯಮಿ ಎಸ್. ಜಯರಾಮ್ ಇದ್ದರು.



ಅಖಿಲ ಭಾರತೀಯ ಸಾಹಿತ್ಯ ಪರಿಷತ್ ವತಿಯಿಂದ ವಿದ್ವಾಂಸ ಎಸ್. ಕಾರ್ತಿಕ್ ಅವರಿಗೆ ವಾಗ್ದೇವಿ ಪ್ರಶಸ್ತಿ ಪ್ರದಾನ ಮಾಡಲಾಯಿತು

ಹಜ್ ಭವನದಲ್ಲಿ ಬೆಂಕಿ ಅವಘಡ

ಬೆಂಗಳೂರು: ಹೆಗಡೆ ನಗರ ಬಳಿಯ ತಿರುಮೇನಹಳ್ಳಿಯಲ್ಲಿರುವ ಹಜ್ ಭವನದಲ್ಲಿ ಶನಿವಾರ ಬೆಂಕಿ ಅವಘಡ ಸಂಭವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಯಶಸ್ವಿಯಾಗಿದ್ದಾರೆ.

'ಹಜ್ ಭವನದ ಮೊದಲ ಮಹಡಿಯಲ್ಲಿರುವ ಸಭಾಂಗಣದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕೆಲ ನಿಮಿಷಗಳಲ್ಲಿ ಬೆಂಕಿ ಕೆನ್ನಾಲಗೆ ಹೆಚ್ಚಾಗಿತ್ತು. ಭವನದ ಸಿಬ್ಬಂದಿ ಬೆಂಕಿ ನಂದಿಸಲು ಯತ್ನಿಸಿದ್ದರು. ಆದರೆ, ಅದು ಸಾಧ್ಯವಾಗಿರಲಿಲ್ಲ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

'ಸ್ಥಳಕ್ಕೆ ಬಂದ ಅಗ್ನಿಶಾಮಕ ದಳ ಸಿಬ್ಬಂದಿ, ಎರಡು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಅವಘಡದಿಂದ ಸಭಾಂಗಣದಲ್ಲಿದ್ದ ಪೀಠೋಪಕರಣ ಹಾಗೂ ಇತರೆ ವಸ್ತುಗಳು ಸುಟ್ಟಿವೆ' ಎಂದು ತಿಳಿಸಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿ, 'ಬೆಂಕಿ ಅವಘಡದಲ್ಲಿ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಬೆಂಕಿ ನಂದಿಸಲಾಗಿದೆ. ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಅನುಮಾನವಿದೆ' ಎಂದರು. ಕೊತ್ತನೂರು ಠಾಣೆ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು. ಬೆಂಕಿ ಅವಘಡದ ಬಗ್ಗೆ ಶನಿವಾರ ರಾತ್ರಿಯವರೆಗೂ ಯಾವುದೇ ಪ್ರಕರಣ ದಾಖಲಾಗಿಲ್ಲ.

ದಿನಸಿ ಅಂಗಡಿಯಲ್ಲಿ ಮದ್ಯ: ದೂರಿತ್ತ ಪರಿಶಿಷ್ಟರಿಗೆ ಇಲ್ಲ ದಿನಸಿ!

ಪ್ರಜಾವಾಣಿ ವಾರ್ತೆ



ಶಿರಾ: ದಿನಸಿ ಅಂಗಡಿಗಳಲ್ಲಿ ಅಕ್ರಮ ವಾಗಿ ಮದ್ಯ ಅಕ್ರಮ ಮಾರಾಟ ಮಾಡಲಾಗುತ್ತಿದೆ ಎಂದು ದೂರು ನೀಡಿದ ಕಾರಣ ಅಂಗಡಿಗಳಲ್ಲಿ ತಮಗೆ ದಿನಸಿ ಸೇರಿದಂತೆ ದಿನಬಳಕೆ ವಸ್ತು ನೀಡುತ್ತಿಲ್ಲ ಎಂದು ತಾಲ್ಲೂಕಿನ ನಾರಗೊಂಡನಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಮಹಿಳೆಯರು ಪೊಲೀಸರಿಗೆ ದೂರು ನೀಡಿದ್ದಾರೆ.

ನಾರಗೊಂಡನಹಳ್ಳಿ ಗ್ರಾಮದ ಎಂಟು ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಎರಡು ದಿನದ ಹಿಂದೆ ಗ್ರಾಮದ ಮಹಿಳೆಯರು ಪೊಲೀಸರಿಗೆ ದೂರು ನೀಡಿದ್ದರು. ಈಗ ಆ ಅಂಗಡಿಗಳ ಮಾಲೀಕರು 'ನಮ್ಮ ವಿರುದ್ಧ ದೂರು ನೀಡಿದ್ದೀರಾ. ನಿಮಗೆ ಯಾವುದೇ ಸಾಮಗ್ರಿ ನೀಡುವುದಿಲ್ಲ, ಬೇರೆ ಕಡೆ ತೆಗೆದುಕೊಳ್ಳಿ' ಎಂದು ವಾಪಸ್ ಕಳುಹಿಸುತ್ತಿದ್ದಾರೆ ಎಂದು ಮಹಿಳೆಯರು ದೂರಿನಲ್ಲಿ ಹೇಳಿದ್ದಾರೆ.

'ನಾವು ಯಾರಿಗೂ ಸಾಮಗ್ರಿ ನೀಡುವುದಿಲ್ಲ ಎಂದು ಹೇಳಿಲ್ಲ. ಈಗಾಗಲೇ ಅವರಿಗೆ ಸಾಲವನ್ನೂ ನೀಡಿದ್ದೇವೆ. ಬೆಲೆ ಏರಿಕೆಯಿಂದ ಕೆಲವು ಪದಾರ್ಥ ತರುತ್ತಿಲ್ಲ' ಎಂದು ಅಂಗಡಿ ಮಾಲೀಕರು ಸ್ಪಷ್ಟನೆ ನೀಡಿದ್ದಾರೆ.

ಈ ಬೆಳವಣಿಗೆಯ ಬೆನ್ನಲ್ಲೇ ಪಟ್ಟನಾಯಕನಹಳ್ಳಿ ಠಾಣೆ ಪೊಲೀಸರು ಶನಿವಾರ ಅಂಗಡಿ ಮಾಲೀಕರು ಮತ್ತು ಪರಿಶಿಷ್ಟ ಮಹಿಳೆಯರನ್ನು ಕರೆಸಿ ಮಾತನಾಡಿದ್ದಾರೆ.

'ಯಾರಿಗೂ ದಿನಸಿ ನೀಡದೆ ವಾಪಸ್ ಕಳುಹಿಸಿಲ್ಲ. ಒಂದು ವೇಳೆ ಅಕ್ರಮವಾಗಿ ಮದ್ಯ ಮಾರಾಟ ಮಾಡಿದರೆ ಪ್ರಕರಣ ದಾಖಲಿಸಿ' ಎಂದು ಅಂಗಡಿ ಮಾಲೀಕರು ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ಮದ್ಯ ಮಾರಾಟ ಮಾಡುತ್ತಿದ್ದ ನರಸಿಂಹಮೂರ್ತಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಗ್ರಾಮದಲ್ಲಿ ಯಾವುದೇ ಗೊಂದಲ ಇಲ್ಲ. ಎಲ್ಲರೂ ಒಮ್ಮತದಿಂದ ಇದ್ದಾರೆ ಎಂದು ಪಿಎಸ್‌ಐ ಭವಿತಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.





ನಗರದ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ದಿ ಆರ್ಕಿಡ್ ಸೊಸೈಟಿ ಆಫ್ ಕರ್ನಾಟಕ ಆಯೋಜಿಸಿದ್ದ ಆರ್ಕಿಡ್ ಪ್ರದರ್ಶನದಲ್ಲಿ ಹೂವುಗಳ ಅಂದ ಕಣ್ತುಂಬಿಕೊಂಡ ಪ್ರೇಕ್ಷಕರು —ಪ್ರಜಾವಾಣಿ ಚಿತ್ರಗಳು

ಸೇಂಟ್ ಜೋಸೆಫ್ ವಿ.ವಿಯಲ್ಲಿ ಆರ್ಕಿಡ್ ಪ್ರದರ್ಶನ ● ಹೂವುಗಳ ವೈಯ್ಯಾರಕ್ಕೆ ಮನಸೋತ ಪ್ರೇಕ್ಷಕರು

ಕಣ್ಮನ ತಣಿಸಿದ ಆರ್ಕಿಡ್ ವಿಸ್ಮಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಲಿ ಪ್ರಕೃತಿ ವಿಸ್ಮಯವೇ ಅನಾವರಣಗೊಂಡಿತ್ತು. ಬೆಟ್ಟದ ಹೂವಿನ ರಾಶಿಯೇ ಧರೆಗೆ ಇಳಿದು ಬಂದಂತಹ ವಾತಾವರಣ, ಎಲ್ಲೆಲ್ಲೂ ಬಣ್ಣದ ಹೂವುಗಳದ್ದೇ ಕಾರುಬಾರು, ಆ ಹೂವುಗಳ ವೈಯ್ಯಾರಕ್ಕೆ ಮನಸೋತ ಪ್ರೇಕ್ಷಕರು, ಕಣ್ಮನ ತಣಿಸಿದ ವಿದೇಶಿ ಪ್ರಭೇದಗಳು...

ಈ ದೃಶ್ಯ ಕಂಡುಬಂದಿದ್ದು ನಗರದ ಲ್ಯಾಂಗ್‌ಫೋರ್ಡ್ ರಸ್ತೆಯ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ದಿ ಆರ್ಕಿಡ್ ಸೊಸೈಟಿ ಆಫ್ ಕರ್ನಾಟಕ ಆಯೋಜಿಸಿದ್ದ ಆರ್ಕಿಡ್ ಪ್ರದರ್ಶನದಲ್ಲಿ. ಒಂದೇ ಹಾಲ್‌ನಲ್ಲಿ ದೇಶ – ವಿದೇಶಗಳ ಆರ್ಕಿಡ್ ಪ್ರಭೇದಗಳ ರಾಶಿಯೇ ಇತ್ತು.

ಶನಿವಾರದಿಂದ ಆರ್ಕಿಡ್ ಪ್ರದರ್ಶನ ಆರಂಭಗೊಂಡಿದ್ದು ಭಾನುವಾರ ಸಂಜೆ ಮುಕ್ತಾಯಗೊಳ್ಳಲಿದೆ. ಮೊದಲ ದಿನ ನೂರಾರು ಮಂದಿ ಆರ್ಕಿಡ್ ಸೊಬಗು ಕಣ್ತುಂಬಿಕೊಂಡರು.

ಬರೀ ಪ್ರದರ್ಶನ ಮಾತ್ರವಲ್ಲ, ಮಾರಾಟ ಸಹ ಇದೆ. ಇಷ್ಟವಾದ ತಳಿಯ ಗಿಡಗಳನ್ನು ಇಲ್ಲಿ ಖರೀದಿಸಬಹುದಾಗಿದೆ. ಕೇರಳ, ತಮಿಳುನಾಡು ಹಾಗೂ ರಾಜ್ಯದ ಪಶ್ಚಿಮಘಟ್ಟ ಭಾಗದ ಜಿಲ್ಲೆಗಳ ಮಾರಾಟಗಾರರು ಪ್ರದರ್ಶನಕ್ಕೆ ಬಂದಿದ್ದಾರೆ. ಮಾರಾಟಕ್ಕೆ ಪ್ರತ್ಯೇಕ ಮಳಿಗೆಗಳಿವೆ. ಸೊಸೈಟಿ ಸದಸ್ಯರು ತಮ್ಮ ಮನೆಗಳಲ್ಲಿ ಬೆಳೆಸಿದ ಆರ್ಕಿಡ್‌ಗಳನ್ನು ಪ್ರದರ್ಶನಕ್ಕೆ ತಂದಿದ್ದಾರೆ.

ಈ ಪುಷ್ಪಗಳು ಬರೀ ಅಂದಕ್ಕೆ ಮಾತ್ರವೇ ಹೆಸರಾಗಿಲ್ಲ. ವಾಣಿಜ್ಯವಾಗಿಯೂ ಕಾಸು ತಂದು ಕೊಡುತ್ತಿವೆ. ಭಾರಿ ಬೇಡಿಕೆಯಿದೆ. ಶುಭ ಸಮಾರಂಭಗಳಲ್ಲಿ ಅಲಂಕಾರಕ್ಕೆ ಈ ಹೂವುಗಳನ್ನು ಬಳಕೆ ಮಾಡಲಾಗುತ್ತಿದೆ. ಸಭಾಂಗಣದಲ್ಲಿ ಎಲ್ಲ ರೀತಿಯ ಗಾತ್ರ, ಆಕಾರ ಹಾಗೂ ವಿನ್ಯಾಸದ ಹೂವುಗಳು ಇದ್ದವು. ಚಿಟ್ಟೆಯ ರೀತಿ, ದೀಪದ ಹುಳು ಆಕಾರದ ಹೂವುಗಳು ಆಕರ್ಷಿಸಿದವು.

ದಿ ಆರ್ಕಿಡ್ ಸೊಸೈಟಿ ಆಫ್ ಕರ್ನಾಟಕ ಇದುವರೆಗೂ 8 ಪ್ರದರ್ಶನ ಆಯೋಜಿಸಿದೆ. ಕೋವಿಡ್ ಬಳಿಕ ಪ್ರದರ್ಶನ ನಡೆದಿರಲಿಲ್ಲ. ಈ ವರ್ಷದಿಂದ ಮತ್ತೆ ಆರಂಭವಾಗಿದ್ದು, ನಗರದ ಜನರಿಗೆ ಆರ್ಕಿಡ್ ವಿಸ್ಮಯ ಸವಿಯಲು ಸಾಧ್ಯವಾಗುತ್ತಿದೆ. ಈ ಆರ್ಕಿಡ್‌ಗಳು ರಾಜ್ಯದ ಪಶ್ಚಿಮ ಘಟ್ಟದ ಪ್ರದೇಶಗಳಾದ ಮಡಿಕೇರಿ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಭಾಗದಲ್ಲಿ ಕಂಡುಬರುತ್ತಿವೆ ಎಂದು ಸೊಸೈಟಿ ಅಧ್ಯಕ್ಷ ಕೆ.ಎಸ್.ಶಶಿಧರ್ ತಿಳಿಸಿದರು.

ಆರ್ಕಿಡ್ ನಶಿಸಿದರೆ ಪರಿಸರಕ್ಕೆ ಉಳಿಗಾಲ ಇಲ್ಲ ಎಂದೇ ಭಾವಿಸುತ್ತೇವೆ. ಆದ್ದರಿಂದ ಆರ್ಕಿಡ್‌ಗಳನ್ನು ಉಳಿಸಬೇಕಿದೆ. ಅಲ್ಲದೇ ಜಾಗತಿಕ ಮಟ್ಟದಲ್ಲಿ ಆರ್ಕಿಡ್‌ಗಳಿಗೆ ಬೇಡಿಕೆ ಸೃಷ್ಟಿಯಾಗಿದೆ. ಅದರಲ್ಲೂ ಕಟ್ ಫ್ಲವರ್ಸ್‌ಗೆ ಬೇಡಿಕೆ ಹೆಚ್ಚಿದೆ. ಉಡುಗೊರೆ ನೀಡಲು ಬಳಕೆ ಆಗುತ್ತಿದೆ. ಮನೆಗಳ ಎದುರು ಹೂವಿನ ಕುಂಡಗಳಲ್ಲಿ ಬೆಳೆಸಬಹುದು ಎಂದು ಹೇಳಿದರು.

ದೇಶದಲ್ಲಿ 1,256 ಆರ್ಕಿಡ್ ಪ್ರಭೇದಗಳಿವೆ. ರಾಜ್ಯದಲ್ಲಿ 176 ಆರ್ಕಿಡ್ ಪ್ರಭೇದಗಳಿವೆ. ಹೈಬ್ರಿಡ್ ತಳಿಗಳು ಬಂದ ಮೇಲೆ ಆರ್ಕಿಡ್‌ನಲ್ಲಿ ಕ್ರಾಂತಿಯಾಗಿದೆ. ದೇಶದಲ್ಲಿ ಡೆಂಡ್ರೋಬಿಯ ತಳಿ ಹೆಚ್ಚಿನ ಪ್ರಮಾಣದಲ್ಲಿದೆ. ಕೆಲವು ತಳಿಗಳು 'ಕ್ವೀನ್ ಆಫ್ ಆರ್ಕಿಡ್' ಎಂದೇ ಪ್ರಸಿದ್ಧಿ ಪಡೆದಿವೆ ಎಂದು ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಅವರು ಉದ್ಘಾಟಿಸಿದರು.

ಇನ್‌ಸ್ಟಾಗ್ರಾಂ ಜಾಹೀರಾತಿನ ಮೂಲಕ ವಂಚನೆ

₹7.78 ಲಕ್ಷ ಕಳೆದುಕೊಂಡ ವೈದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ಬಂದಿದ್ದ ಜಾಹೀರಾತು ನಂಬಿ ನಗರದ ವೈದ್ಯರೊಬ್ಬರು ₹ 7.78 ಲಕ್ಷ ಕಳೆದುಕೊಂಡಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿಯಾಗಿರುವ 64 ವರ್ಷದ ವೈದ್ಯರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಣ ಹೂಡಿಕೆ ಮಾಡಿ, ದುಪ್ಪಟ್ಟು ಲಾಭ ಪಡೆಯಿರಿ' ಎಂಬುದಾಗಿ ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ಜಾಹೀರಾತು ಬಂದಿತ್ತು. ದೂರುದಾರರು ಜಾಹೀರಾತಿನ ಲಿಂಕ್ ಕ್ಲಿಕ್ ಮಾಡಿ, ಮಾಹಿತಿ ತಿಳಿದುಕೊಂಡಿದ್ದರು. ಇದಾದ ನಂತರ ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, 'ಹೂಡಿಕೆ ಮಾಡುವ ಮೊದಲು ನೋಂದಣಿ ಮಾಡಿಕೊಳ್ಳಿ' ಎಂದು ಜಾಲತಾಣವೊಂದರ ಲಿಂಕ್ ಕಳುಹಿಸಿದ್ದರು.'

'ಆರೋಪಿ ಮಾತು ನಂಬಿದ್ದ ವೈದ್ಯ, ಜಾಲತಾಣದಲ್ಲಿ ನೋಂದಣಿ ಮಾಡಿಕೊಂಡಿದ್ದರು. ಹಂತ ಹಂತವಾಗಿ ₹ 7.78 ಲಕ್ಷ ಹೂಡಿಕೆ ಮಾಡಿದ್ದರು. ಇತ್ತೀಚೆಗೆ ದೂರುದಾರರ ಹಣದ ಅವಶ್ಯಕತೆ ಇತ್ತು. ಹೀಗಾಗಿ, ಹಣ ವಾಪಸು ಪಡೆಯಲು ಮುಂದಾಗಿದ್ದರು. ಆದರೆ, ಯಾವುದೇ ಹಣ ಬಂದಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಆರೋಪಿಗಳು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಬಳಿಕ, ನಿಯಂತ್ರಣ ಕೊಠಡಿ 112ಕ್ಕೆ ಕರೆ ಮಾಡಿ ದೂರು ನೀಡಿದ್ದರು' ಎಂದು ಪೊಲೀಸ್ ತಿಳಿಸಿವೆ.

ಲಾಂಗ್‌ನಿಂದ ಹಲ್ಲೆ: ಎಎಸ್‌ಐ ವಿರುದ್ಧ ಎಫ್‌ಐಆರ್

ಬೆಂಗಳೂರು: ಮನೆ ಬಳಿ ಬಂದಿದ್ದ ಇಬ್ಬರು ವ್ಯಕ್ತಿಗಳ ಮೇಲೆ ಲಾಂಗ್‌ನಿಂದ ಹಲ್ಲೆ ಮಾಡಿದ್ದ ಆರೋಪದಡಿ ಮಾಗಡಿ ರಸ್ತೆ ಠಾಣೆಯ ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಶ್ರೀನಿವಾಸ್ ವಿರುದ್ಧ ವಿಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಅ. 25ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಸಂತ್ರಸ್ತರಾದ ದಯಾನಂದ್ ಹಾಗೂ ಶಶಿಧರ್ ಅವರು ದೂರು ನೀಡಿದ್ದಾರೆ. ಹಲ್ಲೆಯ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಶ್ರೀನಿವಾಸ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಸದ್ಯ ಆತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಬಾರ್‌ನಿಂದ ಮನೆಗೆ ಹೋಗಿದ್ದರು: 'ದಯಾನಂದ್ ಹಾಗೂ ಶಶಿಧರ್, ವಿಜಯನಗರದ ಆರ್.ಪಿ.ಸಿ ಬಡಾವಣೆಯ ಬಾರ್‌ಗೆ ಹೋಗಿದ್ದರು. ಅದೇ ಬಾರ್‌ನಲ್ಲಿದ್ದ ಎಎಸ್‌ಐ ಸಂಬಂಧಿ ಆನಂದ್, 'ನೀವು ಯಾರು? ನಮ್ಮ ಪ್ರದೇಶಕ್ಕೆ ಏಕೆ ಬಂದಿದ್ದೀರಾ?' ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆನಂದ್ ಮಾತಿಗೆ ಸಿಟ್ಟಾಗಿದ್ದ ದೂರುದಾರರು, 'ನೀನು ಯಾರು ? ನಿನ್ನ ಮನೆ ಎಲ್ಲಿದೆ ? ತೋರಿಸು' ಎಂದಿದ್ದರು. ಆನಂದ್, ತನ್ನದೇ ಆಟೊದಲ್ಲಿ ದಯಾನಂದ್ ಹಾಗೂ ಶಶಿಧರ್ ಅವರನ್ನು ಆರ್.ಪಿ.ಸಿ ಬಡಾವಣೆಯ 8ನೇ ಅಡ್ಡರಸ್ತೆಯಲ್ಲಿರುವ ಎಎಸ್‌ಐ ಶ್ರೀನಿವಾಸ್ ಮನೆಗೆ ಕರೆದೊಯ್ದಿದ್ದನೆಂದು ಹೇಳಲಾಗಿದೆ.'

'ಆಟೊದಲ್ಲಿ ಇಬ್ಬರನ್ನೂ ಇಳಿಸಿದ್ದ ಆನಂದ್, 'ಕಳ್ಳರು.... ಕಳ್ಳರು...' ಎಂದು ಕೂಗಾಡಿದ್ದರು. ಒಂದು ಕೈಯಲ್ಲಿ ಲಾಂಗ್ ಹಾಗೂ ಇನ್ನೊಂದು ಕೈಯಲ್ಲಿ ಲಾಠಿ ಹಿಡಿದು ಹೊರಗೆ ಬಂದಿದ್ದ ಎಎಸ್‌ಐ ಶ್ರೀನಿವಾಸ್, ದಯಾನಂದ್ ಹಾಗೂ ಶಶಿಧರ್ ಮೇಲೆ ಹಲ್ಲೆ ಮಾಡಿದ್ದ. ಇದೇ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಳ್ಳತನಕ್ಕೆ ಬಂದಿರಬಹುದೆಂದು ಭಾವಿಸಿ ಹಲ್ಲೆ ಮಾಡಿದ್ದಾಗಿ ಸ್ಥಳೀಯರು ಹೇಳುತ್ತಿದ್ದಾರೆ. ಎಲ್ಲ ಆಯಾಮದಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೈಕ್–ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ: ಸವಾರ ಸಾವು

ಬೆಂಗಳೂರು: ಜೆ.ಪಿ. ನಗರ 8ನೇ ಹಂತದಲ್ಲಿ ಬೈಕ್ ಹಾಗೂ ವಿದ್ಯುತ್ ಕಂಬಕ್ಕೆ ಬೆನ್ಜ್ ಕಾರು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಬೈಕ್ ಸವಾರ ರಾಜೇಂದ್ರ (46) ಮೃತಪಟ್ಟಿದ್ದಾರೆ.

'ಚಿಕ್ಕಲಸಂದ್ರ ನಿವಾಸಿ ರಾಜೇಂದ್ರ, ಗೊಟ್ಟಿಗೆರೆಯಲ್ಲಿ ಫ್ಯಾಬ್ರಿಕೇಷನ್ ಮಳಿಗೆ ಇಟ್ಟುಕೊಂಡಿದ್ದರು. ಕೋಣನಕುಂಟೆ ಕ್ರಾಸ್‌ನಿಂದ ಗೊಟ್ಟಿಗೆರೆಯತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

'ಬೆನ್ಜ್ ಕಾರಿನ ಚಾಲಕ, ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದ. ರಸ್ತೆಯಲ್ಲಿ ತೆರಳುತ್ತಿದ್ದ ರಾಜೇಂದ್ರ ಬೈಕ್‌ಗೆ ಗುದ್ದಿತ್ತು. ಬೈಕ್‌ನಿಂದ ಹಾರಿದ್ದ ರಾಜೇಂದ್ರ ಕಾರಿನ ಮೇಲೆ ಬಿದ್ದಿದ್ದರು. ಹಾಗೆಯೇ ಚಲಿಸಿದ್ದ ಕಾರು ಕಂಬಕ್ಕೆ ಡಿಕ್ಕಿ ಹೊಡೆದಿತ್ತು.'

'ತೀವ್ರ ಗಾಯಗೊಂಡಿದ್ದ ರಾಜೇಂದ್ರ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ. ಕಾರಿನ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಹುಲಿ ಉಗುರಿಗಾಗಿ ಶೋಧ: ಟಿ.ಎ.ಶರವಣ ಆರೋಪ

'ಚಿನ್ನಾಭರಣ ವ್ಯಾಪಾರಿಗಳಿಗೆ ಹಿಂಸೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಲಿ ಉಗುರಿನ ಹೆಸರಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಅಮಾಯಕ ಚಿನ್ನಾಭರಣ ವ್ಯಾಪಾರಿಗಳನ್ನು ಹಿಂಸಿಸಲು ಪ್ರಾರಂಭಿಸಿದ್ದಾರೆ. ಇದು ಮುಂದುವರಿದರೆ ದೌರ್ಜನ್ಯದ ವಿರುದ್ಧ ಪ್ರತಿಭಟನೆ ನಡೆಸಲಾಗುವುದು' ಎಂದು ಕರ್ನಾಟಕ ಜ್ಯುವೆಲರಿ ಅಸೋಸಿಯೇಷನ್ ಅಧ್ಯಕ್ಷ ಹಾಗೂ ವಿಧಾನ ಪರಿಷತ್ತಿನ ಸದಸ್ಯ ಟಿ.ಎ.ಶರವಣ ಆಕ್ರೋಶ ವ್ಯಕ್ತಪಡಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹುಲಿ ಉಗುರು ಹಾಗೂ ಚರ್ಮ, ಜಿಂಕೆ ಕೊಂಬು ಸೇರಿ ವಿವಿಧ ವನ್ಯಜೀವಿ ಉತ್ಪನ್ನಗಳ ಶೋಧಕ್ಕೆ ಅಧಿಕಾರಿಗಳು ಮನೆಗಳ ಮೇಲೆ ದಾಳಿ ನಡೆಸುತ್ತಿದ್ದಾರೆ. ಜಾಗೃತಿ ಮೂಡಿಸಬೇಕಾದ ಅವರು ಹುಲಿಗಿಂತ ವೇಗವಾಗಿ ದಾಳಿ ಮಾಡಿ, ಭಯ ಹುಟ್ಟಿಸುತ್ತಿದ್ದಾರೆ. ತುಮಕೂರಿನಲ್ಲಿ ಅಂಗಡಿ ಸಿಬ್ಬಂದಿಯನ್ನು ಬಲವಂತವಾಗಿ ಎಳೆದೊಯ್ದು ಹಿಂಸಿಸಿದ್ದು ಖಂಡನೀಯ' ಎಂದು ಹೇಳಿದರು.

'ಸಿಕ್ಕ ಹುಲಿ ಉಗುರು ನಕಲಿಯೊ, ಅಸಲಿಯೊ ಎಂದು ಎಫ್.ಎಸ್.ಎಲ್ ಪ್ರಯೋಗಾಲಯದ ವರದಿ ನೀಡುವ ಮೊದಲೇ ಕಾನೂನು ಕ್ರಮ ಕೈಗೊಳ್ಳುತ್ತಿರುವುದು ವಿಪರ್ಯಾಸ. ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್, ಸಿಂಥೆಟಿಕ್ ಹಾಗೂ ಹಸುವಿನ ಕೊಂಬಿನಲ್ಲಿ ತಯಾರಿಸಿದ ಹುಲಿ ಉಗುರು ಸಿಗುತ್ತವೆ. ಆದ್ದರಿಂದ ಪ್ರಯೋಗಾಲಯದ ವರದಿಯಲ್ಲಿ ದೃಢಪಟ್ಟ ಬಳಿಕವಷ್ಟೇ ಕಾನೂನು ಕ್ರಮ ಕೈಗೊಳ್ಳಬೇಕು. ರಾಜ್ಯವನ್ನು ಬರಗಾಲ ಸೇರಿದಂತೆ ವಿವಿಧ ಸಮಸ್ಯೆಗಳು ಕಾಡುತ್ತಿವೆ. ಸರ್ಕಾರ ಅದರ ಕಡೆಗೆ ಗಮನ ನೀಡಬೇಕು' ಎಂದರು.

'ಆನೆ ಕೂದಲ ಮಾದರಿ ಉಂಗುರ'

'ಹುಲಿ ಬಳಿ ಹೋಗಿ ಅದರ ಉಗುರನ್ನು ಪಡೆಯಲು ಸಾಧ್ಯವಿದೆಯೆ? ಮಾರುಕಟ್ಟೆಯಲ್ಲಿ ಸಿಗುವ ಪ್ಲಾಸ್ಟಿಕ್ ಉಗುರಿಗೆ ಆಭರಣದಿಂದ ಪೆಂಡೆಂಟ್ ಮಾಡಿಸಿಕೊಳ್ಳುತ್ತಾರೆ. ಅಂತಹವರಿಗೂ ಇಲಾಖೆ ಅಧಿಕಾರಿಗಳು ಬೆದರಿಕೆ ಒಡ್ಡುತ್ತಿದ್ದಾರೆ. ನಾನು ಕೂಡಾ ಪ್ಲಾಸ್ಟಿಕ್‌ನಿಂದ ತಯಾರಿಸಿದ ಆನೆ ಬಾಲದ ಕೂದಲು ಮಾದರಿಯ ಉಂಗುರ ಧರಿಸುತ್ತೇನೆ. ಕಪ್ಪು ಬಣ್ಣದ ಇದನ್ನು ಧರಿಸಿದರೆ ಕೆಟ್ಟ ದೃಷ್ಟಿ ಬೀಳುವುದಿಲ್ಲವೆಂಬ ನಂಬಿಕೆಯಿದೆ' ಎಂದು ಟಿ.ಎ.ಶರವಣ ಹೇಳಿದರು.

'ಹುಲಿ ಉಗುರು ಸೇರಿ ವಿವಿಧ ವನ್ಯಜೀವಿ ಉತ್ಪನ್ನಗಳನ್ನು ಹಿಂದಿರುಗಿಸಲು ಸರ್ಕಾರ ಕಾಲಾವಕಾಶ ನೀಡಬೇಕು' ಎಂದರು.

'ಅಂಜುಮನ್–ಎ–ಇಮಾಮಿಯಾ' ಅಧ್ಯಕ್ಷರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಕ್ಫ್ ಮಂಡಳಿಯಿಂದ ಬಿಡುಗಡೆ ಮಾಡಲಾಗಿದ್ದ ₹7.50 ಲಕ್ಷ ದುರುಪಯೋಗಪಡಿಸಿಕೊಂಡಿರುವ ಆರೋಪದಡಿ 'ಅಂಜುಮನ್–ಎ–ಇಮಾಮಿಯಾ' ಅಧ್ಯಕ್ಷ ಸೈಯದ್ ಜಾಮೀನ್ ರಝಾ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ವಕ್ಫ್ ಮಂಡಳಿಯ ಬೆಂಗಳೂರು ನಗರ ಜಿಲ್ಲಾ ಅಧಿಕಾರಿ ಅಬ್ದುಲ್ ಕಲೀಲ್ ಅವರು ದೂರು ನೀಡಿದ್ದಾರೆ. ನಂಬಿಕೆ ದ್ರೋಹ (ಐಪಿಸಿ 406) ಹಾಗೂ ವಂಚನೆ (ಐಪಿಸಿ 420) ಆರೋಪದಡಿ ಸೈಯದ್ ಜಾಮಿನ್ ರಝಾ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಂಚನೆಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಪಡೆದು ಪರಿಶೀಲಿಸಲಾಗುತ್ತಿದೆ. ಆರೋಪಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

'ರಿಚ್ಮಂಡ್ ಟೌನ್‌ನಲ್ಲಿರುವ ಅಂಜುಮನ್–ಎ–ಇಮಾಮಿಯಾ ದುರಸ್ತಿ ಹಾಗೂ ನವೀಕರಣ ಕೆಲಸಕ್ಕಾಗಿ 2021ರ ಏಪ್ರಿಲ್ 7ರಂದು ಹಣ ಬಿಡುಗಡೆ ಮಾಡಲಾಗಿತ್ತು. ಇದೇ ಹಣವನ್ನು ಆರೋಪಿ ದುರುಪಯೋಗ ಪಡಿಸಿಕೊಂಡಿರುವುದು ಆಂತರಿಕ ತನಿಖೆಯಿಂದ ಗೊತ್ತಾಗಿರುವುದಾಗಿ ದೂರುದಾರರು ತಿಳಿಸಿದ್ದಾರೆ. ಹಣವನ್ನು ಯಾವ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಡಿಕೆ ಖರೀದಿಗೆ ಹಣ ತಂದಿದ್ದ ವ್ಯಾಪಾರಿ

ಕಾರಿನಲ್ಲಿದ್ದ ₹ 1 ಕೋಟಿ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರದಿಂದ ನಗರಕ್ಕೆ ಬಂದಿದ್ದ ಅಡಿಕೆ ವ್ಯಾಪಾರಿಯ ಕಾರಿನಲ್ಲಿದ್ದ ₹ 1 ಕೋಟಿ ಕಳ್ಳತನವಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅ. 7ರಂದು ನಡೆದಿರುವ ಘಟನೆ ಸಂಬಂಧ ಅಡಿಕೆ ವ್ಯಾಪಾರಿ ಎಚ್.ಎಸ್. ಉಮೇಶ್ ದೂರು ನೀಡಿದ್ದಾರೆ. ಕಾರು ಚಾಲಕರಾದ ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಗ್ರಾಮದ ಸ್ವಾಮಿ ಪಿ.ಬಿ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಚಾಲಕ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾರಿನಲ್ಲಿ ₹ 1 ಕೋಟಿ ಹಣದ ಬ್ಯಾಗ್ ಇರುವ ಮಾಹಿತಿ ತಿಳಿದವರೇ ಕೃತ್ಯ ಎಸಗಿರುವ ಶಂಕೆ ಇದೆ. ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದ್ದು, ಆರೋಪಿಗಳ ಸುಳಿವು ಸಿಕ್ಕಿದೆ. ಹೊರ ಜಿಲ್ಲೆಯಲ್ಲಿ ಹಣದ ಬ್ಯಾಗ್ ಕಳ್ಳತನ ಮಾಡಿರುವ ಅನುಮಾನವಿದ್ದು, ಈಗಾಗಲೇ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸುಪರ್ದಿಗೆ ಪಡೆದು ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಪ್ರಕರಣದ ವಿವರ: 'ವ್ಯಾಪಾರಿ ಉಮೇಶ್ ಅವರು ಸ್ನೇಹಿತ ಮಲ್ಲಿಕಾರ್ಜುನ್ ಪಾಲುದಾರಿಕೆಯಲ್ಲಿ 'ಶ್ರೀ ಮರುಳಸಿದ್ದೇಶ್ವರ ಟ್ರೇಡರ್ಸ್' ಅಡಿ ಅಡಿಕೆ ಮಂಡಿ ನಡೆಸುತ್ತಿದ್ದಾರೆ. ರಾಜ್ಯದ ರೈತರಿಂದ ಅಡಿಕೆ ಖರೀದಿಸಿ, ಹೊರ ರಾಜ್ಯಗಳಿಗೆ ರಫ್ತು ಮಾಡುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ರೈತರಿಂದ ಅಡಿಕೆ ಖರೀದಿಸಲೆಂದು ₹ 1 ಕೋಟಿ ಹಣ ಹೊಂದಿಸಿದ್ದ ಉಮೇಶ್, ಕಾರು ಚಾಲಕ ಸ್ವಾಮಿ ಜೊತೆ ಚಿತ್ರದುರ್ಗದಿಂದ ಹೊರಟಿದ್ದರು. ಕಾರಿನ ಡಿಕ್ಕಿಯಲ್ಲಿ ಹಣದ ಬ್ಯಾಗ್ ಇರಿಸಿದ್ದರು. ಶಿರಾ ಹಾಗೂ ತುಮಕೂರಿಗೆ ಹೋಗಿ ರೈತರನ್ನು ವಿಚಾರಿಸಿದಾಗ, ಅಡಿಕೆ ಸಿಕ್ಕಿರಲಿಲ್ಲ. ಹೀಗಾಗಿ, ಬೆಂಗಳೂರಿನ ಚಂದ್ರಾಲೇಔಟ್‌ನ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿದ್ದ ಮಗಳನ್ನು ಮಾತನಾಡಿಸಿಕೊಂಡು ಹೋದರಾಯಿತೆಂದು ಬೆಂಗಳೂರಿಗೆ ಬಂದಿದ್ದರು' ಎಂದು ತಿಳಿಸಿದರು.

'ಮಧ್ಯಾಹ್ನ 2 ಗಂಟೆಗೆ ಗಾಂಧಿನಗರದ ಕಾಳಿದಾಸ ರಸ್ತೆಯಲ್ಲಿರುವ ಗಿರಿಯಾಸ್ ಬಳಿ ಕಾರು ನಿಲ್ಲಿಸಿದ್ದ ಉಮೇಶ್ ಹಾಗೂ ಸ್ವಾಮಿ, ಸಮೀಪದಲ್ಲಿದ್ದ ಹೋಟೆಲ್‌ಗೆ ಹೋಗಿದ್ದರು. ಅಲ್ಲಿ ಊಟ ಮಾಡಿಕೊಂಡು ವಾಪಸು ಬಂದು ಕಾರು ತೆಗೆದುಕೊಂಡು ಚಂದ್ರಾಲೇಔಟ್‌ಗೆ ಹೋಗಿದ್ದರು. ಮಗಳನ್ನು ಹಾಗೂ ಕೆಲ ಸಂಬಂಧಿಕರನ್ನು ಮಾತನಾಡಿಸಿಕೊಂಡು ಅಲ್ಲಿಂದ ಚಿತ್ರದುರ್ಗದತ್ತ ಹೊರಟಿದ್ದರು. ಚಹಾ ಕುಡಿಯಲೆಂದು ಚಾಲಕ ಸ್ವಾಮಿ, ಡಾಬಸ್‌ಪೇಟೆ ಬಳಿ ಕೆಲ ನಿಮಿಷ ಕಾರು ನಿಲ್ಲಿಸಿದ್ದ.'

'ಚಹಾ ಕುಡಿಯುವುದು ಮುಗಿದ ನಂತರ, ಕಾರಿನಲ್ಲಿ ಭೀಮಸಮುದ್ರಕ್ಕೆ ಹೋಗಿದ್ದರು. ಅವಾಗಲೇ ಉಮೇಶ್ ಅವರು ಕಾರಿನ ಡಿಕ್ಕಿ ನೋಡಿದ್ದರು. ಆದರೆ, ಡಿಕ್ಕಿಯಲ್ಲಿ ಹಣದ ಬ್ಯಾಗ್ ಇರಲಿಲ್ಲ. ಹಲವೆಡೆ ಹುಡುಕಾಡಿದರೂ ಬ್ಯಾಗ್ ಸಿಕ್ಕಿರಲಿಲ್ಲ. ಪಾಲುದಾರರಾದ ಸ್ನೇಹಿತನ ಜೊತೆ ಚರ್ಚಿಸಿದ ಬಳಿಕವೇ ಉಮೇಶ್ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ವ್ಯಾಪಾರ ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಕಡ್ಡಾಯ'

ಬೆಂಗಳೂರು: 'ಜನರು ಹೆಚ್ಚಾಗಿ ಬಂದು ಹೋಗುವ ಬಾರ್ ಆ್ಯಂಡ್ ರೆಸ್ಟೋರೆಂಟ್, ಹೋಟೆಲ್, ಅಂಗಡಿ ಹಾಗೂ ಇತರ ವ್ಯಾಪಾರ ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುವುದು ಕಡ್ಡಾಯ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ಯಲಹಂಕ ನ್ಯೂ ಟೌನ್‌ನಲ್ಲಿರುವ ಅಂಬೇಡ್ಕರ್ ಭವನದಲ್ಲಿ ಶನಿವಾರ ಆಯೋಜಿಸಿದ್ದ ಜನ ಸಂಪರ್ಕ ಸಭೆಯಲ್ಲಿ ಜನರ ದೂರುಗಳನ್ನು ಆಲಿಸಿ ಅವರು ಮಾತನಾಡಿದರು. 'ಸಾರ್ವಜನಿಕರ ಸುರಕ್ಷತಾ ಕಾಯ್ದೆ ಪ್ರಕಾರ, ಎಲ್ಲ ವ್ಯಾಪಾರ ಸ್ಥಳಗಳಲ್ಲಿ ಕ್ಯಾಮೆರಾ ಅಳವಡಿಸಬೇಕು. ಇದರಿಂದ ಅಪರಾಧ ನಿಯಂತ್ರಿಸಬಹುದು. ಕ್ಯಾಮೆರಾ ಬಗ್ಗೆ ಮಾರ್ಗದರ್ಶನ ಅಗತ್ಯವಿದ್ದರೆ, ಸಂಬಂಧಪಟ್ಟ ಠಾಣೆಯ ಪೊಲೀಸರನ್ನು ಸಂಪರ್ಕಿಸಬಹುದು' ಎಂದು ದಯಾನಂದ್ ತಿಳಿಸಿದರು.

ವಿಶ್ವ ಬಂಟರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಬಂಟರ ಅಭಿವೃದ್ಧಿ ನಿಗಮ ಸ್ಥಾಪನೆ

ಪ್ರಜಾವಾಣಿ ವಾರ್ತೆ



ವಿಶ್ವ ಬಂಟರ ಸಮ್ಮೇಳನದಲ್ಲಿ ಕಂಬಳ ಕೋಣಗಳು ಪ್ರಮುಖ ಆಕರ್ಷಣೆಯಾಗಿದ್ದವು -ಪ್ರಜಾವಾಣಿ ಚಿತ್ರ

ಉಡುಪಿ: 'ಬಂಟರ ಅಭಿವೃದ್ಧಿ ನಿಗಮ'ವನ್ನು ಮುಂದಿನ ಬಜೆಟ್‌ನಲ್ಲಿ ಘೋಷಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಜಾಗತಿಕ ಬಂಟರ ಸಂಘಗಳ ಒಕ್ಕೂಟವು ಇಲ್ಲಿನ ನಳಿನ ಭೋಜ ಶೆಟ್ಟಿ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ 'ವಿಶ್ವ ಬಂಟರ ಸಮ್ಮೇಳನ– 2023'ವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಬಂಟರದು ವಿಶಿಷ್ಟ ಸಂಸ್ಕೃತಿ ಮತ್ತು ಪರಂಪರೆ ಹೊಂದಿದ ಜಾತ್ಯತೀತ ಸಮುದಾಯ. ಎಲ್ಲ ಕ್ಷೇತ್ರಗಳಲ್ಲೂ ಛಾಪು ಮೂಡಿಸಿದ್ದಾರೆ. ಎಲ್ಲೇ ಹೋಗಿ ನೆಲೆಸಿದ್ದರೂ ಕರಾವಳಿಯ ಸಂಸ್ಕೃತಿ, ಪರಂಪರೆಯನ್ನು ಮರೆತಿಲ್ಲ. ಬಂಟರು ಜಗತ್ತಿನ ವಿವಿಧ ಕಡೆ ಕನ್ನಡ ಸಂಘಟನೆಗಳನ್ನು ಕಟ್ಟಿಕೊಂಡು ಈ ನೆಲದ ಸಂಸ್ಕೃತಿ ಪರಂಪರೆ ಪಸರಿಸುತ್ತಿದ್ದಾರೆ' ಎಂದು ಶ್ಲಾಘಿಸಿದರು.

ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, 'ಶೋಷಿತರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲರನ್ನು ಕೂಡಿಕೊಂಡು ಹೋಗುವ ಸಮಾಜ ಬಂಟರದು. ಕರಾವಳಿಯಲ್ಲಿ ಎಲ್ಲರನ್ನು ಒಗ್ಗೂಡಿಸುವ ಶಕ್ತಿ ನಿಮ್ಮಲ್ಲಿದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ, 'ನೋಡಲಿಕ್ಕೆ ಬಂಟ ಸಮುದಾಯದಲ್ಲಿ ದೊಡ್ಡಜನರೇ ಇರುವಂತೆ ಕಾಣುತ್ತದೆ. ಸಮಾಜದಲ್ಲಿ ಶ್ರೀಮಂತರು ಶೇ 20 ರಷ್ಟು ಇರಬಹುದು. ಶೇ 60 ರಷ್ಟು ಬಂಟರು ಬಡವರು. ಉಳ್ಳವರು ದೇಣಿಗೆ ನೀಡಿ ಬಡವರನ್ನು ಮೇಲೆತ್ತುವ ಕೆಲಸ ಮಾಡುತ್ತಿದ್ದೇವೆ. ಬಂಟರ ಅಭಿವೃದ್ಧಿ ನಿಗಮ ಸ್ಥಾಪಿಸಿದರೆ ಸಮಾಜದ ಬಡವರಿಗೆ ಅನುಕೂಲ ಆಗಲಿದೆ' ಎಂದು ಹೇಳಿದರು.

ಬಾರ್ಕೂರು ಭಾರ್ಗವ ಮಹಾಸಂಸ್ಥಾನದ ವಿಶ್ವ ಸಂತೋಷ ಭಾರತಿ ಶ್ರೀಪಾದರು ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ, ಜನಪ್ರತಿನಿಧಿಗಳು, ಒಕ್ಕೂಟದ ಅಧೀನದ 150 ಕ್ಕೂ ಹೆಚ್ಚು ಬಂಟರ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಬಂಟರ ಒಗ್ಗಟ್ಟು ಪ್ರದರ್ಶನ: ಸಮ್ಮೇಳನ ಅಂಗವಾಗಿ ಅಜ್ಜರಕಾಡು ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಆಕರ್ಷಕ ಪಥ ಸಂಚಲನ ತುಳುನಾಡಿನ ನೆಲದ ಸಂಸ್ಕೃತಿ ಮತ್ತು ಬಂಟರ ನಡುವಿನ ನಂಟಿನ ಪ್ರದರ್ಶನಕ್ಕೆ ವೇದಿಕೆಯಾಯಿತು.

ದೇಶದ ವಿವಿಧ ಭಾಗಗಳಲ್ಲಿ ನೆಲೆಸಿ, ಅಲ್ಲೇ ಸಂಘಟನೆ ಕಟ್ಟಿಕೊಂಡ ಬಂಟರ ತಂಡಗಳು ಸಮವಸ್ತ್ರ ಧಾರಿಗಳಾಗಿ ಹೆಜ್ಜೆ ಹಾಕುವ ಮೂಲಕ ಒಗ್ಗಟ್ಟು ಪ್ರದರ್ಶಿಸಿದರು. ತಂಡದ ಜೊತೆ ಸಾಗಿ ಬಂದ ಕಂಬಳದ ಕೋಣ, ವೇದಿಕೆಗೆ ನಮಸ್ಕಾರ ಹಾಕುವ ಮೂಲಕ ಗಮನ ಸೆಳೆಯಿತು.

'ಜನಪದರಿಲ್ಲದ ಅರ್ಧ ಸತ್ಯದ ಚರಿತ್ರೆ'

ಪ್ರಜಾವಾಣಿ ವಾರ್ತೆ



ಬಾನಂದೂರು ಕೆಂಪಯ್ಯ ಅವರ ಬದುಕು–ಹಾಡುಗಾರಿಕೆ ಕುರಿತ 'ಬಾನಂದದ ಕಿನ್ನೂರಿ' ಅಭಿನಂದನಾ ಗ್ರಂಥವನ್ನು ನಗರದಲ್ಲಿ ಶನಿವಾರ ಜನಪದ ವಿದ್ವಾಂಸ ಹಿ.ಚಿ. ಬೋರಲಿಂಗಯ್ಯ ಬಿಡುಗಡೆ ಮಾಡಿದರು.

ಕೃತಿ ಪರಿಚಯ

ಅಭಿನಂದನಾ ಗ್ರಂಥ: ಬಾನಂದದ ಕಿನ್ನೂರಿ
ಸಂಪಾದಕ: ಲಕ್ಷ್ಮಣ ಕೊಡಸೆ
ಪ್ರಕಾಶನ: ಪಿತಾಮಹ ಪ್ರಕಾಶನ
ಪುಟ: 408
ದರ: ₹450

ಬೆಂಗಳೂರು: 'ಜನಪದರನ್ನು, ಜನ ಸಾಮಾನ್ಯರನ್ನು ಒಳಗೊಳ್ಳದ ಮೋಸದ ಚರಿತ್ರೆ ನಮ್ಮದು. ರಾಜರ, ಪಂಡಿತರ ಬಗ್ಗೆ ಇರುವ ಅರ್ಧ ಸತ್ಯದ ಚರಿತ್ರೆ' ಎಂದು ಜನಪದ ವಿದ್ವಾಂಸ ಹಿ.ಚಿ. ಬೋರಲಿಂಗಯ್ಯ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ಬಾನಂದೂರು ಕೆಂಪಯ್ಯ ಅವರ ಬದುಕು–ಹಾಡುಗಾರಿಕೆ ಕುರಿತ 'ಬಾನಂದದ ಕಿನ್ನೂರಿ' ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಂಪಿಯ ಚರಿತ್ರೆ ಅಂದ ಕೂಡಲೇ ಮುತ್ತು, ರತ್ನ ಬೀದಿಯಲ್ಲಿ ಮಾರಾಟ ಮಾಡಿರುವ ಬಗ್ಗೆ, ಅಲ್ಲಿನ ದೇವಸ್ಥಾನ, ರಾಜರ ಬಗ್ಗೆ ವಿವರ ಸಿಗುತ್ತದೆ. ಆದರೆ, ವಿಜಯ ವಿಠಲ ದೇವಸ್ಥಾನವನ್ನು ಕಟ್ಟಿದ ಶಿಲ್ಪಿ ಯಾರು? ಶಿಲ್ಪಿ ಜೊತೆಗೆ ಕೆಲಸ ಮಾಡಿದವರು ಯಾರು? ಎಷ್ಟು ಮಂದಿ ಜೀವ ಕಳೆದುಕೊಂಡಿದ್ದಾರೆ ಎಂಬ ವಿವರಗಳು ಸಿಗುವುದಿಲ್ಲ. ಶೂದ್ರರ, ಜನಸಾಮಾನ್ಯರ ಚರಿತ್ರೆ ಸಿಗುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಾನಂದೂರು ಕೆಂಪಯ್ಯ ಅವರು ದಶಕಗಳ ಹಿಂದೆಯೇ ಚರ್ಮ ವಾದ್ಯ ಸಮ್ಮೇಳನ ಮಾಡಿ ತೆರೆಮರೆಯಲ್ಲಿದ್ದ ಸಾವಿರಾರು ಕಲಾವಿದರಿಗೆ ವೇದಿಕೆ ಕಲ್ಪಿಸಿ ಗುರುತಿಸುವ ಕೆಲಸ ಮಾಡಿದರು. ಕೆಲವೇ ಜನಪ್ರಿಯ ಜನಪದ ಹಾಡುಗಳು ಪ್ರಚಲಿತದಲ್ಲಿವೆ. ನೂರಾರು ಜನಪದ ಹಾಡುಗಳು, ಧ್ವನಿಗಳ ಬಗ್ಗೆ ಯುವಪೀಳಿಗೆಗೆ ಅರಿವಿಲ್ಲ. ಅದನ್ನು ತಿಳಿಸಲು ಜನಪದ ಡಿಪ್ಲೊಮಾ ಕೋರ್ಸ್ ಆರಂಭಿಸುವ ಅಗತ್ಯ ಇದೆ ಎಂದರು.

ಪಿತಾಮಹ ಪ್ರಕಾಶನದ ಡಿ.ಎಸ್. ವೀರಯ್ಯ, ನಿವೃತ್ತ ಎಡಿಜಿಪಿ ಸುಭಾಷ್ ಭರಣಿ, ನಿವೃತ್ತ ಎಸ್‌ಪಿ ವೇಮಗಲ್ ನಾರಾಯಣ ಸ್ವಾಮಿ, ಜನಪದ ತಜ್ಞ ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿದರು. ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಬಾನಂದೂರು ಕೆಂಪಯ್ಯ–ಸುಚಿತ್ರಾ ದಂಪತಿಯನ್ನು ಸನ್ಮಾನಿಸಲಾಯಿತು.

ನಗರದಲ್ಲಿ ಇಂದು

ಹುತಾತ್ಮ ಯೋಧರ ಸ್ಮರಣಾರ್ಥ 'ಸಮರ್ಪಣ ಓಟ': ಆಯೋಜನೆ ಹಾಗೂ ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಹೊರವರ್ತುಲ ರಸ್ತೆ, ಬೆಳಿಗ್ಗೆ 6


ಪುನೀತ್ ರಾಜಕುಮಾರ್ ಅವರ ಚಿತ್ರಗೀತೆಗಳ ಫ್ಲಾಷ್ ಮಾಬ್ ಮತ್ತು ಬೈಕ್ ರ್‍ಯಾಲಿ: ಮುಖ್ಯ ಅತಿಥಿ: ಅರವಿಂದ್ ಕೆ.ಪಿ., ದಿವ್ಯಾ ಉರುಡುಗ, ಕೆ.ವಿ. ಉನ್ನಿಕೃಷ್ಣನ್. ಸಂಯೋಜನೆ: ಅಕ್ಟೋಬರ್ ಬೈಕರ್ಸ್ ಫೆಸ್ಟ್, ಸ್ಥಳ: ವಿಧಾನ ಸೌಧ ಬಳಿ, ಬೆಳಿಗ್ಗೆ 6.30

2ನೇ ವರ್ಷದ ವಿನಾಯಕ ಪ್ರತಿಷ್ಠಾಪನೆ ಮಹೋತ್ಸವ: ಆಯೋಜನೆ: ಸ್ವಯಂ ಜಾಗೃತಿ ಸೇವಾ ಟ್ರಸ್ಟ್, ಸ್ಥಳ: 2ನೇ ಮುಖ್ಯರಸ್ತೆ, ಕಲ್ಯಾಣ ನಗರ, ನಾಗರಬಾವಿ ಮುಖ್ಯರಸ್ತೆ, ಬೆಳಿಗ್ಗೆ 7ರಿಂದ

ಆದಿಶಕ್ತಿಯಲ್ಲಮ್ಮದೇವಿ ಮತ್ತು ಮುನೇಶ್ವರ ಸ್ವಾಮಿ ಉತ್ಸವ: ದೇವಿಗೆ ಅಭಿಷೇಕ, ಅರ್ಚನೆ ಅಲಂಕಾರ ಹರಿಕಥೆ, ಭಜನೆ, ಮಹಾ ಮಂಗಳಾರತಿ, ಅನ್ನ ಸಂತರ್ಪಣೆ, ಆಯೋಜನೆ: ರೇಣುಕಾ ಯಲ್ಲಮ್ಮ ದೇವಿ ಸೇವಾ ಸಮಿತಿ ಟ್ರಸ್ಟ್, ಸ್ಥಳ: ದೇವಸ್ಥಾನದ ಆವರಣ, ಬೆಳಿಗ್ಗೆ 8ರಿಂದ

ಪ್ರೇರಣಾ ಸಮಾರಂಭ: ಸಾನ್ನಿಧ್ಯ: ಸಿದ್ಧರಾಮನಂದ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಂ.ಟಿ.ಬಿ. ನಾಗರಾಜ್, ಮುಖ್ಯ ಅತಿಥಿಗಳು: ಎಚ್.ಎಂ. ರೇವಣ್ಣ, ಬೈರತಿ ಸುರೇಶ್, ಆಯೋಜನೆ: ಕಾಳಿದಾಸ ಹೆಲ್ತ್ ಆ್ಯಂಡ್ ಎಜುಕೇಷನ್ ಟ್ರಸ್ಟ್, ಅಹಿಲ್ಯಾ ಫೌಂಡೇಷನ್, ಸ್ಥಳ: ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 9

53ನೇ ಸಂಗೀತ ಸಮ್ಮೇಳನ: ಸಮ್ಮೇಳನಾಧ್ಯಕ್ಷತೆ: ವಿದ್ಯಾಭೂಷಣ, ಉದ್ಘಾಟನೆ: ಚಿರಂಜೀವಿ ಸಿಂಘ್, ಮುಖ್ಯ ಅತಿಥಿ: ಕಬ್ಬಿನಾಲೆ ವಸಂತ ಭಾರದ್ವಾಜ್, ಅಧ್ಯಕ್ಷತೆ: ಎಂ.ಆರ್.ವಿ. ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 10



ವಿದ್ಯಾಭೂಷಣ

ಡಾ. ಬಾಬಾಸಾಹೇಬ ಅಂಬೇಡ್ಕರ (ಜೀವನ ಚರಿತ್ರೆ) ಜನಾರ್ಪಣೆ: ಉದ್ಘಾಟನೆ: ಮೂಡ್ನಾಕೂಡು ಚಿನ್ನಸ್ವಾಮಿ, ಜನಾರ್ಪಣೆ: ಎಚ್.ಟಿ. ಪೋತೆ, ಕೃತಿ ಪರಿಚಯ: ಸುಭಾಷ ರಾಜಮಾನೆ, ಉಪಸ್ಥಿತಿ: ಜೆ.ಪಿ. ದೊಡಮನಿ, ಪ್ರಭಾ ಬೋರಗಾಂವಕರ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಬೆಳಿಗ್ಗೆ 10

ಆರ್ಕಿಡ್ ಪ್ರದರ್ಶನ: ಆಯೋಜನೆ: ಆರ್ಕಿಡ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲ್ಯಾಂಗ್‌ಫೋರ್ಡ್ ರಸ್ತೆ, ಬೆಳಿಗ್ಗೆ 10

'ಇಸ್ರೇಲ್–ಹಮಾಸ್ ಯುದ್ಧ', ಸಂಸ್ಕೃತಿ–ಸಂವಾದ: ಡಿ.ವಿ. ಗುರುಪ್ರಸಾದ್, ಅಜಿತ್ ಹನಮಕ್ಕನವರ್, ಶ್ರೇಯಾಂಕ ರಾನಡೆ, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

ಕೆ.ಸಿ. ರಘು ಅವರಿಗೆ ನಮನ: ಬಿ.ಎಲ್. ಶಂಕರ್, ವಿ.ಆರ್. ಸುದರ್ಶನ್, ದಿನೇಶ್ ಅಮೀನ್ ಮಟ್ಟು, ಸುಗತ ಶ್ರೀನಿವಾಸ ರಾಜು, ನೆಲ್ಲುಕುಂಟೆ ವೆಂಕಟೇಶ್, ನಟರಾಜ್ ಬೂದಾಳ್, ಎಲ್.ಎನ್. ಮುಕುಂದರಾಜ್, ಮಾಲೂರು ಶಿವಣ್ಣ, ಕರೀಗೌಡ, ಅಂಶುಮಾನ್, ತಲಕಾಡು ಚಿಕ್ಕರಂಗೇಗೌಡ, ನಿಕೇತ್‌ರಾಜ್ ಮೌರ್ಯ, ಮಾವಳ್ಳಿ ಶಂಕರ್, ವಾಸು, ಮಧು ಚಂದನ್, ಆಯೋಜನೆ: ಕೆ.ಸಿ. ರಘು ಕುಟುಂಬ ವರ್ಗ, ಸ್ಥಳ: ರಮಣ ಮಹರ್ಷಿ ಆಡಿಟೋರಿಯಂ, ಸಂಜಯನಗರ, ಬೆಳಿಗ್ಗೆ 10.30



ಡಾ.ಕೆ.ಸಿ. ರಘು

ಚಿಕೇನಕೊಪ್ಪದ ಚನ್ನವೀರ ಶರಣರ 28ನೇ ಪುಣ್ಯಸ್ಮರಣೋತ್ಸವ: ಸಾನ್ನಿಧ್ಯ: ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಶಿವಶಾಂತವೀರ ಸ್ವಾಮೀಜಿ, ಉಪನ್ಯಾಸ: ಸಿದ್ಧರಾಮ ಶಿವಯೋಗಿ ಸ್ವಾಮೀಜಿ, ಆಯೋಜನೆ: ಚಿಕೇನಕೊಪ್ಪದ ಶ್ರೀ ಚೆನ್ನವೀರ ಶರಣರ ಬಳಗ, ಸ್ಥಳ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ, ಆನಂದರಾವ್ ಸರ್ಕಲ್, ಬೆಳಿಗ್ಗೆ 10

ಕನ್ನಡ ಹಬ್ಬ: ಕರ್ನಾಟಕ ಕೈಮಗ್ಗ ಸೀರೆಗಳ, ಕರಕುಶಲ ಉತ್ಪನ್ನಗಳ ಪ್ರದರ್ಶನ, ಆಯೋಜನೆ ಹಾಗೂ ಸ್ಥಳ: ರಾಗಿಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10

ಧೀರೇಂದ್ರ ಎಸ್. ಅವರ 'ಹವ್ಯಾಸಿರಂಗದ ಮುತ್ತು ರತ್ನಗಳು' ಪುಸ್ತಕ ಬಿಡುಗಡೆ: ಶ್ರೀನಾಥ್, ಮುಖ್ಯ ಅತಿಥಿ: ಗಿರಿಜಾ ಲೋಕೇಶ್, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಉಪಸ್ಥಿತಿ: ಬೆಂ.ಶ್ರೀ. ರವೀಂದ್ರ, ಆಯೋಜನೆ: ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ, ಆಯೋಜನೆ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

ಎಸ್‌ಆರ್‌ವಿಎಸ್ ರಾಯಲ್ ಬ್ಯಾಚ್ 1983ರ 40ನೇ ವರ್ಷದ ಸ್ನೇಹ ಸಂಗಮ ಹಾಗೂ ಗುರುವಂದನೆ: ಸಾನ್ನಿಧ್ಯ: ಜಯೇಂದ್ರಪುರಿ ಸ್ವಾಮೀಜಿ, ಅಧ್ಯಕ್ಷತೆ: ಗೋಪಾಲನ್, ಮುಖ್ಯ ಅತಿಥಿ: ಟಿ.ಆರ್. ಮೋಹನ್, ಡಿ.ಎನ್. ಆನಂದ್, ಆಯೋಜನೆ ಹಾಗೂ ಸ್ಥಳ: ರಾಜೇಶ್ವರಿ ವಿದ್ಯಾಶಾಲಾ, ಕೆಂಚೇನಹಳ್ಳಿ, ರಾಜೇಶ್ವರಿನಗರ, ಬೆಳಿಗ್ಗೆ 10.30

ರಸ್ತೆ ಸಾರಿಕ ಕಾರ್ಮಿಕರ ರಾಜ್ಯಮಟ್ಟದ ಸಮಾವೇಶ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎಚ್.ಎಸ್. ಮಂಜುನಾಥ್, ಆಯೋಜನೆ: ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಷನ್, ಸ್ಥಳ: ಗುಂಡೂರಾವ್ ಕ್ರೀಡಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 11

ಕಲಾ ಸೇವಾ ಪುರಸ್ಕಾರ ಪ್ರದಾನ: ಪುರಸ್ಕೃತರು: ಪಂಡಿತ್ ರವೀಂದ್ರ ಯಾವಗಲ್, ಫೈಯಾಜ್ ಖಾನ್, ಆನೂರು ಅನಂತ ಕೃಷ್ಣ ಶರ್ಮ, ಪ್ರಶಸ್ತಿ ಪ್ರದಾನ: ಎಚ್.ಆರ್. ನಾಗೇಂದ್ರ, ಉಪಸ್ಥಿತಿ: ವಿಶ್ವನಾಥ ಪ್ರಸಾದ್ ಎಚ್., ಆಯೋಜನೆ: ಹಜಾರಿ ಪ್ರಸಾದ್ ಫೌಂಡೇಶನ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ವೈಯಾಲಿಕಾವಲ್, ಮಧ್ಯಾಹ್ನ 12.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಜನಭಾವ ನವಗಾನ: ಕಾ.ವೆಂ. ಶ್ರೀನಿವಾಸಮೂರ್ತಿ ವಿರಚಿತ ಗೀತೆಗಳ ಗಾಯನ, ಮುಖ್ಯ ಅತಿಥಿಗಳು: ಎಲ್.ಎ. ರವಿಸುಬ್ರಹ್ಮಣ್ಯ, ಸಿ.ಪಿ. ಚನ್ನೇಗೌಡ, ಪುಟ್ಟ ಶಂಕರಯ್ಯ, ಗಾಯನ: ಆನಂದ ಮಾದಲಗೆರೆ, ಮಂಜುಳಾ ಚಿಂಚಲಿ, ರಾಮಚಂದ್ರ ಮಳೂರ್‌ಪಟ್ನ, ಕೆ.ಸಿ. ಚಲ್ಲಯ್ಯ, ಬಿ.ಎನ್. ಗಣೇಶ್, ಜಿ.ಬಿ. ರಾಜು, ಆಯೋಜನೆ: ಮಂದಾರ ಗಾಯನ ಚೇತನಾ ಟ್ರಸ್ಟ್, ಸ್ಥಳ: ಕೆ.ಎಸ್. ನರಸಿಂಹಸ್ವಾಮಿ ಪಾರ್ಕ್, ಕತ್ರಿಗುಪ್ಪೆ ವಾಟರ್ ಟ್ಯಾಂಕ್, ಸಂಜೆ 4

ಋತುಸೌರಭ ಫೌಂಡೇಷನ್ ಉದ್ಘಾಟನೆ: ಅಧ್ಯಕ್ಷತೆ: ಬಿ.ವಿ. ರಾಜಾರಾಂ, ಉದ್ಘಾಟನೆ: ಸ್ಮಿತಾ ರೆಡ್ಡಿ, ಲಾಂಛನ ಅನಾವರಣ: ಜಯಶ್ರೀ ಅರವಿಂದ್, ಶೀರ್ಷಿಕೆ ಗೀತೆ ಅನಾವರಣ: ಶಶಿಧರ ಕೋಟೆ, ಕೃತಿ ಲೋಕಾರ್ಪಣೆ: ಜಿ.ಎನ್. ಮೋಹನ್, ಅತಿಥಿಗಳು: ಎಸ್. ಷಡಕ್ಷರಿ, ವಿಜಯಲಕ್ಷ್ಮೀ ಸತ್ಯಮೂರ್ತಿ, ಬಾಲಾಜಿ ರಾವ್ ಎನ್., ಆಯೋಜನೆ: ಋತುಸೌರಭ ಫೌಂಡೇಶನ್, ಸ್ಥಳ: ಕೃಷ್ಣರಾಜ ಪರಿಷನ್ಮಂದಿರ, ಚಾಮರಾಜಪೇಟೆ, ಸಂಜೆ 4

ದಾಸವಾಣಿ ಕಾರ್ಯಕ್ರಮ: ಮೈಸೂರು ರಾಮಚಂದ್ರಾಚಾರ್ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 10ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಅಶ್ವಿತಾ ಎಸ್., ಲಿಪಿ ಮಹೇಂದ್ರನ್, ಆಯೋಜನೆ: ನಿರಂತರ ಸ್ಕೂಲ್ ಆಫ್ ಡ್ಯಾನ್ಸ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 5.30

ಅ'ಸಾಮಾನ್ಯ' ಗೀತೆ: ಉಪಸ್ಥಿತಿ: ಎ.ಎಂ. ಚಂದ್ರಶೇಖರ, ಶ್ಲೋಕ: ಅಕ್ಷಯ್ ಎಂ. ಭಾರದ್ವಾಜ್, ಶ್ಲೋಕಾರ್ಥ: ನವ್ಯ ಪಿ., ವಾಚನ: ಶ್ರೀಮತಿ ಜಯರಾಮ್, ಗಾಯನ: ಪ್ರಮಥ ಪಿ. ದಿಕ್ಷೀತ್, ಕವಿಗಳು ಕಂಡಂತೆ: ಭ.ರಾ. ವಿಜಯಕುಮಾರ್, ಆಯೋಜನೆ ಹಾಗೂ ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ದೊಡ್ಡಬೊಮ್ಮಸಂದ್ರ, ಸಂಜೆ 5.30

ಕಾರ್ನಾಡರ ನೆನಪು, ತುಘಲಕ್–100ರ ಸಂಭ್ರಮ: 'ತುಘಲಕ್' ನಾಟಕ ಪ್ರದರ್ಶನ, ರಚನೆ: ಗಿರೀಶ್ ಕಾರ್ನಾಡ್, ನಿರ್ದೇಶನ: ಸಾಮ್ ಕುಟ್ಟಿ ಪಟ್ಟಂಕರಿ, ಸಹ ನಿರ್ದೇಶನ: ಶ್ರೀಪಾದ್ ಭಟ್, ಆಯೋಜನೆ: ಸಮುದಾಯ ಬೆಂಗಳೂರು, ಸಂಜೆ 6.30

ಬಿಸಿಯೂಟ ನೌಕರರ ಧರಣಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಇಲಾಖೆಯಡಿ ಅಕ್ಷರ ದಾಸೋಹ ಯೋಜನೆ ಅನುಷ್ಠಾನ, ನಿವೃತ್ತಿಯಾದವರಿಗೆ ₹1 ಲಕ್ಷ ಇಡುಗಂಟು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿರುವ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ, ಇದೇ 30ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಗೌರವಾಧ್ಯಕ್ಷೆ ಎಸ್. ವರಲಕ್ಷ್ಮಿ, 'ರಾಜ್ಯದಲ್ಲಿ ಬಿಸಿಯೂಟ ನೌಕರರ ಮೇಲೆ ಶೋಷಣೆ ನಡೆಯುತ್ತಿದ್ದು, ನೌಕರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಸೂಕ್ತ ಸ್ಪಂದನೆ ದೊರೆತಿಲ್ಲ. ಆದ್ದರಿಂದ ನ.30ರಿಂದ ಮುಂದಿನ 15 ದಿನಗಳ ಅವಧಿಯಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಒಂದು ದಿನ ಬಿಸಿಯೂಟದ ಕೆಲಸ ಸ್ಥಗಿತಗೊಳಿಸಿ, ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸುತ್ತಾರೆ. ಬಳಿಕ ರಾಜ್ಯದಾದ್ಯಂತ ಬಿಸಿಯೂಟವನ್ನು ಸ್ಥಗಿತ ಮಾಡಲಾಗುವುದು' ಎಂದು ಹೇಳಿದರು.

'ಅಕ್ಷರ ದಾಸೋಹ ಯೋಜನೆಯಡಿ ರಾಜ್ಯದಲ್ಲಿ 55.80 ಲಕ್ಷ ಮಕ್ಕಳು ಆಹಾರ ಸೇವಿಸುತ್ತಿದ್ದಾರೆ. ಮಕ್ಕಳ ಅನುಪಾತದ ಆಧಾರದಲ್ಲಿ ಅಡುಗೆಯವರನ್ನು ನೇಮಕ ಮಾಡಬೇಕು. ಎಸ್‌ಡಿಎಂಸಿ ಅಧ್ಯಕ್ಷರಿಗೆ ನೀಡಿರುವ ಸಾದಿಲ್ವಾರು ಜಂಟಿ ಖಾತೆ ಜವಾಬ್ದಾರಿಯನ್ನು ಮುಖ್ಯ ಅಡುಗೆದಾರರಿಗೆ ನೀಡಬೇಕು. ಕೆಲಸದ ಸ್ಥಳದಲ್ಲಿ ಮರಣ ಹೊಂದಿದರೆ ₹ 25 ಲಕ್ಷ ಪರಿಹಾರ ಕೊಡಬೇಕು. ಹಾಜರಾತಿ ಆಧಾರದಲ್ಲಿ ಕೆಲಸದಿಂದ ತೆಗೆಯುವ ಕ್ರಮ ನಿಲ್ಲಬೇಕು. ಬಿಸಿಯೂಟ ಯೋಜನೆಯನ್ನು ಯಾವುದೇ ಖಾಸಗಿ ಸಂಸ್ಥೆಗಳಿಗೆ ನೀಡಬಾರದು' ಎಂದು ಆಗ್ರಹಿಸಿದರು.

'ನಿವೃತ್ತಿಯಾದವರಿಗೆ ತಲಾ ₹1 ಲಕ್ಷ ಇಡುಗಂಟು ಕೊಡಬೇಕು. ಬೇಸಿಗೆ ಮತ್ತು ದಸರಾ ರಜೆಗಳ ವೇತನವನ್ನು ನೀಡಬೇಕು. ಪ್ರತಿ ಶಾಲೆಯಲ್ಲಿ ಕನಿಷ್ಠ ಎರಡು ಮಂದಿ ಅಡುಗೆಯವರ ನೇಮಕ ಸೇರಿ 16 ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು' ಎಂದು ಒತ್ತಾಯಿಸಿದರು.

'ಕೇಂದ್ರದ ಸುತ್ತೋಲೆ ವಿರೋಧಿಸಿ ಪತ್ರ'

ಬೀದರ್: 'ಹತ್ತು ಲಕ್ಷ ಜನಸಂಖ್ಯೆಗೆ ನೂರು ಮೆಡಿಕಲ್ ಸೀಟುಗಳನ್ನು ಮಾತ್ರ ನಿಗದಿಪಡಿಸಬೇಕು ಎಂ ದು ಕೇಂದ್ರ ಸರ್ಕಾರ ಹೊರಡಿಸಿರುವ ಸುತ್ತೋಲೆಗೆ ರಾಜ್ಯದ ವಿರೋಧವಿದೆ. ಈ ಸಂಬಂಧ ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ಪತ್ರ ಬರೆದು ವಿರೋಧ ಸೂಚಿಸಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ತಿಳಿಸಿದರು.

ನಗರದ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಬ್ರಿಮ್ಸ್) ಶನಿವಾರ ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಶಾಖೆಯ 89ನೇ ವಾರ್ಷಿಕ ಸಮ್ಮೇಳನ 'ಮೆಡಿಕಾನ್'–2023ರಲ್ಲಿ ಮಾತನಾಡಿದರು.

'ಶಾಲೆಯಲ್ಲಿ ರಾಮಾಯಣ ಕಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮಾಯಣ, ಮಹಾಭಾರತ, ಭಗವದ್ಗೀತೆಯಂತಹ ಮಹಾಕಾವ್ಯಗಳ ಕಲಿಕೆಗೆ ಶಾಲೆಗಳಲ್ಲಿ ಅವಕಾಶ ಇರಬೇಕು. ಈ ಮಹಾಕಾವ್ಯಗಳ ಕುರಿತು ಮಕ್ಕಳಲ್ಲಿ ಸಂಪೂರ್ಣ ಅರಿವು ಇರಬೇಕು' ಎಂದು ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಮಾಯಣವು ಮನುಷ್ಯನ ಸಾರ್ಥಕ ಜೀವನಕ್ಕೆ ಮಾರ್ಗದರ್ಶನ ನೀಡುತ್ತದೆ. ರಾಮಾಯಣವನ್ನು ಪ್ರಶ್ನಿಸುವ, ನಮ್ಮ ನಂಬಿಕೆಗಳನ್ನು ಅನುಮಾನಿಸುವಂತಹ ಕೃತ್ಯಗಳು ನಡೆಯುತ್ತಿವೆ. ನಮ್ಮ ಮಹಾಕಾವ್ಯಗಳ ಕಲಿಕೆಗೆ ಶಾಲೆಗಳಲ್ಲೂ ಅವಕಾಶ ನೀಡುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯನ್ನು ಸರ್ಕಾರದಿಂದ ನಡೆಸಲು ಬಿಜೆಪಿ ಆಡಳಿತದ ಅವಧಿಯಲ್ಲಿ ನಿರ್ಧರಿಸಲಾಗಿತ್ತು. ಆ ಮೂಲಕ ವಾಲ್ಮೀಕಿಯವರಿಗೆ ಗೌರವ ಸಲ್ಲಿಸುವ ಕೆಲಸವನ್ನು ಬಿಜೆಪಿ ಸರ್ಕಾರ ಮಾಡಿತ್ತು ಎಂದರು.

ವಿಧಾನಸೌಧದಲ್ಲಿ ಆಯೋಜಿಸಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಎಸ್‌ಟಿ ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲಾಗಿದ್ದು, ವಿಕಾಸಸೌಧದ ಕೊಠಡಿ ಸಂಖ್ಯೆ 228ರಲ್ಲಿ ಕಚೇರಿಯನ್ನೂ ತೆರೆಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದಲ್ಲಿ ಶನಿವಾರ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಎಂಟು ಮಂದಿ ಸಾಧಕರಿಗೆ 'ಮಹರ್ಷಿ ವಾಲ್ಮೀಕಿ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಮೀಸಲಿಡುವ ನಿರ್ಧಾರ ತೆಗೆದುಕೊಂಡಿದ್ದೇ ಕಾಂಗ್ರೆಸ್ ಸರ್ಕಾರ. ಮೊದಲು ₹6 ಸಾವಿರ ಕೋಟಿ ಸಿಗುತ್ತಿದ್ದ ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪಯೋಜನೆಯ



ಸಿದ್ದರಾಮಯ್ಯ ಅವರು ಸುಜಾತಮ್ಮ ಸಿ. ವೆಂಕಟೇಶುಲು (ಎನ್‌.ವೈ.ಹನುಮಂತಪ್ಪ ಅವರ ಪರವಾಗಿ), ಜಿ.ಕೆ. ಮಹಾಂತಪ್ಪ, ಮಹಾದೇವಮ್ಮ ರಂಗಸ್ವಾಮಿ, ಸುಕನ್ಯಾ ಮಾರುತಿ, ರಾಮಣ್ಣ ಮಹಾದೇವ ಗಸ್ತಿ, ಸೋಮಣ್ಣ, ಶಾರದಾ ಪ್ರಭು ಹುಲಿ ನಾಯಕ ಅವರಿಗೆ ವಾಲ್ಮೀಕಿ ಪ್ರಶಸ್ತಿ ನೀಡಿದರು. ವಿ.ಎಸ್‌ ಉಗ್ರಪ್ಪ, ಎಚ್‌.ಸಿ. ಮಹದೇವಪ್ಪ, ಆಂಜನೇಯ, ಸತೀಶ ಜಾರಕಿಹೊಳಿ, ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ, ಕೆ.ಎನ್‌.ರಾಜಣ್ಣ, ಬಿ. ನಾಗೇಂದ್ರ, ಕೆ. ಗೋವಿಂದರಾಜು ಇದ್ದಾರೆ — ಪ್ರಜಾವಾಣಿ ಚಿತ್ರ.

ಅನುದಾನವನ್ನು ₹30 ಸಾವಿರ ಕೋಟಿಗೆ ಹೆಚ್ಚಿಸಲಾಯಿತು. ಹಿಂದಿನ ಸರ್ಕಾರ ಈ ಮೊತ್ತ ಹೆಚ್ಚಿಸಲಿಲ್ಲ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದ ನಂತರ ಮಂಡಿಸಿದ ಬಜೆಟ್‌ನಲ್ಲೇ ₹34 ಸಾವಿರ ಕೋಟಿ ಮೀಸಲಿಟ್ಟಿದೆ ಎಂದು ಹೇಳಿದರು.

'ರಾಜ್ಯದ ಜನಸಂಖ್ಯೆಯ ಶೇ 17.1ರಷ್ಟು ಪರಿಶಿಷ್ಟ ಜಾತಿ ಹಾಗೂ ಶೇ 7ರಷ್ಟು ಪರಿಶಿಷ್ಟ ಪಂಗಡದ ಜನರಿದ್ದಾರೆ. ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಪ್ರತ್ಯೇಕ ಅನುದಾನ ಮೀಸಲಿಡಲು ಕಾನೂನು ತಂದ ಮೊದಲ ರಾಜ್ಯ ಕರ್ನಾಟಕ. ಯಾವುದೇ ಸರ್ಕಾರಗಳು ಈ ಕಾನೂನು ಬದಲಾಯಿಸಲು ಸಾಧ್ಯವಿಲ್ಲ ಎಂದರು.

ಒಡಿಶಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್‌.ವೈ. ಹನುಮಂತಪ್ಪ, ವಿವಿಧ ಕ್ಷೇತ್ರಗಳ ಸಾಧಕರಾದ ಮಹಾದೇವಮ್ಮ, ರಾಮಣ್ಣ ಮಹಾದೇವ ಗಸ್ತಿ, ಜಿ.ಓ. ಮಹಾಂತಪ್ಪ, ಸೋಮಣ್ಣ, ಶಾರದ ಪ್ರಭು ಹುಲಿನಾಯಕ, ಸುಕನ್ಯಾ ಮಾರುತಿ, ಸುಜಾತಮ್ಮ ಅವರಿಗೆ ₹5 ಲಕ್ಷ ನಗದು ಒಳಗೊಂಡ ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

'ಚುನಾವಣೆಯಲ್ಲಿ ಸಹಕಾರ'

ಪರಿಶಿಷ್ಟ ಪಂಗಡದ ಶ್ರೇಯೋಭಿವೃದ್ಧಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ಕಾರಣರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದ ಜತೆ ಸಮುದಾಯದ 14 ಶಾಸಕರು ಹಾಗೂ 70 ಲಕ್ಷ ಜನರು ನಿಲ್ಲುತ್ತಾರೆ. ಮುಂದಿನ ಚುನಾವಣಾ ಫಲಿತಾಂಶಗಳಲ್ಲಿ ಅಭೂತಪೂರ್ವ ಸಹಕಾರ ನೀಡಲಿದ್ದಾರೆ ಎಂದು ಸಚಿವ ಬಿ. ನಾಗೇಂದ್ರ ಹೇಳಿದರು.

ಸುದ್ದಿ 2 ನಿಮಿಷ

ಬಸವನಾಡು ಹೆಸರಿಟ್ಟರೆ ಜಗತ್ತಿಗೆ ಇನ್ನಷ್ಟು ಪ್ರಚಾರ: ಸ್ವಾಮೀಜಿ

ಗದಗ: 'ಮಹಾರಾಷ್ಟ್ರದ ಜನರು ಛತ್ರಪತಿ ಶಿವಾಜಿಯನ್ನು ಸಾಂಸ್ಕೃತಿಕ ನಾಯಕ ಅಂತ ಒಪ್ಪಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ವಿವೇಕಾನಂದ, ಪಂಜಾಬ್‌ನಲ್ಲಿ ಗುರುನಾನಕರು ಸಾಂಸ್ಕೃತಿಕ ಗುರುಗಳಾಗಿದ್ದಾರೆ. ಬಸವಣ್ಣನವರಿಗೆ ಯಾವಾಗಲೋ ಆ ಗೌರವ ಸಿಗಬೇಕಿತ್ತು. ಈಗ ಚರ್ಚೆ ಆಗುತ್ತಿದೆ, ಒಳ್ಳೆಯದು. ಸರ್ಕಾರ ಈ ದಿಸೆಯಲ್ಲಿ ಕೆಲಸ ಮಾಡಲಿ' ಎಂದು ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಕರ್ನಾಟಕಕ್ಕೆ 'ಬಸವನಾಡು' ಎಂದು ನಾಮಕರಣ ಮಾಡುವ ಕುರಿತು ನಡೆದಿರುವ ಚರ್ಚೆ ಬಗ್ಗೆ ಶನಿವಾರ ಪ್ರತಿಕ್ರಿಯಿಸಿದ ಅವರು, 'ಬಸವ ಜನ್ಮಭೂಮಿ ವಿಜಯಪುರಕ್ಕೆ ಬಸವೇಶ್ವರ ನಾಮಕರಣ ಪ್ರಕ್ರಿಯೆ ಶುರುವಾಗಿದೆ. ಕರ್ನಾಟಕಕ್ಕೆ ಬಸವನಾಡು ಅಂತ ಹೆಸರಿಟ್ಟರೆ ಚೆನ್ನಾಗಿರುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಬಸವ ತತ್ವ ಆಚರಣೆ ಮಾಡಿದ್ದಲ್ಲಿ ಕರ್ನಾಟಕ ಯಾವತ್ತಿಗೋ ಬಸವ ಕರ್ನಾಟಕ ಆಗುತ್ತಿತ್ತು' ಎಂದರು.



'ಜಗತ್ತಿಗೆ ಮೊದಲ ಪಾರ್ಲಿಮೆಂಟ್ ಕೊಟ್ಟ ವ್ಯಕ್ತಿ ಬಸವಣ್ಣ, ಎಲ್ಲ ಜಾತಿ, ಭಾಷೆಯವರಿಗೆ ಸಾಮಾಜಿಕ ಸಮಾನತೆ ಕೊಟ್ಟರು. ಇಂಗ್ಲೆಂಡ್‌ನಲ್ಲಿ ಬಸವ ಪ್ರತಿಮೆ ನಿರ್ಮಾಣವಾದ ನಂತರ ಜಾಗತಿಕ ಮಟ್ಟದಲ್ಲಿ ಅನುಭವ ಮಂಟಪದ ಬಗ್ಗೆ ಚರ್ಚೆ ಆಯಿತು. ಕರ್ನಾಟಕಕ್ಕೆ ಬಸವನಾಡು ಅಂತ ಹೆಸರಿಟ್ಟರೆ ಬಸವ ವಿಚಾರ ಜಗತ್ತಿಗೆ ಇನ್ನಷ್ಟು ಪ್ರಚಾರ ಆಗಲಿದೆ' ಎಂದರು.

ಬಸವನಾಡು ಹೆಸರು ಅಪ್ರಸ್ತುತ ಶಿವಾನಂದ ಪಾಟೀಲ

ವಿಜಯಪುರ: 'ವಿಜಯಪುರ ಜಿಲ್ಲೆಗೆ ಬಸವ ನಾಡು ಅಥವಾ ಬಸವೇಶ್ವರ ಜಿಲ್ಲೆಯೆಂದು ಮರು ನಾಮಕರಣ ಮಾಡುವುದು ಅಪ್ರಸ್ತುತ. ಗೋಳಗುಮ್ಮಟ ಮತ್ತು ವಿವಿಧ ಸ್ಮಾರಕಗಳಿಂದ ವಿಜಯಪುರ ಈಗಾಗಲೇ ಪ್ರಸಿದ್ಧಿ ಪಡೆದಿದೆ. ಬಸವೇಶ್ವರರ ಜನ್ಮಭೂಮಿ ಮತ್ತು ಕರ್ಮಭೂಮಿಯ ಅಭಿವೃದ್ಧಿಗೆ ಒತ್ತು ನೀಡಬೇಕು' ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

'ಬಸವೇಶ್ವರರ ಜನ್ಮಭೂಮಿ ಮತ್ತು ಕೂಡಲಸಂಗಮ ಅಭಿವೃದ್ಧಿಯಾಗಿಲ್ಲ. ಅವುಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಅಧಿಕಾರದಲ್ಲಿರುವ ಯಾರೇ ಆಗಲಿ ಬಸವಣ್ಣನವರ ಕುರುಹು ಉಳಿಸುವ ಕೆಲಸ ಮಾಡಬೇಕು' ಎಂದು ತಿಳಿಸಿದರು.

'ಬಸವೇಶ್ವರರ ಜನ್ಮಭೂಮಿ ಅಭಿವೃದ್ಧಿಗೆ ಪ್ರತ್ಯೇಕ ಅಭಿವೃದ್ಧಿ ಪ್ರಾಧಿಕಾರ ಮಾಡುವುದಾಗಿ ಈ ಹಿಂದೆ ಸಿದ್ಧರಾಮಯ್ಯ ಹೇಳಿದ್ದರು. ಆ ನಿಟ್ಟಿನಲ್ಲಿ ನಾನು ಅವರನ್ನು ಒತ್ತಾಯಿಸುತ್ತೇನೆ. ಕೇವಲ ಪ್ರಾಧಿಕಾರ ಸ್ಥಾಪಿಸಿದರೆ ಸಾಲದು ಸೂಕ್ತ ಅನುದಾನ ನೀಡಿದರೇ, ನಾನು ಮುಖ್ಯಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸುವೆ' ಎಂದರು. 'ರಾಜಕೀಯ ಲಾಭಕ್ಕಾಗಿ ಮರು ನಾಮಕರಣ ವಿಚಾರ ಎತ್ತುತ್ತಿದ್ದರೆ ಅದು ತಪ್ಪು. ಈ ರೀತಿ ಯಾರೇ ಮಾಡಿದರೂ ತಪ್ಪು. ರಾಷ್ಟ್ರೀಯ ಪುರುಷರು ಯಾರೇ ಇರಲಿ, ಅವರನ್ನು ರಾಷ್ಟ್ರೀಯ ದೃಷ್ಟಿಕೋನದಿಂದ ನೋಡಬೇಕು ಹೊರತು ರಾಜಕೀಯವಾಗಿ ನೋಡಬಾರದು ಎಂದರು.

ಬಿಜೆಪಿ ಟಿಕೆಟ್ ಆಮಿಷ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ



ರೇವಣಸಿದ್ದಪ್ಪ

ಕೊಟ್ಟೂರು (ವಿಜಯನಗರ ಜಿಲ್ಲೆ): ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಂಬಿಸಿ ನಿವೃತ್ತ ಎಂಜಿನಿಯರ್ ಸಿ.ಶಿವಮೂರ್ತಿ ಅವರಿಂದ ₹2.03 ಕೋಟಿ ಹಣ ಪಡೆದು ವಂಚಿಸಿದ ಆರೋಪದ ಮೇರೆಗೆ ಆರೋಪಿ ರೇವಣಸಿದ್ದಪ್ಪ ಎಂಬಾತನನ್ನು ಪೊಲೀಸರು ಬೆಂಗಳೂರಿನಲ್ಲಿ ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.

'ಆರೋಪಿಯನ್ನು ಕೂಡ್ಲಿಗಿಯ ನ್ಯಾಯಾಧೀಶರ ಎದುರು ಶನಿವಾರ ಹಾಜರಪಡಿಸಲಾಗಿದೆ. ಹೆಚ್ಚಿನ ವಿಚಾರಣೆಗೆ ಆರೋಪಿಯನ್ನು ಪೊಲೀಸ್ ವಶಕ್ಕೆ ನೀಡಲು ಕೋರಲಾಗುವುದು' ಎಂದು ಎಸ್‌ಪಿ ಶ್ರೀಹರಿಬಾಬು ಬಿ.ಎಲ್ 'ಪ್ರಜಾವಾಣಿ'ಗೆ ತಿಳಿಸಿದರು.

'ಹಲವು ಆಯಾಮಗಳಲ್ಲಿ ಪ್ರಕರಣದ ವಿಚಾರಣೆ ನಡೆದಿದೆ. ತಾನು ಹಣ ಪಡೆದಿಲ್ಲ ಎಂದು ರೇವಣ ಸಿದ್ದಪ್ಪ ಹೇಳಿದರೂ ಸುಮಾರು ₹90 ಲಕ್ಷ ಹಣ ಕೊಟ್ಟಿದ್ದಕ್ಕೆ ದಾಖಲೆ ಇದೆ. ಉಳಿದ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುವ ಸಾಧ್ಯತೆ ಇದೆ. ಇದೇ ಹಣದಲ್ಲಿ ಆರೋಪಿ ಕೊಟ್ಟೂರಿನಲ್ಲಿ ನಿವೇಶನ ಖರೀದಿಸಿದ ಬಗ್ಗೆ ಸಂಶಯ ಇದೆ' ಎಂದು ಅವರು ಹೇಳಿದರು.

'ಸುಳಿವು ಸಿಗಬಾರದೆಂದು ಯೋಚಿಸಿ ರೇವಣಸಿದ್ದಪ್ಪ 50ರಿಂದ 60 ಬಾರಿ ಬೇರೆ ಬೇರೆ ಫೋನ್‌ಗಳಿಂದ ತನಗೆ ಬೇಕಾದವರಿಗೆ ಕರೆ ಮಾಡಿದ್ದ. ಬೀದಿಯಲ್ಲಿ ಹೋಗುವವರಿಂದ ಒಮ್ಮೆ ಕರೆ ಮಾಡಬೇಕು ಎಂದು ಹೇಳಿ ಫೋನ್ ತೆಗೆದುಕೊಂಡು ಕರೆ ಮಾಡಿದ್ದ' ಎಂದರು.

ಶಿವಮೂರ್ತಿ ಅವರು ಅಕ್ಟೋಬರ್ 19ರಂದು ತಮಗೆ ವಂಚನೆ ಆದ ಬಗ್ಗೆ ದೂರು ನೀಡಿದ್ದರು. 2022ರ ಅಕ್ಟೋಬರ್ 9ರಿಂದ 2023ರ ಏಪ್ರಿಲ್ 30ರ ನಡುವೆ ಹಂತ ಹಂತವಾಗಿ ₹2.03 ಕೋಟಿ ಹಣ ನೀಡಿದ್ದಾಗಿ ಹೇಳಿದ್ದರು

'ರೇವಣಸಿದ್ದಪ್ಪ ಬಿಜೆಪಿ ಕಾರ್ಯಕರ್ತನೇ ಅಲ್ಲ. ಐದು ವರ್ಷದ ಹಿಂದೆಯೇ ಆತ ಪಕ್ಷ ಬಿಟ್ಟಿದ್ದು, ಈ ವಂಚನೆಗೂ ಮತ್ತು ಪಕ್ಷಕ್ಕೂ ಸಂಬಂಧ ಇಲ್ಲ' ಎಂದು ಜಿಲ್ಲಾ ಬಿಜೆಪಿ ಘಟಕ ತಿಳಿಸಿದೆ.

ನಕಲು ಯತ್ನ: 10 ಜನರ ಬಂಧನ

ಬ್ಲೂಟೂತ್ ಬಳಕೆ: ಆರ್‌.ಡಿ. ಪಾಟೀಲ ಸೇರಿ ಮೂವರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ



ಲಕ್ಷ್ಮಿಪುತ್ರ

ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದ ನೆನಪು ಮಾಸುವ ಮುನ್ನವೇ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಬ್ಲೂಟೂತ್ ಬಳಸಿ ಪರೀಕ್ಷೆ ಬರೆಯಲು ಮುಂದಾದ ಹಾಗೂ ಅದಕ್ಕೆ ಸಹಕರಿಸಿದ 10 ಜನರನ್ನು ಕಲಬುರಗಿ ಹಾಗೂ ಅಫಜಲಪುರ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿವಿಧ ನಿಗಮಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆ ನಡೆಸಿದ ಪರೀಕ್ಷೆಯಲ್ಲಿ ಇದು ನಡೆದಿದೆ.

ಪಿಎಸ್‌ಐ ಪ್ರಕರಣದಲ್ಲಿ ಬ್ಲೂಟೂತ್ ಮೂಲಕ ಉತ್ತರ ಹೇಳಿಸಿದ ಆರೋಪದಲ್ಲಿ ಬಂಧಿತನಾಗಿದ್ದ ಕಲಬುರಗಿ ಜಿಲ್ಲೆ ಅಫಜಲಪುರದ ಆರ್‌.ಡಿ. ಪಾಟೀಲ ಕೈವಾಡ ಇದರಲ್ಲಿದೆ ಎಂದು ಅಭ್ಯರ್ಥಿ ನೀಡಿದ ಹೇಳಿಕೆ ಮೇರೆಗೆ ಕಲಬುರಗಿಯ ಅಶೋಕ ನಗರ ಠಾಣೆ ಪೊಲೀಸರು ಪಾಟೀಲ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಲ್ಲದೇ, ಅಭ್ಯರ್ಥಿ ತ್ರಿಮೂರ್ತಿ ತಳವಾರ, ಆತನಿಗೆ ಹೊರಗಿನಿಂದ ಬ್ಲೂಟೂತ್ ಮೂಲಕ ಉತ್ತರ ಹೇಳುತ್ತಿದ್ದ ಆತನ ತಮ್ಮ ಅಂಬರೀಷ ತಳವಾರ ಹಾಗೂ ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ವಿಭಾಗದ ಕೇಂದ್ರದಲ್ಲಿ ಪರೀಕ್ಷೆ ಬರೆಯುತ್ತಿದ್ದ ಲಕ್ಷ್ಮಿಪುತ್ರ ತಳವಾರ ಎಂಬವರನ್ನು ಬಂಧಿಸಿದ್ದಾರೆ. ಅಫಜಲಪುರದಲ್ಲಿ ಮೂವರು ಅಭ್ಯರ್ಥಿಗಳು ಹಾಗೂ ಅಕ್ರಮಕ್ಕೆ ಸಹಕರಿಸಿದ ನಾಲ್ವರು ಸೇರಿದಂತೆ ಏಳು ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಒಬ್ಬ ತಪ್ಪಿಸಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ

ಯಾದಗಿರಿಯಲ್ಲಿ ಒಂಬತ್ತು ಜನರನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆ ನಡೆಸಿದ್ದಾರೆ.

ಆರೋಪಿ ಅಭ್ಯರ್ಥಿಗಳು ನೀಡಿದ ಮಾಹಿತಿ ಮೇರೆಗೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ಪರೀಕ್ಷಾ ಕೇಂದ್ರದಿಂದ ನಾಲ್ವರು, ಯಾದಗಿರಿಯ ಪರೀಕ್ಷಾ ಕೇಂದ್ರದಿಂದ ಒಂಬತ್ತು ಆರೋಪಿಗಳನ್ನು ಅಜ್ಞಾತ ಸ್ಥಳಕ್ಕೊಯ್ದು ವಿಚಾರಣೆ ನಡೆಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಹಲವರನ್ನು ವಶಕ್ಕೆ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಪ್ರಮುಖ ಆರೋಪಿ ಆರ್‌.ಡಿ. ಪಾಟೀಲ ಬಂಧನಕ್ಕೆ ಪೊಲೀಸರು ತಂಡ ರಚಿಸಿದ್ದಾರೆ.

ಪಿಎಸ್‌ಐ ಹಗರಣ ಕಲಬುರಗಿಯಲ್ಲೇ ನಡೆದಿದ್ದರಿಂದ ಹೆಚ್ಚಿನ ಭದ್ರತೆ ಮಾಡಿದ್ದ ಪೊಲೀಸರು ಅಭ್ಯರ್ಥಿಗಳನ್ನು ಸಮಗ್ರ ತಪಾಸಣೆಗೆ ಒಳಪಡಿಸಿದ್ದರು.



ಕಲಬುರಗಿಯಲ್ಲಿ ಶನಿವಾರ ನಡೆದ ಕೆಇಎ ನೇಮಕಾತಿ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ಪರೀಕ್ಷೆ ಬರೆದ ಅಭ್ಯರ್ಥಿ ತ್ರಿಮೂರ್ತಿಯನ್ನು ಕರೆದೊಯ್ದ ಪೊಲೀಸರು

> **ಭಾನುವಾರ ನಡೆಯುವ ಪರೀಕ್ಷೆಗೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿ ಅಭ್ಯರ್ಥಿಗಳ ತಪಾಸಣೆ ನಡೆಸಲಾಗುವುದು**
> **ಚೇತನ್ ಆರ್**
> ಕಲಬುರಗಿ ಪೊಲೀಸ್ ಕಮಿಷನರ್

ನಗರದ ಶರಣಬಸವೇಶ್ವರ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಅಫಜಲಪುರದ ಸೊನ್ನ ಗ್ರಾಮದ (ಆರ್‌.ಡಿ. ಪಾಟೀಲ ಗ್ರಾಮ) ತ್ರಿಮೂರ್ತಿ ತಳವಾರ ಎಂಬಾತ ಪರೀಕ್ಷೆ ಬರೆಯುತ್ತಿದ್ದ. ಆತನ ಚಲನವಲನಗಳ ಬಗ್ಗೆ ಸಂಶಯ ಬಂದಿದ್ದರಿಂದ ಪರೀಕ್ಷಾ ಪ್ರಾಧಿಕಾರದ ಉಪನಿರ್ದೇಶಕರು ಪೊಲೀಸರಿಗೆ ಮಾಹಿತಿ ನೀಡಿದರು. ಆತನನ್ನು ಹೊರತಂದು ವಿಚಾರಣೆ ನಡೆಸಿದಾಗ ಬ್ಲೂಟೂತ್ ಮೂಲಕ ಉತ್ತರ ಕೇಳಿಸಿಕೊಂಡು ಬರೆಯುತ್ತಿದ್ದುದಾಗಿ ತಿಳಿಸಿದ್ದಾನೆ ಎಂದು ಕಲಬುರಗಿ ಪೊಲೀಸ್ ಕಮಿಷನರ್ ಚೇತನ್ ಆರ್‌. ತಿಳಿಸಿದ್ದಾರೆ.

'ಬ್ಲೂಟೂತ್ ಬಳಕೆ ಸಂಬಂಧ ಒಂಬತ್ತು ಜನರನ್ನು ವಶಕ್ಕೆ ಪಡೆಯಲಾಗಿದೆ. ಐದು ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಸಂಗೀತಾ ತಿಳಿಸಿದ್ದಾರೆ.

ಅಂಗನವಾಡಿ ಮಕ್ಕಳಿಗಿಲ್ಲ ಮೊಟ್ಟೆ

ಒಂದನೇ ಪುಟದಿಂದ...

ಆದರೆ, ಖರೀದಿಗೆ ಅಗತ್ಯವಾದ ಹಣ ಬಿಡುಗಡೆ ಮಾಡಿಲ್ಲ. ಮರುಪಾವತಿಯ ಭರವಸೆಯನ್ನೂ ಲಿಖಿತವಾಗಿ ನೀಡಿಲ್ಲ. ಹಾಗಾಗಿ, ಸ್ಥಳೀಯವಾಗಿ ಖರೀದಿಸಲು ಅಂಗನವಾಡಿ ಕಾರ್ಯಕರ್ತೆಯರು ಹಿಂದೇಟು ಹಾಕುತ್ತಿದ್ದಾರೆ.

ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆಯಡಿ (ಐಸಿಡಿಎಸ್) ಸರ್ಕಾರ 6 ವರ್ಷದ ಒಳಗಿನ ಮಕ್ಕಳಿಗೆ ವಾರಕ್ಕೆ ಎರಡು ದಿನ ಹಾಗೂ ಮಧ್ಯಮ, ಕಡಿಮೆ ತೂಕದ ಮಕ್ಕಳಿಗೆ ವಾರದಲ್ಲಿ 5 ದಿನ, ಗರ್ಭಿಣಿಯರಿಗೆ ಆರು ದಿನ ಮೊಟ್ಟೆ ಪೂರೈಸಲಾಗುತ್ತಿದೆ.

ಪರ್ಯಾಯ ಶಕ್ತಿಕೇಂದ್ರ ಸೃಷ್ಟಿ?

ಒಂದನೇ ಪುಟದಿಂದ...

'ಬೆಳಗಾವಿ ರಾಜಕಾರಣದಲ್ಲಿ ಡಿ.ಕೆ.ಶಿವಕುಮಾರ್ ಹಾಗೂ ಲಕ್ಷ್ಮೀ ಹೆಬ್ಬಾಳಕರ ಹಸ್ತಕ್ಷೇಪ ಮಾಡುತ್ತಿದ್ದಾರೆ; ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕಾರ್ಯಾಧ್ಯಕ್ಷರಾಗಿ ಲಕ್ಷ್ಮಣ ಸವದಿ ಅವರನ್ನು ನೇಮಕ ಮಾಡಲಾಗುತ್ತಿದೆ' ಎಂಬ ವಿಷಯಕ್ಕೆ ಅಸಮಾಧಾನಗೊಂಡಿದ್ದ ಸತೀಶ ಜಾರಕಿಹೊಳಿ, ಬಂಡಾಯವೇಳುವ ಸೂಚನೆ ನೀಡಿದ್ದರು. ಶಾಸಕರ ದಂಡು ಕಟ್ಟಿಕೊಂಡು ದಸರಾ ವೇಳೆ ಮೈಸೂರಿನತ್ತ ಹೊರಟಿದ್ದರು. ಈ ಮೂಲಕ, ತಮ್ಮ ಶಕ್ತಿ ಪ್ರದರ್ಶನದ ಯತ್ನ ನಡೆಸಿದ್ದರು. ಹೈಕಮಾಂಡ್ ಸೂಚನೆ ಬಳಿಕ, ಜಾರಕಿಹೊಳಿ ಮೈಸೂರು ದಂಡಯಾತ್ರೆಯನ್ನು ಕೈಬಿಟ್ಟಿದ್ದರು.

ಉಪಮುಖ್ಯಮಂತ್ರಿ ಹುದ್ದೆಯ ಬೇಡಿಕೆ ಹಾಗೂ ಮುಂದೆ ಅವಕಾಶ ಸಿಕ್ಕರೆ ಮುಖ್ಯಮಂತ್ರಿ ಹುದ್ದೆಗೆ ಹಕ್ಕುದಾರಿಕೆ ಮಂಡಿಸುವ ಲೆಕ್ಕಾಚಾರವೂ ಜಾರಕಿಹೊಳಿ ಮುಂದಿದೆ. ಇದೇ ಬೇಡಿಕೆ ಹೊಂದಿರುವ ಪರಮೇಶ್ವರ, ಕೆಲವೊಮ್ಮೆ ಈ ಇಂಗಿತ ವ್ಯಕ್ತಪಡಿಸಿದ್ದುಂಟು.

> **ರಾಜಕಾರಣಿಗಳು ಸಭೆ ಸೇರಿದಾಗ ರಾಜಕಾರಣ ಚರ್ಚೆ ಆಗದೇ ಇರುತ್ತದೆಯೇ? ಆದರೆ, ಸದ್ಯಕ್ಕೆ ಗಂಭೀರವಾಗಿ ತೆಗೆದುಕೊಳ್ಳುವಂಥದ್ದೇನೂ ಇಲ್ಲ.**
> **ಸತೀಶ ಜಾರಕಿಹೊಳಿ,**
> ಲೋಕೋಪಯೋಗಿ ಸಚಿವ

ಒಂದೊಮ್ಮೆ, ನಾಯಕತ್ವ ಬದಲಾವಣೆಯ ಪ್ರಶ್ನೆ ಎದುರಾದರೆ ಶಿವಕುಮಾರ್‌ಗೆ ಪರ್ಯಾಯವಾಗಿ ದಲಿತ ಅಥವಾ ಪರಿಶಿಷ್ಟ ಪಂಗಡದ (ವಾಲ್ಮೀಕಿ ನಾಯಕ) ನಾಯಕರನ್ನು ಮುನ್ನೆಲೆಗೆ ತರುವ ಯತ್ನ ಶುರುವಾಗಿದೆ. ಈ ತಂತ್ರಗಾರಿಕೆಯ ಭಾಗವಾಗಿಯೇ, ಪರಮೇಶ್ವರ–ಜಾರಕಿಹೊಳಿ ಜತೆ ಸಿದ್ದರಾಮಯ್ಯ ಚರ್ಚಿಸಿದ್ದಾರೆ ಎಂದು ಹೇಳಲಾಗುತ್ತಿದೆ.

'ಭೋಜನದ ಉದ್ದೇಶಕ್ಕೆ ಸೇರಿದ್ದೆವು. ಯಾವುದೇ ರಾಜಕೀಯ ವಿಷಯ ಚರ್ಚೆ ನಡೆದಿಲ್ಲ' ಎಂದು ಸಿದ್ದರಾಮಯ್ಯ ಹಾಗೂ ಪರಮೇಶ್ವರ ಹೇಳಿದ್ದಾರೆ.

'ಐದು ವರ್ಷವೂ ಸಿದ್ದರಾಮಯ್ಯ ಮುಖ್ಯಮಂತ್ರಿ'

'ಐದು ವರ್ಷದವರೆಗೂ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುತ್ತಾರೆ' ಎಂದು ಸಚಿವ ಎಚ್‌.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡುತ್ತಾರೆ ಎಂದು ಹೇಳುವವರಿಗೆ ಬುದ್ಧಿ ಇಲ್ಲ' ಎಂದರು.

ಪರಮೇಶ್ವರ ಮನೆಯಲ್ಲಿ ಸಭೆ ಸೇರಿದ ಬಗ್ಗೆ ಕೇಳಿದ ಪ್ರಶ್ನೆಗೆ, 'ನಾವು ಒಂದಿಷ್ಟು ಮಂದಿ ಊಟಕ್ಕೆ ಸೇರಿದ್ದೆವು. ಅದರಲ್ಲಿ ವಿಶೇಷವೇನೂ ಇಲ್ಲ. ಯಾವುದೇ ರಾಜಕೀಯ ಚರ್ಚೆ ಮಾಡಿಲ್ಲ. ಡಿ.ಕೆ. ಶಿವಕುಮಾರ್ ಅವರನ್ನು ಭೋಜನಕೂಟಕ್ಕೆ ಆಹ್ವಾನಿಸದಿರುವ ಬಗ್ಗೆ ಮಾಹಿತಿ ಇಲ್ಲ' ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ಸದ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಅಲ್ಲವೇ?' ಎಂದು ಮರು ಪ್ರಶ್ನೆ ಕೇಳಿದರು.

ಬಿಜೆಪಿ-ಜೆಡಿಎಸ್‌ನಿಂದ ಸರ್ಕಾರ ಬೀಳಿಸುವ ಪ್ರಯತ್ನಗಳ ನಡೆಯುತ್ತಿರುವ ಬಗ್ಗೆ ಮಹದೇವಪ್ಪ, 'ರೈಲು ಹೋಗುತ್ತಿರುತ್ತದೆ. ಬೋಗಿ ಅಲುಗಾಡುತ್ತದೆ. ರೈಲು ಬೀಳುವುದಿಲ್ಲ. ವಿರೋಧ ಪಕ್ಷಗಳ ಆಸೆ ಈಡೇರುವುದಿಲ್ಲ' ಎಂದರು.

'ಅನಗತ್ಯ ಹೇಳಿಕೆ ಕೊಟ್ಟರೆ ನೋಟಿಸ್'

ಬೆಂಗಳೂರು: 'ಪಕ್ಷದ ಆಂತರಿಕ ವಿಚಾರ, ಸರ್ಕಾರ ಹಾಗೂ ಅಧಿಕಾರದ ಬಗ್ಗೆ ಮಾಧ್ಯಮಗಳ ಮುಂದೆ ಅನಗತ್ಯ ಹೇಳಿಕೆಗಳನ್ನು ನೀಡಬಾರದು' ಎಂದು ಪಕ್ಷದ ಶಾಸಕರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತೊಮ್ಮೆ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಇಷ್ಟರ ನಂತರವೂ ಹೇಳಿಕೆ ನೀಡುವುದನ್ನು ಮುಂದುವರಿಸಿದರೆ ಅಂಥವರಿಗೆ ನೋಟಿಸ್ ನೀಡಬೇಕಾಗುತ್ತದೆ' ಎಂದೂ ಹೇಳಿದರು.

ಬಿಜೆಪಿ ಷಡ್ಯಂತ್ರ ಫಲಿಸಲ್ಲ: 'ಸರ್ಕಾರ ಬೀಳಿಸಲು ಬಿಜೆಪಿ ರೂಪಿಸುತ್ತಿರುವ ಷಡ್ಯಂತ್ರ ಫಲಿಸುವುದಿಲ್ಲ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಈ ಷಡ್ಯಂತ್ರದ ಬಗ್ಗೆ ನಮಗೆ ಗೊತ್ತಿದೆ. ಇದರ ಹಿಂದೆ ದೊಡ್ಡ, ದೊಡ್ಡ ನಾಯಕರು ಇದ್ದಾರೆ. ಆದರೆ, ಇದರಿಂದ ಏನೂ ಆಗುವುದಿಲ್ಲ' ಎಂದು ಅವರು ಹೇಳಿದರು.

ಶಾಖಾದ್ರಿ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮನೆಯಲ್ಲಿ ಚಿರತೆ ಹಾಗೂ ಜಿಂಕೆಯ ಚರ್ಮ ಪತ್ತೆಯಾದ ಕಾರಣ ಇನಾಂ ದತ್ತಾತ್ರೇಯ ಸ್ವಾಮಿ ಬಾಬಾಬುಡನ್ ದರ್ಗಾದ ಶಾಖಾದ್ರಿ ಗೌಸ್ ಮೊಹಿದ್ದೀನ್ ವಿರುದ್ಧ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು, ನೋಟಿಸ್ ಜಾರಿಮಾಡಿದ್ದಾರೆ.

ಹಿಂದಿನ ಶಾಖಾದ್ರಿಗಳು ಹುಲಿ ಚರ್ಮದ ಮೇಲೆ ಕುಳಿತಿರುವ ಚಿತ್ರಗಳ ಸಹಿತ ಶ್ರೀರಾಮ ಸೇನೆ ಕಾರ್ಯಕರ್ತರು ಅರಣ್ಯ ಇಲಾಖೆಗೆ ದೂರು ನೀಡಿದ್ದರು.

ಶಾಖಾದ್ರಿ ಅವರ ನಿವಾಸದಲ್ಲಿ ಶುಕ್ರವಾರ ಪರಿಶೀಲನೆ ನಡೆಸಿದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಚಿರತೆ ಹಾಗೂ ಜಿಂಕೆ ಚರ್ಮ ಸಿಕ್ಕಿದ್ದವು.

'ನಮ್ಮ ಅಜ್ಜನ ಕಾಲದಿಂದ ಅಂದರೆ ಕನಿಷ್ಠ ನೂರು ವರ್ಷಗಳಿಂದ ಮನೆಯಲ್ಲಿ ಈ ಚರ್ಮಗಳಿದ್ದವು. ಹಿಂದಿನಿಂದ ಇದ್ದ ಕಾರಣ ಅರಣ್ಯ ಇಲಾಖೆಯಿಂದ ಅನುಮತಿ ಪಡೆದಿಲ್ಲ. ನಾನು ಕಾರ್ಯಕ್ರಮ ನಿಮಿತ್ತ ಬೇರೆ ಊರಿಗೆ ಬಂದಿದ್ದೇನೆ' ಎಂದು ಶಾಖಾದ್ರಿ ಪ್ರತಿಕ್ರಿಯಿಸಿದರು.

ಬಂಧಿಸಿ: ಶಾಖಾದ್ರಿ ಅವರನ್ನು ಕೂಡಲೇ ಬಂಧಿಸಬೇಕು ಎಂದು ವಿಶ್ವಹಿಂದೂ ಪರಿಷತ್‌ನ ಜಿಲ್ಲಾ ಕಾರ್ಯದರ್ಶಿ ರಂಗನಾಥ್ ಒತ್ತಾಯಿಸಿದ್ದಾರೆ.

ಹುಲಿ ಉಗುರಿನ 3 ಪೆಂಡೆಂಟ್ ವಶ

ತುಮಕೂರು: ಅರಣ್ಯಾಧಿಕಾರಿಗಳು ಶುಕ್ರವಾರ ತಡರಾತ್ರಿ ನಗರದ ವಿಶ್ವಾಸ್ ಜ್ಯುವೆಲರ್ಸ್ ಮಾಲೀಕ ವಿಶ್ವಾಸ್ ಧರಿಸಿದ್ದ ಹುಲಿ ಉಗುರಿನ ಮೂರು ಪೆಂಡೆಂಟ್ ವಶಕ್ಕೆ ಪಡೆದಿದ್ದಾರೆ.

ವಿಶ್ವಾಸ್ ಹುಲಿ ಉಗುರಿನ ಪೆಂಡೆಂಟ್ ಧರಿಸಿರುವ ವಿಡಿಯೊ, ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಇದರ ಬೆನ್ನಲ್ಲೇ ಅರಣ್ಯ ಇಲಾಖೆ ಅಧಿಕಾರಿಗಳು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಚಿನ್ನಾಭರಣ ಮಳಿಗೆ, ಮನೆ, ಗೋದಾಮಿನಲ್ಲಿ ಜಾಲಾಡಿದ್ದರು. ಈ ಸಮಯದಲ್ಲಿ ಮೂರು ಹುಲಿ ಉಗುರಿನ ಪೆಂಡೆಂಟ್ ಪತ್ತೆಯಾಗಿವೆ.

'ಹುಲಿ ಉಗುರಿನ ಪೆಂಡೆಂಟ್ ಮಾದರಿಯನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗುವುದು. ವರದಿ ಬಂದ ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದು' ಎಂದು ವಲಯ ಅರಣ್ಯಾಧಿಕಾರಿ ಪವಿತ್ರಾ ಪ್ರತಿಕ್ರಿಯಿಸಿದ್ದಾರೆ.

ಭ್ರಷ್ಟಾಚಾರ ಮರೆಮಾಚಲು ಹುಲಿ ಉಗುರಿಗೆ ಪ್ರಚಾರ

ಕೋಲಾರ: ಭ್ರಷ್ಟಾಚಾರ ಮರೆಮಾಚಲು ಹುಲಿ ಉಗುರು ವಿವಾದ ಮುನ್ನೆಲೆಗೆ ತಂದು ಜನರನ್ನು ದಾರಿ ತಪ್ಪಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ಕೋಲಾರ ಸಂಸದ ಎಸ್.ಮುನಿಸ್ವಾಮಿ ಟೀಕಿಸಿದ್ದಾರೆ.

ತೆರಿಗೆ ಇಲಾಖೆ ದಾಳಿ ವೇಳೆ ಗುತ್ತಿಗೆದಾರರ ಬಳಿ ಸಿಕ್ಕ ₹100 ಕೋಟಿ ಬಗ್ಗೆ ತನಿಖೆ ನಡೆಯಬೇಕಿತ್ತು. ಅದನ್ನು ಮರೆಮಾಚಲು ಹುಲಿ ಉಗುರಿಗೆ ಪ್ರಚಾರ ನೀಡಿ ಜನರ ಗಮನ ಬೇರೆಡೆ ಸೆಳೆಯುವ ಕೆಲಸ ನಡೆಯುತ್ತಿದೆ. ಹಾಗಾದರೆ, ಇಷ್ಟು ವರ್ಷಗಳಿಂದ ಅರಣ್ಯ ಇಲಾಖೆ ಅಧಿಕಾರಿಗಳು ಏನು ಮಾಡುತ್ತಿದ್ದರು ಎಂದು ಅವರು ಪ್ರಶ್ನಿಸಿದರು.

'ಪ್ರಜಾವಾಣಿ' ವರದಿ ಉಲ್ಲೇಖಿಸಿ ಶ್ರೀನಿವಾಸ ಪ್ರಸಾದ್ ಪತ್ರ

'ಮಾತೃಭಾಷೆ ಕಡ್ಡಾಯ: ರಾಷ್ಟ್ರಪತಿ ಅಂಗೀಕಾರಕ್ಕೆ ಶಿಫಾರಸು ಮಾಡಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದ ಎಲ್ಲ ಶಾಲೆಗಳಲ್ಲಿ 1ರಿಂದ 5ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮಾತೃಭಾಷಾ ಮಾಧ್ಯಮದಲ್ಲೇ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸಲು ರಾಜ್ಯ ವಿಧಾನಮಂಡಲದ ಉಭಯ ಸದನಗಳು 2015ರಲ್ಲಿ ಅಂಗೀಕರಿಸಿದ್ದ ಮಸೂದೆಯನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರ ಒತ್ತಡ ಹೇರುತ್ತಿದೆ ಎಂಬ ಭಾವನೆಯನ್ನು ಹೋಗಲಾಡಿಸಬೇಕು' ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇತ್ತೀಚೆಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಇದೇ ವರ್ಷದ ಜ.5ರಂದು ಪ್ರಕಟವಾಗಿದ್ದ 'ಮಾತೃಭಾಷೆ ಕಡ್ಡಾಯಕ್ಕೆ ಕೇಂದ್ರದ ಅಸಹಕಾರ' ಶೀರ್ಷಿಕೆಯ ವರದಿಯನ್ನು ಉಲ್ಲೇಖಿಸಿರುವ ಅವರು, 'ಮಾತೃಭಾಷೆ ಶಿಕ್ಷಣ ಮಾಧ್ಯಮ ಆಗಬೇಕು ಎಂಬ ನಮ್ಮೆಲ್ಲರ ಆಶಯಗಳಿಗೆ ಒತ್ತಾಸೆಯಾಗಬೇಕು' ಎಂದು ಕೋರಿದ್ದಾರೆ.

'ಕರ್ನಾಟಕ ವಿಧಾನಸಭೆಯು 2015ರಲ್ಲಿ ಒಂದರಿಂದ ಐದನೇ ತರಗತಿವರೆಗೆ ಮಾತೃಭಾಷೆ ಅಥವಾ ರಾಜ್ಯ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರುವ ಮಸೂದೆ ಅಂಗೀಕರಿಸಿದೆ. ಅದನ್ನು ಬಿಜೆಪಿ ಸೇರಿದಂತೆ ರಾಜ್ಯದ ಎಲ್ಲ ಪಕ್ಷಗಳೂ ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ನಂತರ ಅದು ರಾಜ್ಯಪಾಲರ ಸಮ್ಮತಿ ಪಡೆದು 2017ರಲ್ಲಿ ರಾಷ್ಟ್ರಪತಿಗೆ ರವಾನೆಯಾಗಿದೆ. ಅದನ್ನು ರಾಷ್ಟ್ರಪತಿಗೆ ಶಿಫಾರಸಿನೊಂದಿಗೆ ಕಳುಹಿಸಬೇಕಾದ ಕೇಂದ್ರದ ಉನ್ನತ ಶಿಕ್ಷಣ ಇಲಾಖೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದವರು ಈವರೆಗೂ ಕಳುಹಿಸಿಲ್ಲ' ಎಂದು ತಿಳಿಸಿದ್ದಾರೆ.

'ನೀವು ಮಾತೃಭಾಷಾ ಮಾಧ್ಯಮದ ಪ್ರಬಲ ಪ್ರತಿಪಾದಕರೆಂಬುದು ನನಗೆ ತಿಳಿದಿದೆ. ಆದ್ದರಿಂದ ಈ ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಜ್ಯದಿಂದ ಕಳುಹಿಸಿದ ಮಸೂದೆಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಅನಗತ್ಯ ಮತ್ತು ಅಸಮಂಜಸವಾದ ಆಕ್ಷೇಪ ಎತ್ತಿ ರಾಜ್ಯ ಸರ್ಕಾರಕ್ಕೆ ಪದೇ ಪದೇ ಪತ್ರ ಬರೆದಿದೆ. ಇದಕ್ಕೆ ರಾಜ್ಯ ಸರ್ಕಾರ ಉತ್ತರಿಸಿಲ್ಲ ಎಂಬ ನೆಪವನ್ನು ಹೇಳಿ, ಮಸೂದೆಯನ್ನು ಹಿಂಪಡೆಯಬೇಕೆಂದು 2020ರಲ್ಲಿ ಸೂಚಿಸಿದೆ. ಇವೆಲ್ಲವನ್ನೂ ಆಧಾರವಾಗಿಟ್ಟುಕೊಂಡು ಪ್ರಮುಖ ಪತ್ರಿಕೆಯಾದ 'ಪ್ರಜಾವಾಣಿ' ವರದಿ ಮಾಡಿದೆ' ಎಂದು ಉಲ್ಲೇಖಿಸಿದ್ದಾರೆ.

'ಮಸೂದೆಯನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರವು ಒತ್ತಡ ಹೇರುತ್ತಿದೆ ಎಂಬ ಭಾವನೆ ಬರುವಂತೆ ವರದಿಯನ್ನು ಬರೆಯಲಾಗಿದೆ. ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಪತ್ರ ವ್ಯವಹಾರವು ಆ ರೀತಿಯ ಭಾವನೆ ಮೂಡಿಸುವುದು ಸಹಜ. ಆದರೆ, ನನಗೆ ತಿಳಿದಂತೆ ಕೇಂದ್ರ ಸರ್ಕಾರದ ನಿಲುವು ಹಾಗಿರುವುದಿಲ್ಲ. ಇದು ಇಂಗ್ಲಿಷ್ ಶಾಲೆಗಳ ಹಿತಾಸಕ್ತಿಗಳ ಪರವಾಗಿರುವ ಕೇಂದ್ರ ಸರ್ಕಾರದ ಅಧಿಕಾರಶಾಹಿಯ ಕುತಂತ್ರ ಎಂದು ನನ್ನ ಭಾವನೆ' ಎಂದು ಹೇಳಿದ್ದಾರೆ.

'ಈ ಬಗ್ಗೆ ಕೂಡಲೇ ಮಧ್ಯಪ್ರವೇಶಿಸಿ, ಆಕ್ಷೇಪಗಳನ್ನು ಹಿಂತೆಗೆದುಕೊಂಡು ಮಸೂದೆಯನ್ನು ರಾಷ್ಟ್ರಪತಿ ಅವರಿಗೆ ಅಂಗೀಕಾರಕ್ಕಾಗಿ ಶಿಫಾರಸು ಮಾಡಿ ಕಳುಹಿಸುವಂತೆ ಸಚಿವಾಲಯಕ್ಕೆ ಆದೇಶಿಸಬೇಕು' ಎಂದು ಕೋರಿದ್ದಾರೆ.

ಬರ ಅಧ್ಯಯನಕ್ಕೆ ಬಿಜೆಪಿ ರಾಜ್ಯ ಪ್ರವಾಸ

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯದಲ್ಲಿ ಬರ ಪರಿಸ್ಥಿತಿಯ ಅಧ್ಯಯನ ನಡೆಸಲು ಬಿಜೆಪಿ ನಿರ್ಧರಿಸಿದ್ದು ಇದಕ್ಕಾಗಿ 17 ತಂಡಗಳನ್ನು ರಚಿಸಲಾಗಿದೆ. ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ತಂಡಗಳು ಪ್ರಯಾಣ ಮಾಡಿ ನ.10ರ ಒಳಗೆ ವರದಿ ಸಲ್ಲಿಸಲಿವೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿಳಿಸಿದರು.

ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಬರಪೀಡಿತ ತಾಲ್ಲೂಕುಗಳ ಹೆಸರನ್ನು ಘೋಷಿಸಿದೆಯಾದರೂ ಪರಿಹಾರ ಕಾರ್ಯ ಕೈಗೊಂಡಿಲ್ಲ ಎಂದರು. 5 ತಿಂಗಳಲ್ಲಿ ರಾಜ್ಯದಲ್ಲಿ 250 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬರಪರಿಹಾರಕ್ಕೆ ಸಂಬಂಧಿಸಿ ಅನುದಾನ ಪಡೆಯಲು ಕೈಗೊಳ್ಳಬೇಕಾದ ಪ್ರಕ್ರಿಯೆ ಮಾಡದೇ ಕೇಂದ್ರವನ್ನು ದೂರುತ್ತಿರುವ ಮುಖ್ಯಮಂತ್ರಿ ಜಾಣ ಮರೆವು ಪ್ರದರ್ಶಿಸುತ್ತಿದ್ದಾರೆ ಎಂದರು.

ಬಿ.ಎಸ್‌.ಯಡಿಯೂರಪ್ಪ ಅವರ ನೇತೃತ್ವದಲ್ಲಿ ಎರಡು ತಂಡಗಳನ್ನು ರಚಿಸಿದ್ದು,ಒಂದು ತಂಡ ತುಮಕೂರು ಮತ್ತೊಂದು ತಂಡ ಬೆಂಗಳೂರು ಜಿಲ್ಲೆಯನ್ನು ಸಂದರ್ಶಿಸಲಿದೆ ಎಂದರು.

ತಂಡದ ನೇತೃತ್ವ ಮತ್ತು ಪ್ರವಾಸ ಕೈಗೊಳ್ಳಲಿರುವ ಜಿಲ್ಲೆಗಳ ವಿವರ.

ಬಸನಗೌಡ ಪಾಟೀಲ ಯತ್ನಾಳ: ಮೈಸೂರು–ಚಾಮರಾಜನಗರ. ಸಿ.ಟಿ. ರವಿ: ಕೋಲಾರ–ಚಿಕ್ಕಬಳ್ಳಾಪುರ. ಅರವಿಂದ ಬೆಲ್ಲದ: ರಾಯಚೂರು–ಯಾದಗಿರಿ, ಬಿ.ವೈ.ವಿಜಯೇಂದ್ರ: ಬೀದರ್ –ಕಲಬುರಗಿ. ಕೆ.ಎಸ್. ಈಶ್ವರಪ್ಪ:ಬಳ್ಳಾರಿ–ಕೊಪ್ಪಳ. ಶ್ರೀರಾಮುಲು: ಹಾವೇರಿ–ಗದಗ.

ಅರವಿಂದ ಲಿಂಬಾವಳಿ: ಬೆಳಗಾವಿ–ಚಿಕ್ಕೋಡಿ. ನಳಿನ್ ಕುಮಾರ್ ಕಟೀಲ್:ವಿಜಯಪುರ–ಬಾಗಲಕೋಟೆ. ಸುನಿಲ್ ಕುಮಾರ್: ಶಿವಮೊಗ್ಗ–ಉತ್ತರ ಕನ್ನಡ. ಆರಗ ಜ್ಞಾನೇಂದ್ರ: ಉಡುಪಿ–ಚಿಕ್ಕಮಗಳೂರು. ವಿಶ್ವೇಶ್ವರ ಹೆಗಡೆ ಕಾಗೇರಿ: ದಾವಣಗೆರೆ–ಚಿತ್ರದುರ್ಗ. ಆರ್‌.ಅಶೋಕ: ದಕ್ಷಿಣ ಕನ್ನಡ–ಕೊಡಗು. ಡಿ.ವಿ.ಸದಾನಂದಗೌಡ: ಮಂಡ್ಯ–ಹಾಸನ. ಕೋಟ ಶ್ರೀನಿವಾಸ ಪೂಜಾರಿ: ಬೆಂಗಳೂರು ಗ್ರಾಮಾಂತರ–ರಾಮನಗರ. ಗೋವಿಂದ ಕಾರಜೋಳ : ಧಾರವಾಡ–ವಿಜಯನಗರ.

'ಅಪಾಯದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ'

ಹೊನಕೆರೆ ನಂಜುಂಡೇಗೌಡಗೆ 'ಖಾದ್ರಿ ಶಾಮಣ್ಣ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವ್ಯಕ್ತಿ ಸ್ವಾತಂತ್ರ್ಯ ಅಪಾಯದಲ್ಲಿದೆ. ಇತ್ತೀಚೆಗೆ ಪತ್ರಕರ್ತರು ಅಭಿವ್ಯಕ್ತಿ ಹಾಗೂ ವಾಕ್ ಸ್ವಾತಂತ್ರ್ಯ ಕಳೆದುಕೊಳ್ಳುವ ಸ್ಥಿತಿಗೆ ತಲುಪುತ್ತಿದ್ದಾರೆ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಕಳವಳ ವ್ಯಕ್ತಪಡಿಸಿದರು.

ಮೇಲುಕೋಟೆಯ ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್, ಎಫ್‌ಕೆಸಿಸಿಐ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಪ್ರಜಾವಾಣಿ'ಯ ವಿಶೇಷ ವರದಿಗಾರ ಹೊನಕೆರೆ ನಂಜುಂಡೇಗೌಡ ಅವರಿಗೆ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'ಯನ್ನು ಪ್ರದಾನ ಮಾಡಿ ಅವರು ಮಾತನಾಡಿದರು.

'ಅಭಿವ್ಯಕ್ತಿ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದರೂ ಪ್ರಬಲ ಜಾತಿ, ಶ್ರೀಮಂತರು, ಉದ್ಯಮಗಳ ವಿರುದ್ಧ ಬರೆಯಲು ಆಗುತ್ತಿಲ್ಲ. ಪ್ರಭಾವಿ ರಾಜಕಾರಣಿಗಳ ವಿರುದ್ಧ ಬರೆಯುವುದೂ ವಿರಳವಾಗಿದೆ. ಪತ್ರಿಕೋದ್ಯಮದ ಧ್ವನಿಯೇ ಕಡಿಮೆಯಾಗಿದೆ' ಎಂದರು.

ಹೊನಕೆರೆ ನಂಜುಂಡೇಗೌಡ ಮಾತನಾಡಿ, 'ಪ್ರಶಸ್ತಿಯ ನಗದನ್ನು ಖಾದ್ರಿ ಶಾಮಣ್ಣ ಟ್ರಸ್ಟ್‌ಗೆ ಮರಳಿ ನೀಡುತ್ತಿದ್ದು, ಈ ಟ್ರಸ್ಟ್ ಇನ್ನಷ್ಟು ಬೆಳೆಯಲಿ' ಎಂದು ಆಶಿಸಿದರು.



ಪ್ರಜಾವಾಣಿ ವಿಶೇಷ ವರದಿಗಾರ ಹೊನಕೆರೆ ನಂಜುಂಡೇಗೌಡ ಅವರಿಗೆ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ' ನೀಡಲಾಯಿತು ಪತ್ನಿ ಸುಮತಿ ಎಸ್‌. ಜೊತೆಗೆ ಇದ್ದರು. ನಿಂತವರು ಎಡದಿಂದ ವಕೀಲ ಬಿ.ಟಿ. ವೆಂಕಟೇಶ್, ಸಚಿವ ಎಚ್‌.ಕೆ. ಪಾಟೀಲ,ಪತ್ರಕರ್ತ ಆರ್‌.ಪಿ. ಜಗದೀಶ್ ಉಪಸ್ಥಿತರಿದ್ದರು. — ಪ್ರಜಾವಾಣಿ ಚಿತ್ರ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಧಾರ್ಮಿಕ ದತ್ತಿ ಇಲಾಖೆ

ಕ್ರಾಂತಿಕಾರಿ ಬದಲಾವಣೆಯ ಪರ್ವ



ಕರ್ನಾಟಕ ಭಾರತ್ ಗೌರವ್ ಯಾತ್ರೆ

- ಕರ್ನಾಟಕ ಭಾರತ್ ಗೌರವ್ ಕಾಶಿ ಯಾತ್ರೆಯಲ್ಲಿ ಗಯಾ ಕ್ಷೇತ್ರ ಸೇರ್ಪಡೆ
- ಸಹಾಯ ಧನ ರೂ 5,000 ದಿಂದ ರೂ 7,500ಕ್ಕೆ ಹೆಚ್ಚಳ
- ಊಟ ತಿಂಡಿಗಾಗಿ ಪ್ರತ್ಯೇಕ ವ್ಯವಸ್ಥೆ
- ವೈದ್ಯರ ಸೇವೆಗಾಗಿ ಪ್ರತ್ಯೇಕ ಬೋಗಿಯಲ್ಲಿ ವ್ಯವಸ್ಥೆ

ಪ್ರವರ್ಗ 'ಸಿ' ಅಧಿಸೂಚಿತ ದೇವಾಲಯ / ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು / ನೌಕರರಿಗೆ ಕರ್ನಾಟಕ ಭಾರತ್ ಗೌರವ್ ಕಾಶಿ-ಗಯಾ **ಯೋಜನೆಯಡಿ ವರ್ಷದಲ್ಲಿ 1200 ಜನ ಅರ್ಚಕರು ಮತ್ತು ನೌಕರರಿಗೆ ಉಚಿತ ಯಾತ್ರೆ**

ಸಾಮೂಹಿಕ ಮದುವೆಗಳಿಗೆ ಉತ್ತೇಜನ: 'ಮಾಂಗಲ್ಯ ಭಾಗ್ಯ' ಯೋಜನೆ



ಪ್ರವರ್ಗ 'ಎ' ಮತ್ತು 'ಬಿ' ಅಧಿಸೂಚಿತ ದೇವಾಲಯಗಳಲ್ಲಿ **'ಮಾಂಗಲ್ಯ ಭಾಗ್ಯ'** ಯೋಜನೆ ಅಡಿ ಸಾಮೂಹಿಕ ವಿವಾಹಗಳ ಆಯೋಜನೆ. ಈ ಯೋಜನೆಯಡಿಯಲ್ಲಿ ವಧು-ವರರಿಗೆ **ರೂ.55,000/-ಗಳ** ಪ್ರೋತ್ಸಾಹ ಧನವನ್ನು ಆದಾಯ ಇರುವ ದೇವಾಲಯಗಳ ನಿಧಿಯಿಂದ ಬಳಸಿಕೊಳ್ಳಲಾಗುವುದು. ಆದಾಯ ಕಡಿಮೆ ಇರುವ ದೇವಾಲಯಗಳಲ್ಲಿ **ರೂ.55,000/-ಗಳ** ಪ್ರೋತ್ಸಾಹ ಧನವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ನೀಡಲಾಗುವುದು.

ತಸ್ತಿಕ್ ಹಣ ಡಿಬಿಟಿ

ತಸ್ತಿಕ್ ಹಣವನ್ನು ನೇರವಾಗಿ ಅರ್ಚಕರ ಖಾತೆಗೆ ಡಿಬಿಟಿ ಮೂಲಕ ವರ್ಗಾವಣೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಯಾತ್ರಾರ್ಥಿ ಮೊಬೈಲ್ ಆಪ್

- ಕಾಶಿ, ಚಾರ್ ಧಾಮ್ ಮತ್ತು ಮಾನಸ ಸರೋವರ ಯಾತ್ರಾರ್ಥಿಗಳಿಗೆ ಹೊಸ ಮೊಬೈಲ್ ಆಪ್ ಬಿಡುಗಡೆ
- ಸಹಾಯ ಧನ ಯಾತ್ರಾರ್ಥಿಗಳ ಖಾತೆಗೆ ನೇರವಾಗಿ ಡಿಬಿಟಿ ಮೂಲಕ ಜಮೆ
- ಸಹಾಯ ಧನ: ಕಾಶಿ ಯಾತ್ರೆ - **ರೂ 5,000 ; ಚಾರ್ ಧಾಮ್ ಯಾತ್ರೆ - ರೂ 20,000; ಮಾನಸ ಸರೋವರ ಯಾತ್ರೆ - ರೂ 30,000**

ಇಲಾಖೆಯ ವೆಬ್‌ಸೈಟ್ https://karnatakayatras.com ಮತ್ತು ಮೊಬೈಲ್ ಆಪ್ Karnataka.yatras

ವಿಷನ್ ಗ್ರೂಪ್ (Vision Group)

ರಾಜ್ಯದ ದೇವಸ್ಥಾನಗಳ ಸಮಗ್ರ ಅಭಿವೃದ್ಧಿಗಾಗಿ ಸಮಾಜದ ವಿವಿಧ ಕ್ಷೇತ್ರಗಳ ಪ್ರಮುಖರನ್ನೊಳಗೊಂಡ 'ವಿಷನ್ ಗ್ರೂಪ್' (Vision Group) ರಚನೆ ಮಾಡಲಾಗುವುದು.

ಆರೋಗ್ಯ ಕಾರ್ಡ್

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿನ ಅಧಿಸೂಚಿತ ದೇವಾಲಯ / ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರಿಗೆ ಆಯುಷ್ಮಾನ್ ಭಾರತ್ ಯೋಜನೆಯಡಿ 'ಆರೋಗ್ಯ ಕಾರ್ಡ್' ಅನ್ನು ಜಿಲ್ಲಾ ಕೇಂದ್ರಗಳಲ್ಲಿ ವಿತರಣೆಗೆ ಕ್ರಮ.

ಸಾಮಾನ್ಯ ಸಂಗ್ರಹಣಾ ನಿಧಿ

ದೇವಸ್ಥಾನಗಳ ನಿವ್ವಳ ಆದಾಯದ ಶೇ 10 ರಷ್ಟು ಸಾಮಾನ್ಯ ಸಂಗ್ರಹಣಾ ನಿಧಿಗೆ ಮೀಸಲಿಟ್ಟ ಹಣವನ್ನು 'ಸಿ' ದರ್ಜೆ ದೇವಸ್ಥಾನಗಳ ಅಭಿವೃದ್ಧಿಗಾಗಿ ಮತ್ತು ಅರ್ಚಕರು / ನೌಕರರು / ಆಗಮಿಕರ ಶ್ರೇಯೋಭಿವೃದ್ಧಿಗಾಗಿ ಬಳಕೆ

ವಿದ್ಯಾಭ್ಯಾಸ ಪ್ರೋತ್ಸಾಹ ಧನ

ಅಧಿಸೂಚಿತ ದೇವಾಲಯ / ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು / ನೌಕರರ ಮಕ್ಕಳಿಗೆ ವಿದ್ಯಾಭ್ಯಾಸ ಪ್ರೋತ್ಸಾಹ ಧನ ಯೋಜನೆ ಪ್ರಾರಂಭ

1	ಪದವಿ ಪೂರ್ವ ಶಿಕ್ಷಣ (ಪಿಯುಸಿ)	ರೂ. 5,000
2	ಐಟಿಐ/ಜೆಓಸಿ/ಡಿಪ್ಲೋಮ	ರೂ. 5,000
3	ಪದವಿ ಶಿಕ್ಷಣ	ರೂ. 7,000
4	ಸ್ನಾತಕೋತ್ತರ ಪದವಿ ಶಿಕ್ಷಣ	ರೂ. 15,000
5	ಇತರೆ ವೈದ್ಯಕೀಯ ಕೋರ್ಸ್‌ಗಳು (ಆಯುರ್ವೇದಿಕ್ ಹೋಮಿಯೋಪಥಿ ಮತ್ತು ಯುನಾನಿ)	ರೂ. 25,000
6	ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್)	ರೂ. 25,000
7	ವೈದ್ಯಕೀಯ/ಡೆಂಟಲ್ ಶಿಕ್ಷಣ	ರೂ. 50,000
8	ವಿದೇಶ ವ್ಯಾಸಂಗ	ರೂ. 100,000

(ಒಂದು ಬಾರಿ ಮಾತ್ರ)



ದೇವಾಲಯದ ಹಣ ಸದ್ಬಳಕೆ

ಮುಜರಾಯಿ ಇಲಾಖೆಯಿಂದ ಬರುವ ಸಂಪೂರ್ಣ ಹಣವನ್ನು ಹಿಂದೂ ಧರ್ಮದ ದೇವಾಲಯಗಳ ಅಭಿವೃದ್ಧಿಗಾಗಿಯೇ ಪ್ರತಿಶತ ವೆಚ್ಚ ಮಾಡಲಾಗುತ್ತಿದೆ.

ಉಚಿತ ವಿದ್ಯುತ್ / ನೀರು

ಪ್ರವರ್ಗ 'ಸಿ' ಅಧಿಸೂಚಿತ ದೇವಾಲಯ / ಸಂಸ್ಥೆಗಳಿಗೆ ವಿದ್ಯುತ್ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಉಚಿತವಾಗಿ ಒದಗಿಸಲು ಸಂಬಂಧಪಟ್ಟ ಇಲಾಖೆಯನ್ನು ಕೋರಲಾಗಿದೆ

ಆರ್ಕಿಟೆಕ್ಚರಲ್ ಸಮಿತಿ (Architectural Committee)

ಪುರಾತನ ದೇವಾಲಯಗಳನ್ನು ಅಭಿವೃದ್ಧಿಪಡಿಸಲು 2003 ರಲ್ಲಿಯೇ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ 2023 ರಲ್ಲಿ ಪ್ರಥಮ ಬಾರಿಗೆ 'ಆರ್ಕಿಟೆಕ್ಚರಲ್ ಸಮಿತಿ' (Architectural Committee) ರಚನೆ ಮಾಡಲಾಗಿದೆ.

ಮೃತ ಅರ್ಚಕರ ಕುಟುಂಬಕ್ಕೆ 2 ಲಕ್ಷ ಪರಿಹಾರ

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿನ ಅಧಿಸೂಚಿತ ದೇವಾಲಯ / ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು / ನೌಕರರು ಮೃತಪಟ್ಟಲ್ಲಿ, ಮೃತರ ಕುಟುಂಬಕ್ಕೆ ರೂ. 2 ಲಕ್ಷ ಪರಿಹಾರ.

ಮಾಹಿತಿ ಕೇಂದ್ರ


ದೇವಾಲಯಗಳ ಮಾಹಿತಿಗಳನ್ನು ಭಕ್ತಾದಿಗಳಿಗೆ / ಸಾರ್ವಜನಿಕರಿಗೆ ಒದಗಿಸಲು ಹಾಗೂ ದೇವಸ್ಥಾನಗಳಲ್ಲಿ ಸೇವೆಗಳನ್ನು, ತಂಗುವ ಕೊಠಡಿಗಳನ್ನು ಕಾಯ್ದಿರಿಸಲು ಹಾಗೂ ದರ್ಶನದ ಸಮಯದ ಕುರಿತು ಮಾಹಿತಿ ಪಡೆಯಲು ಹೊಸ ಮಾಹಿತಿ ಕೇಂದ್ರ ತೆರೆಯಲು ಕ್ರಮ ವಹಿಸಲಾಗುತ್ತಿದೆ


ದೇವಸ್ಥಾನಗಳಲ್ಲಿ ಇತ್ತೀಚೆಗೆ ಜಾರಿಗೊಳಿಸಿರುವ ಉಪಕ್ರಮಗಳು

ದರ್ಶನದ ಸಮಯದಲ್ಲಿ ಮೊಬೈಲ್ ಬಳಕೆ ನಿಷೇಧಿಸಲಾಗಿದೆ	ಹಿರಿಯ ನಾಗರಿಕರಿಗೆ ದರ್ಶನದಲ್ಲಿ ಪ್ರಥಮಾದ್ಯತೆ	ಶಿಶುಗಳಿಗೆ ಹಾಲುಣಿಸುವ ಕೊಠಡಿ	ಶುದ್ಧ ನೀರು, ಸ್ವಚ್ಛತೆ, ಭದ್ರತಾ ವ್ಯವಸ್ಥೆಗೆ ಆದ್ಯತೆ

ಪ್ರಕಟಣೆ : ಧಾರ್ಮಿಕ ದತ್ತಿ ಇಲಾಖೆ

ಧರ್ಮೋ ರಕ್ಷತಿ ರಕ್ಷಿತಃ





ಡಿಜಿಟಲ್ ಯುಗದಲ್ಲಿ ಅಧಿಕೃತ ವೆಬ್‌ಸೈಟ್‌ನಲ್ಲಿಯೇ ಸಾರ್ವಜನಿಕರು ವ್ಯವಹರಿಸಬೇಕು

ರೇಣುಕಾ ಸುಕುಮಾರ್
ಪೊಲೀಸ್ ಕಮಿಷನರ್, ಹುಬ್ಬಳ್ಳಿ-ಧಾರವಾಡ ಮಹಾನಗರ



ಸ್ಟಾರ್ಟ್‌ಅಪ್ ಕಂಪನಿಗಳು ಸೈಬರ್ ದಾಳಿಗೆ ಒಳಗಾದಾಗ ಡೇಟಾ ನಷ್ಟವಾಗುತ್ತದೆ. ಕಳೆದುಕೊಂಡ ಡೇಟಾ ಅಥವಾ ನಷ್ಟದ ಹಣ ಭರಿಸಿಕೊಳ್ಳಲು ಸೈಬರ್ ವಿಮೆ ನೆರವಾಗಲಿದೆ

ವಿನಯ್ ಜವಳಿ, ಉದ್ಯಮಿ



ಸೈಬರ್ ಪ್ರಕರಣಗಳ ತನಿಖೆಗೆ ಬೇಕಾದ ತಂತ್ರಾಂಶಗಳನ್ನು ಆಗಾಗ್ಗೆ ಅಪ್‌ಡೇಟ್ ಮಾಡುತ್ತೇವೆ. ನಮ್ಮ ವ್ಯಾಪ್ತಿ ಮೀರಿದ ಪ್ರಕರಣಗಳನ್ನು ಸಿಐಡಿಗೆ ನೀಡುತ್ತೇವೆ.

ರಮೇಶ್ ಬಾನೋತ್
ಪೊಲೀಸ್ ಕಮಿಷನರ್, ಮೈಸೂರು

ಸೈಬರ್ ಅಪರಾಧ ಇಲ್ಲ ಕಡಿವಾಣ

ಒಂದನೇ ಪುಟದಿಂದ...

ಬ್ಯಾಂಕ್ ಅಥವಾ ಸರ್ಕಾರಿ ಕಚೇರಿಯಿಂದ ಕರೆ ಬಂದಿರಬಹುದೆಂದು ಭಾವಿಸಿ, ಎಲ್ಲಾ ದಾಖಲೆಪತ್ರಗಳ ವಿವರಣೆ ನೀಡುತ್ತಾರೆ. ಅವರು ಹೇಳಿದಂತೆ ಮಾಡುತ್ತಾರೆ. ಪ್ರಕ್ರಿಯೆ ಪೂರ್ಣಗೊಂಡು ಕರೆ ಕಡಿತಗೊಂಡು ಮತ್ತೆ ಸಂಪರ್ಕ ಸಿಗದಾದಾಗ, ಮೋಸದಿಂದ ಹಣ ಕಳೆದುಕೊಂಡಿದ್ದು ಗೊತ್ತಾಗುತ್ತದೆ.

ಕೊಪ್ಪಳ ಜಿಲ್ಲೆಯಲ್ಲಿ ಈ ವರ್ಷ ಎಂಟು ತಿಂಗಳಲ್ಲಿ 8 ಆನ್‌ಲೈನ್ ವಂಚನೆ ಪ್ರಕರಣಗಳು ದಾಖಲಾಗಿದ್ದು, ಜನರು ಒಟ್ಟು ₹1.16 ಕೋಟಿ ಕಳೆದುಕೊಂಡಿದ್ದಾರೆ.

ಆನ್‌ಲೈನ್ ಶಾಪಿಂಗ್ ಮಾಡುವ ಪ್ರವೃತ್ತಿ ಬೆಳೆಸಿಕೊಂಡಿರುವ ರಾಯಚೂರಿನ ನೌಕರಸ್ಥ ಮತ್ತು ಶ್ರೀಮಂತ ಮನೆತನದ ಮಹಿಳೆಯರೂ ಹಣ ಕಳೆದುಕೊಂಡಿದ್ದಾರೆ. ಆನ್‌ಲೈನ್‌ನಲ್ಲಿ ವಸ್ತುಗಳನ್ನು ಖರೀದಿಸಲು ಪ್ರಯತ್ನಿಸಿ ಹಣ ಕಳೆದುಕೊಂಡವರು ಬಹುತೇಕ ಸಂದರ್ಭಗಳಲ್ಲಿ ದೂರು ದಾಖಲಿಸಿಲ್ಲ. ಹೀಗಾಗಿ ವಂಚಕರ ಕೃತ್ಯಕ್ಕೆ ಕಡಿವಾಣ ಬಿದ್ದಿಲ್ಲ.

ಆನ್‌ಲೈನ್ ಖರೀದಿ ವೇಳೆ ಕೊಡುವ ಫೋನ್ ನಂಬರ್‌ನಿಂದ ವಿಳಾಸ ಪತ್ತೆ ಮಾಡಿ ವಂಚಕರು ಆಕರ್ಷಕ ಬಾಂಡ್‌ಪೇಪರ್‌ನಲ್ಲಿ ರಿಜಿಸ್ಟರ್ ಅಂಚೆ ಮೂಲಕ ಪತ್ರ ಕಳಿಸುತ್ತಾರೆ. ಅದನ್ನು ಸ್ವೀಕರಿಸಿದ ಬಳಿಕ ಅದರಲ್ಲಿ ಬಹುಮಾನ ಗೆದ್ದಿರುವ ಮಾಹಿತಿ ಮತ್ತು ದೂರವಾಣಿ ಸಂಖ್ಯೆ ಇರುತ್ತದೆ. ಪೇಪರ್‌ನಲ್ಲಿ ಸ್ಕ್ರಾಚ್ ಮಾಡಿದರೆ ಬಹುಮಾನ ಮೊತ್ತ ಗೊತ್ತಾಗಲಿದೆ ಎಂಬ ಸಂದೇಶವೂ ಇರುತ್ತದೆ. ಸ್ಕ್ರಾಚ್ ಮಾಡಿದ ಬಳಿಕ ₹1 ಲಕ್ಷ ಅಥವಾ ₹2 ಲಕ್ಷ ಗೆದ್ದಿರುವಂತೆ ಬಿಂಬಿಸಲಾಗುತ್ತದೆ. ಅದರಂತೆ ಮೊದಲು ಜಿಎಸ್‌ಟಿ ಪಾವತಿಸಿದರೆ ಪೂರ್ಣ ಮೊತ್ತ ನಿಮ್ಮದು ಎಂದು ನಂಬಿಸಲಾಗುತ್ತದೆ. ಆನ್‌ಲೈನ್ ಕರೆ ಮಾಡುವಂತೆ ಪತ್ರದಲ್ಲಿ ಸೂಚಿಸಿ ಶುಲ್ಕದ ಹೆಸರಲ್ಲಿ ಹಣ ಪಾವತಿಸಿಕೊಳ್ಳಲಾಗುತ್ತದೆ. ಈ ವೇಳೆ ಬ್ಯಾಂಕ್‌ನ ಖಾತೆ ಪತ್ತೆ ಮಾಡಿ, ಹಣವನ್ನು ಖಾಲಿ ಮಾಡಿರುತ್ತಾರೆ.

‘ಹಣ ಗೆದ್ದ ಖುಷಿಯಲ್ಲಿ ಕೆಲವರು ಯಾರಿಗೂ ಹೇಳುವುದೇ ಇಲ್ಲ. ಗೋಪ್ಯತೆ ಕಾಯ್ದುಕೊಳ್ಳಲು ಪ್ರಯತ್ನಿಸಿ, ಹಣ ಕಳೆದುಕೊಳ್ಳುತ್ತಾರೆ. ವಂಚನೆಗೆ ಒಳಗಾಗಿರುವುದು ತಿಳಿದು, ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸುವ ವೇಳೆಗೆ ತುಂಬಾ ತಡವಾಗಿರುತ್ತದೆ. ಹೀಗಾಗಿ ವಂಚಕರನ್ನು ಪತ್ತೆ ಮಾಡಲು ಮತ್ತು ಮುಂದಿನ ಕ್ರಮ ಜರುಗಿಸಲು ಕಷ್ಟವಾಗುತ್ತದೆ’ ಎಂದು ಹೇಳುತ್ತಾರೆ ರಾಯಚೂರಿನ ಸೈಬರ್ ಕ್ರೈಮ್ ಇನ್‌ಸ್ಪೆಕ್ಟರ್ ಮಹಾಂತೇಶ.

ನಕಲಿ ಖಾತೆ, ಇ-ಮೇಲ್ ಸಂದೇಶ

ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ನಕಲಿ ಖಾತೆ ಸೃಷ್ಟಿಸಿ, ವಿಶ್ವಾಸ ಗಳಿಸಿ ಹಣಕ್ಕೆ ಬೇಡಿಕೆ. ವಿದೇಶಿಯರ ಹೆಸರಲ್ಲಿ ಖಾತೆ ತೆರೆದು, ಸ್ನೇಹದ ಕೋರಿಕೆ ಸಲ್ಲಿಸಿ, ಸಂಕಷ್ಟ ತೋಡಿಕೊಂಡು ಹಣಕ್ಕೆ ಮೊರೆ ಇಡುತ್ತಾರೆ. ಇಂತಿಂಥ ಊರು ಅಥವಾ ವಿದೇಶದಲ್ಲಿ ಅಪಾಯದಲ್ಲಿ ಸಿಲುಕಿರುವ ಮತ್ತು ಹಣದ ಅಗತ್ಯವಿರುವುದಾಗಿ ಆಪ್ತರು, ಸ್ನೇಹಿತರ ಹೆಸರಲ್ಲಿ ನಕಲಿ ಇ-ಮೇಲ್ ಸಂದೇಶ ಬರುತ್ತದೆ.

ಆಸಕ್ತಿಕರ ಸಂಗತಿಯೆಂದರೆ, ಬಹುತೇಕ ವಂಚಕರು ಉತ್ತರ ಪ್ರದೇಶ, ಜಾರ್ಖಂಡ್, ಬಿಹಾರ ರಾಜ್ಯಗಳ ಮೂಲದವರು. ಅವರು ಹಿಂದಿ ಅಥವಾ ಇಂಗ್ಲಿಷ್ ಭಾಷೆಗಳಲ್ಲಿ ಮಾತನಾಡಿ, ಜನರನ್ನು ಮರಳು ಮಾಡುತ್ತಾರೆ. ಬಹುತೇಕ ಮಂದಿ ನಿರುದ್ಯೋಗಿಗಳಾಗಿದ್ದು, ಅವರು ತಂಡ ಕಟ್ಟಿಕೊಂಡು ಸಿಕ್ಕಸಿಕ್ಕ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡುತ್ತಾರೆ. ಅವರ ಮಾತನ್ನು ಕೇಳದಿದ್ದರೆ, ಮುಂದೆ ಅಪಾಯವಾದೀತು ಎನ್ನುತ್ತಾರೆ. ಹೀಗಾಗಿ ಜನ ಹೆದರಿಕೊಳ್ಳುತ್ತಾರೆ’ ಎಂಬುದು ಕಲಬುರಗಿ ಸೈಬರ್ ಪೊಲೀಸ್ ಠಾಣೆಯ ಪಿಎಸ್‌ಐ ಸೂರ್ಯಕಾಂತ ಎಸ್. ಜೇವರ್ಗಿ ಅವರ ವಿವರಣೆ.

ಚಿಕ್ಕಬಳ್ಳಾಪುರ ಮತ್ತು ದಾವಣಗೆರೆ ಜಿಲ್ಲೆಯಲ್ಲೂ ಪರಿಸ್ಥಿತಿಯೇನೂ ಭಿನ್ನವಾಗಿಲ್ಲ. ಸಾಲ ನೀಡುವ, ಉಡುಗೊರೆ ಕೊಡುವ ನೆಪದಲ್ಲಿ, ಟಾಸ್ಕ್‌ಗಳನ್ನು ಪೂರ್ಣಗೊಳಿಸಿದರೆ ಅಥವಾ ಇಂತಿಷ್ಟು ಹಣ ಹೂಡಿದರೆ ಹಣ ಗಳಿಸಬಹುದು ಎಂದು ನಂಬಿಸಿ, ವಂಚಿಸಿದ್ದಾರೆ.

ಉದ್ಯೋಗ ಕೊಡಿಸುವುದಾಗಿ ಮಹಿಳೆಯೊಬ್ಬರಿಂದ ವಂಚಕರು ₹ 2 ಲಕ್ಷ ಪೀಕಿಸಿದ್ದರು. ಪೊಲೀಸರಿಗೆ ದೂರು ನೀಡಬೇಕು ಎನ್ನುವಷ್ಟರಲ್ಲಿ, ‘ನಾವೇ ಪೊಲೀಸರು. ನಿಮ್ಮ ಹಣ ವಾಪಸ್ ಕೊಡಿಸುತ್ತೇವೆ’ ಎಂದು ನಂಬಿಸಿ ಆನ್‌ಲೈನ್ ವಂಚಕರು ಆಕೆಯಿಂದ ಮತ್ತಷ್ಟು ಹಣ ಸುಲಿದ ಪ್ರಕರಣ ನಡೆದಿದೆ.

‘ಆನ್‌ಲೈನ್‌ನಲ್ಲಿ ಸ್ವಲ್ಪ ಹಣ ಕಳೆದುಕೊಂಡಿದ್ದೆ. ತಕ್ಷಣ ಸೈಬರ್ ಪೋರ್ಟಲ್‌ನಲ್ಲಿ ದೂರು ಸಲ್ಲಿಸಿದ್ದರಿಂದ ನಾನು ಹಣ ವರ್ಗಾಯಿಸಿದ್ದ ಎರಡು ಖಾತೆಗಳನ್ನು ಬ್ಲಾಕ್ ಮಾಡಿದ್ದಾರೆ. ಇದರಿಂದ ಅನುಕೂಲವಾಯಿತು. ಹಣ ಕಳೆದುಕೊಂಡವರು ಶೀಘ್ರ ದೂರು ನೀಡಬೇಕು. ಅಲ್ಲದೆ, ಪೊಲೀಸರು ಈ ಬಗ್ಗೆ ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಮೂಡಿಸುವುದು ಸಹ ಅಗತ್ಯ’ ಎಂದು ಹಣ ಕಳೆದುಕೊಂಡ ದಾವಣಗೆರೆಯ ಎಂ.ಜಿ. ಶ್ರೀಕಾಂತ್ ಹೇಳುತ್ತಾರೆ.

ಸರಾಸರಿ ಲೆಕ್ಕಾಚಾರ ಹಾಕಿದರೆ, 2022ರಲ್ಲಿ ಸೈಬರ್ ವಂಚಕರ ದಾಳಕ್ಕೆ ಸಿಲುಕಿ ರಾಜ್ಯದ ಜನ ಬರೋಬ್ಬರಿ ₹ 363 ಕೋಟಿ ಕಳೆದುಕೊಂಡಿದ್ದಾರೆ. ಅಂದರೆ, ದಿನಕ್ಕೆ ಸರಾಸರಿ ₹1 ಕೋಟಿ ಹಣ ವಂಚಕರ ಪಾಲಾಗಿದೆ.

ಕೋವಿಡ್ ಅವಧಿಯಲ್ಲಿ ಮತ್ತು ನಂತರದ ದಿನಗಳಲ್ಲಿ ಅರ್ಥವ್ಯವಸ್ಥೆಯಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಕೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದು ಸೈಬರ್ ಕಳ್ಳರಿಗೆ ವರವಾಗಿದೆ. ಇದರಿಂದ ಆನ್‌ಲೈನ್ ವಂಚನೆಗಳ ಪ್ರಮಾಣವೂ ದ್ವಿಗುಣಗೊಂಡಿದೆ. 2019 ರಿಂದ 2022ರವರೆಗೆ ರಾಜ್ಯದ ಜನ ಬರೋಬ್ಬರಿ ₹722 ಕೋಟಿ ಕಳೆದುಕೊಂಡಿದ್ದಾರೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೊ (ಎನ್‌ಸಿಆರ್‌ಬಿ) ಪ್ರಕಾರ, ಸೈಬರ್ ಅಪರಾಧಗಳು ಹೆಚ್ಚು ನಡೆಯುವ ರಾಜ್ಯಗಳ ಪೈಕಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆಯು ಐದು ವರ್ಷಗಳಲ್ಲಿ ಹಲವು ಪಟ್ಟು ಹೆಚ್ಚಾಗಿದೆ. 2017ರಲ್ಲಿ 2,023 ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ 12,551ಕ್ಕೆ ಹೆಚ್ಚಳವಾಗಿದ್ದರೆ, ಪ್ರಸ್ತುತ ಆಗಸ್ಟ್ ಅಂತ್ಯಕ್ಕೆ 13,613 ಪ್ರಕರಣಗಳು ದಾಖಲಾಗಿವೆ.

ಬೆಂಗಳೂರು ಮೊದಲು: ರಾಜ್ಯದಲ್ಲಿ ಸೈಬರ್ ಅಪರಾಧ ವಂಚನೆಗೆ ಒಳಗಾದವರ ಪಟ್ಟಿಯಲ್ಲಿ ರಾಜಧಾನಿ ಬೆಂಗಳೂರಿಗೆ ಮೊದಲ ಸ್ಥಾನ. 2022ರಲ್ಲಿ ಇಲ್ಲಿನ ಜನರಿಗೆ ₹266.70 ಕೋಟಿ ಮೊತ್ತದಷ್ಟು ವಂಚನೆಯಾಗಿದೆ. ಮೈಸೂರು ಎರಡನೇ ಸ್ಥಾನದಲ್ಲಿದ್ದು, ಇಲ್ಲಿನವರು ₹14.07 ಕೋಟಿ ಕಳೆದುಕೊಂಡಿದ್ದಾರೆ. ಮಂಡ್ಯ ಜಿಲ್ಲೆ ಮೂರನೇ ಸ್ಥಾನದಲ್ಲಿದ್ದು, ₹13.82 ಕೋಟಿ ಮೊತ್ತದ ವಂಚನೆ ವರದಿಯಾಗಿದೆ.

2021ರಲ್ಲಿ ರಾಜ್ಯದಲ್ಲಿ 8132 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ 12,551ಕ್ಕೆ ಏರಿಕೆಯಾಗಿತ್ತು. ಪ್ರಸ್ತುತ ವರ್ಷ ಆಗಸ್ಟ್ ಅಂತ್ಯದವರೆಗೆ 13,613 ಪ್ರಕರಣಗಳು ದಾಖಲಾಗಿವೆ. ಅತಿಹೆಚ್ಚು ಪ್ರಕರಣಗಳು ಬೆಂಗಳೂರು ನಗರದಲ್ಲಿ ದಾಖಲಾದರೆ, ನಂತರ ಮೈಸೂರು, ಬೆಂಗಳೂರು ಗ್ರಾಮಾಂತರ, ಹುಬ್ಬಳ್ಳಿ-ಧಾರವಾಡ, ಮಂಡ್ಯ ಹಾಗೂ ಮಂಗಳೂರಿನಲ್ಲಿ ದಾಖಲಾಗಿವೆ.

ವಸೂಲಾತಿ ಕಡಿಮೆ: ಕರ್ನಾಟಕದಲ್ಲಿ 2022ರಲ್ಲಿ ಆನ್‌ಲೈನ್ ವಂಚನೆಗೆ ಒಳಗಾದ ಹಣದ ಪೈಕಿ ₹46.87 ಕೋಟಿ ಮಾತ್ರ ಮರುವಸೂಲಿಯಾಗಿದೆ. ಇದು ಒಟ್ಟಾರೆ ಮೊತ್ತದ ಶೇ 12ರಷ್ಟು ಮಾತ್ರ. ಹಿಂದಿನ ವರ್ಷಗಳ ಅಂಕಿ–ಅಂಶವೂ ಆಶಾದಾಯಕವಾಗಿಲ್ಲ. ಶೇ 80ಕ್ಕೂ ಹೆಚ್ಚು ಪ್ರಕರಣಗಳು ತನಿಖೆಯ ಹಂತದಲ್ಲಿವೆ. ವಂಚಕರ ವಿರುದ್ಧ ಕ್ರಮ ಆಗದಿರುವುದಕ್ಕೆ ಹಲವು ಕಾರಣಗಳಿವೆ.

‘ವಂಚನೆಗೆ ಒಳಗಾದವರು ತಡವಾಗಿ ದೂರು ದಾಖಲಿಸುವುದರಿಂದ ಆರೋಪಿಗಳ ಕುರಿತು ಸಮರ್ಪಕ ಮಾಹಿತಿ ಸಿಗುವುದಿಲ್ಲ. ವಂಚನೆಗೆ ಒಳಗಾದ ಮೊದಲ ಒಂದು ಗಂಟೆ ಅವಧಿಯನ್ನು ‘ಗೋಲ್ಡನ್ ಹವರ್’ ಎನ್ನುತ್ತೇವೆ. ಆ ಅವಧಿಯಲ್ಲಿ ಸಂತ್ರಸ್ತರು ಮಾಹಿತಿ ನೀಡಿದರೆ ಹಣದ ಮರುವಸೂಲಾತಿ ಅವಕಾಶ ಹೆಚ್ಚು. ಆದರೆ, ಶೇ 99ರಷ್ಟು ಪ್ರಕರಣಗಳಲ್ಲಿ ಕೆಲವು ದಿನ–ವಾರಗಳ ನಂತರ ದೂರು ದಾಖಲಾಗುತ್ತಿದೆ. ಇದು ತನಿಖೆಯ ಹಿನ್ನಡೆಗೆ ಕಾರಣವಾಗುತ್ತದೆ’ ಎಂದು ಸೈಬರ್ ಪೊಲೀಸರು ಹೇಳುತ್ತಾರೆ.

‘ಮೊದಲೆಲ್ಲ, ಸೈಬರ್ ವಂಚನೆಗೆ ಒಳಗಾದರೆ ಆ ಠಾಣೆಗೇ ಹೋಗಿ ದೂರು ನೀಡಬೇಕಿತ್ತು. ಈಗ ಎಲ್ಲಿಯಾದರೂ ದೂರು ನೀಡಬಹುದು. ಆನ್‌ಲೈನ್, ಇ-ಮೇಲ್ ದೂರು ಆದೀತು. ಹೀಗಿದ್ದೂ ವಿಳಂಬ ಮಾಡುತ್ತಾರೆ’ ಎಂಬ ಬೇಸರ ಅವರದ್ದು.

ಸದ್ಯ ಬೆಂಗಳೂರು ಹೊರತುಪಡಿಸಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಜಿಲ್ಲೆಗೊಂದು ಸೈಬರ್ ಠಾಣೆ ಇದೆ. ಆದರೆ, ನಿರೀಕ್ಷಿತ ಮಟ್ಟದಲ್ಲಿ ಸಿಬ್ಬಂದಿ ಮತ್ತು ತಂತ್ರಜ್ಞರಿಲ್ಲ. ಕೆಲ ಕಡೆ ಸಿಬ್ಬಂದಿಗೆ ತರಬೇತಿ ನೀಡಿ, ಅಪರಾಧ ಪತ್ತೆ ಪ್ರಕರಣಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ‘ಕಳ್ಳರು ವಂಚನೆಗೆ ತಕ್ಕಂತೆ ನವೀನ ಬಗೆಯ ತಂತ್ರಜ್ಞಾನ ಬಳಸುತ್ತಾರೆ. ಆದರೆ, ಅದಕ್ಕೆ ತಕ್ಕಂತೆ ಪೊಲೀಸರು ನೈಪುಣ್ಯತೆ ಬಳಸಿಕೊಳ್ಳುತ್ತಿಲ್ಲ’ ಎಂಬ ಆಕ್ಷೇಪಣೆಗಳಿವೆ.

ತನಿಖೆ ವಿಳಂಬಕ್ಕೆ ಕಾರಣ: ಹಣ ಕಳೆದುಕೊಂಡ ಗ್ರಾಹಕರ ಮಾಹಿತಿ ಬ್ಯಾಂಕ್‌ಗಳಿಂದ ತಡವಾಗಿ ಸಿಗುವುದರಿಂದ, ವಂಚಕರು ವರ್ಗಾಯಿಸಿಕೊಂಡ ಹಣ ಬೇರೆ ಖಾತೆಗೆ ಅಥವಾ ನಗದು ರೂಪದಲ್ಲಿ ಡ್ರಾ ಮಾಡಿರುತ್ತಾರೆ. ಬ್ಯಾಂಕ್ ಮಾಹಿತಿ ಮತ್ತು ಮೊಬೈಲ್ ನಂಬರ್ ಆಧರಿಸಿ ಸ್ಥಳಕ್ಕೆ ತೆರಳಿದಾಗ ಖಾತೆದಾರರ ಹೆಸರುಗಳು ದುರ್ಬಳಕೆ ಆಗಿರುವುದು ಗೊತ್ತಾಗುತ್ತದೆ.

‘ಪ್ರಕರಣದ ತನಿಖೆಯ ಅಧಿಕಾರ ಇನ್‌ಸ್ಪೆಕ್ಟರ್ ದರ್ಜೆಯ ಅಧಿಕಾರಿಗಳಿಗೆ ಮಾತ್ರ ಇರುವುದರಿಂದ, ಆರೋಪಿಗಳ ಪತ್ತೆಗೆ ಹೊರರಾಜ್ಯಕ್ಕೆ ತನಿಖಾಧಿಕಾರಿಯೇ ತೆರಳಬೇಕು. ಇದು ಇನ್‌ಸ್ಪೆಕ್ಟರ್ ಅವರಿಗೆ ಹೊರೆಯಾಗುತ್ತಿದ್ದು ತನಿಖೆಯ ವಿಳಂಬಕ್ಕೂ ಕಾರಣವಾಗಿದೆ. ಕಾಯ್ದೆ ತಿದ್ದುಪಡಿ ಮಾಡಿ ಸಬ್ ಇನ್‌ಸ್ಪೆಕ್ಟರ್‌ಗೂ ತನಿಖಾಧಿಕಾರ ನೀಡಬೇಕು. ಸೈಬರ್ ಪ್ರಕರಣದ ಆರೋಪಿ ಜಾಮೀನಿನ ಮೇಲೆ ಸುಲಭವಾಗಿ ಹೊರಗೆ ಬರಬಹುದು. ಆರೋಪ ಸಾಬೀತಾದರೆ ದಂಡದ ಮೊತ್ತ ಮತ್ತು ಶಿಕ್ಷೆಯ ಅವಧಿ ಸಹ ಕಡಿಮೆಯಿದ್ದು, ಪದೇಪದೇ ಅವನು ಅದೇ ಪ್ರಕರಣದಲ್ಲಿ ಭಾಗಿಯಾಗುತ್ತಾನೆ. ಈ ನಿಟ್ಟಿನಲ್ಲಿ ಕಾನೂನು ತಿದ್ದುಪಡಿ ಅಗತ್ಯವಾಗಿದೆ’ ಎಂದು ಪೊಲೀಸರು ಹೇಳುತ್ತಾರೆ.

ಒಟಿಪಿ ವಂಚನೆ

ಬ್ಯಾಂಕ್‌ನ ಹೆಸರಿನಲ್ಲಿ ಮೊಬೈಲ್‌ಗೆ ಸಂದೇಶ ಕಳುಹಿಸಿ ಅಥವಾ ಬ್ಯಾಂಕ್‌ನ ಪ್ರತಿನಿಧಿಗಳು ಎಂದು ಹೇಳಿ ಜನರಿಗೆ ಕರೆ ಮಾಡುವ ವಂಚಕರು, ಖಾತೆಯ ಕೈವೈಸಿ ನವೀಕರಣ ಆಗಿಲ್ಲ ಎಂದು ಹೆದರಿಸುತ್ತಾರೆ. ಆಧಾರ್ ಹಾಗೂ ಖಾತೆ ವಿವರ ತೆಗೆದುಕೊಂಡು ಮೊಬೈಲ್‌ಗೆ ಬಂದ ಒನ್ ಟೈಂ ಪಾಸ್‌ವರ್ಡ್ (ಒಟಿಪಿ) ಪಡೆದು ವಂಚಿಸುತ್ತಾರೆ. ಮುಗ್ಧರು ಹೆಚ್ಚು ವಂಚನೆಗೆ ಒಳಗಾಗುತ್ತಾರೆ.

ಸೈಬರ್ ವಿಮೆ: ಡಿಜಿಟಲ್ ಜಗತ್ತಿನ ಪ್ರಸ್ತುತ ದಿನಗಳಲ್ಲಿ ಸ್ಟಾರ್ಟ್‌ಅಪ್ ಕಂಪನಿಗಳಿಗೆ ಸೈಬರ್ ಬೆದರಿಕೆ ಮತ್ತು ವಂಚನೆ ಸಾಮಾನ್ಯವಾಗಿದೆ. ಸೈಬರ್ ದಾಳಿಗಳು, ನೆಟ್‌ವರ್ಕ್ ಹಾನಿ, ಡೇಟಾ ಕಳವು, ವ್ಯವಹಾರದ ಅಡಚಣೆಗಳಿಂದ ಉಂಟಾಗುವ ನಷ್ಟಗಳಿಗೆ ‘ಸೈಬರ್ ವಿಮೆ’ ಸೌಲಭ್ಯವಿದೆ. ಇದು ಡಿಜಿಟಲ್ ವ್ಯವಹಾರಕ್ಕೆ ಸುರಕ್ಷತೆಯ ಕವಚವಾಗಿದೆ.

ಸೈಬರ್ ಸೆಕ್ಸ್ ಪ್ರಕರಣ ಹೆಚ್ಚಳ

ರಾಜ್ಯದ ಹಿಂದಿನ ಮುಖ್ಯಮಂತ್ರಿಯ ವಿಶೇಷ ಕರ್ತವ್ಯಾಧಿಕಾರಿಯೊಬ್ಬರು 2022ರಲ್ಲಿ ಮಹಾರಾಷ್ಟ್ರದ ನಾಸಿಕ್‌ಗೆ ತೆರಳಿದ ಸಂದರ್ಭದಲ್ಲಿ ಮೊಬೈಲ್‌ಗೆ ವಿಡಿಯೊ ಕರೆ ಮಾಡಿದ ಯುವತಿಯ ಮಾತಿಗೆ ಮರುಳಾಗಿ, ಬೆತ್ತಲೆಯಾದರು. ಇಡೀ ವಿಡಿಯೊ ಡೌನ್‌ಲೋಡ್ ಮಾಡಿಕೊಂಡ ಯುವತಿ ಮತ್ತು ಇತರರು, ‘ತಕ್ಷಣವೇ ₹1.50 ಲಕ್ಷ ಕೊಡದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ನಿನ್ನದೆಲ್ಲ ಅನಾವರಣ ಆಗಲಿದೆ’ ಎಂದು ಹೆದರಿಸಿದರು. ಕೇಳಿದಷ್ಟು ಹಣ ಕೊಟ್ಟ ಬಳಿಕವೂ ಪದೇ ಪದೇ ಹಣ ಕೊಡುವಂತೆ ಪೀಡಿಸತೊಡಗಿದಾಗ, ಅಧಿಕಾರಿಯು ಪೊಲೀಸರ ಮೊರೆ ಹೋಗಿ, ದೂರು ದಾಖಲಿಸಿದರು.

ಇತ್ತೀಚೆಗೆ ಇಂಥ ಸೈಬರ್ ಸೆಕ್ಸ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ. ವಂಚಿಸುವ ಉದ್ದೇಶದಿಂದ ಕೆಲವರು ಜಾಲತಾಣದಲ್ಲಿ ಪರಿಚಯಸ್ಥರಾಗಿ ಸ್ನೇಹಿತರಾಗುತ್ತಾರೆ. ಆತ್ಮೀಯರಂತೆ ವರ್ತಿಸುವ ಅವರು ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟೆಲಿಗ್ರಾಮ್ ಹಾಗೂ ಕೆಲ ಸಾಮಾಜಿಕ ಮಾಧ್ಯಮಗಳು, ಡೇಟಿಂಗ್ ಆ್ಯಪ್‌ಗಳು, ಡಾರ್ಕ್ ವೆಬ್‌ಸೈಟ್‌ಗಳನ್ನು ಬಳಸಿಕೊಂಡು ವೆಬ್‌ಕ್ಯಾಮ್‌ನಲ್ಲಿ ಲೈಂಗಿಕವಾಗಿ ಪ್ರಚೋದಿಸಿ ಹಣ ಕೀಳುವ ಪ್ರಕರಣಗಳು ಹೆಚ್ಚಾಗಿವೆ.

ದೊಡ್ಡ ಸಂಸ್ಥೆಗಳು ಸಾಮಾನ್ಯವಾಗಿ ಸೈಬರ್ ಬೆದರಿಕೆಗಳನ್ನು ಎದುರಿಸುತ್ತವೆ. ವ್ಯಾಪಕವಾದ ನೆಟ್‌ವರ್ಕ್ ರಕ್ಷಣೆ ಮತ್ತು ಅಪಾಯದ ನಿರ್ವಹಣೆಗೆ ಸೈಬರ್ ವಿಮಾ ಪಾಲಿಸಿ ನೆರವಾಗಲಿದೆ. ಸೈಬರ್ ದಾಳಿಯ ನಂತರ ನಷ್ಟವಾದ ಡೇಟಾಗಳನ್ನು ಮರಳಿ ಪಡೆಯಲು ಅಗತ್ಯವಾದ ವೆಚ್ಚ ಹಾಗೂ ಕಾನೂನು ವೆಚ್ಚಗಳನ್ನು ಅದು ಒಳಗೊಂಡಿರುತ್ತದೆ. ಡಿಜಿಟಲ್ ಹೆಜ್ಜೆಗುರುತು ವಿಸ್ತಾರವಾದಂತೆ ಕಾರ್ಯಾಚರಣೆಗಳು ಹೆಚ್ಚಾಗುತ್ತದೆ. ಆಗ ಸೈಬರ್ ವಿಮೆ ಅಗತ್ಯ ರಕ್ಷಣೆ ನೀಡುತ್ತದೆ.

ಆಧಾರ್ ಕಾರ್ಡ್ ನೋಂದಾಯಿಸುವಾಗ ನೀಡುವ ಬಯೋಮೆಟ್ರಿಕ್(ಬೆರಳಚ್ಚು)ನ್ನೇ ಹ್ಯಾಕ್ ಮಾಡಿ, ಆಧಾರ್ ದತ್ತಾಂಶ ಕದ್ದು ಅರಿವಿಗೆ ಬರದ ಹಾಗೆ ಹಣ ದೋಚುವ ವಂಚಕರ ಜಾಲ ಹೆಚ್ಚು ಸಕ್ರಿಯವಾಗಿದೆ. ಬಯೋಮೆಟ್ರಿಕ್ ಸಹಾಯದಿಂದ ಬ್ಯಾಂಕ್‌ನಲ್ಲಿ ಹಣ ಉಳಿತಾಯ, ಹಣ ತೆಗೆಯುವುದು, ಹಣ ವರ್ಗಾವಣೆ, ಭೀಮ್ ಆಧಾರ್ ಪೇ, ಇ-ಕೆವೈಸಿ, ಸಿಮ್ ಖರೀದಿ ಸೇರಿದಂತೆ ಅನೇಕ ಸೌಲಭ್ಯ ಪಡೆಯಬಹುದಾಗಿದೆ. ವಂಚಕರು ಇದನ್ನೇ ಹ್ಯಾಕ್ ಮಾಡಿ, ಒಟಿಪಿ ಸಹಾಯವಿಲ್ಲದೆ ಖಾತೆಯಲ್ಲಿರುವ ಹಣವನ್ನೆಲ್ಲ ದೋಚುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ. https://myaadhaar.uidai.gov.in ವೆಬ್‌ಸೈಟ್‌ನಲ್ಲಿ ಅಥವಾ ಆಧಾರ ಕೇಂದ್ರಕ್ಕೆ ತೆರಳಿ ಆಧಾರ್ ಕಾರ್ಡ್ ಬಯೋಮೆಟ್ರಿಕ್ ಲಾಕ್ ಮಾಡಿಸುವ ಮೂಲಕ ಇದನ್ನು ತಡೆಯಬಹುದು. ಬೆರಳಚ್ಚು ಕೋರುವ ಯಾವುದೇ ಅಪ್ಲಿಕೇಷನ್‌ಗಳನ್ನು ಮೊಬೈಲ್‌ನಲ್ಲಿ ಬಳಕೆ ಮಾಡದಿರುವುದು ಸೂಕ್ತ ಎಂದು ಸೈಬರ್ ಕ್ರೈಂ ಪೊಲೀಸರು ಹೇಳುತ್ತಾರೆ. ಒಟ್ಟಾರೆ ಸೈಬರ್ ಅಪರಾಧದಿಂದ ತಪ್ಪಿಸಿಕೊಳ್ಳುವ ಜ್ಞಾನ ನಿರಂತರವಾಗಿ ಪಡೆದುಕೊಳ್ಳುತ್ತಿರಬೇಕು.

ಸೈಬರ್ ವಂಚನೆಯ ವಿವಿಧ ಸ್ವರೂಪಗಳು...

ಡೆಬಿಟ್, ಕ್ರೆಡಿಟ್ ಕಾರ್ಡ್ ಸ್ಕಿಮ್ಮಿಂಗ್

ಎಟಿಎಂ, ಕ್ರೆಡಿಟ್ ಕಾರ್ಡ್‌ಗಳ ಪಾಸ್‌ವರ್ಡ್ (ಪಿನ್) ಅಕ್ರಮವಾಗಿ ಸಂಗ್ರಹಿಸಿ, ಆಯಾ ಕಾರ್ಡ್‌ದಾರರ ಖಾತೆಯಲ್ಲಿನ ಹಣವನ್ನು ಕದಿಯಲು ಕೆಲವರು ಪ್ರಯತ್ನಿಸುತ್ತಾರೆ. ಅದಕ್ಕಾಗಿ ವಂಚಕರು ಎಟಿಎಂ ಘಟಕಗಳ ಯಂತ್ರಗಳ ‘ಕೀ ಪ್ಯಾಡ್’ ಸ್ಪಷ್ಟವಾಗಿ ಕಾಣುವಂತೆ ರಹಸ್ಯ ಕ್ಯಾಮೆರಾ ಅಳವಡಿಸುತ್ತಾರೆ. ನಂತರ ನಕಲಿ ಕಾರ್ಡ್ ಸಿದ್ಧಪಡಿಸಿಕೊಂಡು, ಪಿನ್ ಬಳಸಿ, ಖಾತೆಯಲ್ಲಿನ ಹಣ ಕದಿಯುತ್ತಾರೆ.

ಆನ್‌ಲೈನ್ ಮಾರಾಟ, ಖರೀದಿ

ಬಳಸಿದ ವಸ್ತುಗಳ ಮಾರಾಟಕ್ಕೆ ಅವಕಾಶ ಕಲ್ಪಿಸುವ ಜಾಲತಾಣಗಳನ್ನು ದುರ್ಬಳಕೆ ಮಾಡಿಕೊಳ್ಳುವ ವಂಚಕರು, ಕಾರು, ಮನೆ ಸೇರಿದಂತೆ ವಿವಿಧ ವಸ್ತುಗಳು ಮಾರಾಟಕ್ಕೆ ಇವೆ ಎನ್ನುತ್ತಾರೆ. ಆದರೆ, ಅವೆಲ್ಲವೂ ಸುಳ್ಳಿನಿಂದ ಕೂಡಿರುತ್ತದೆ. ವಸ್ತುಗಳ ಚಿತ್ರ ತೋರಿಸಿ, ಖರೀದಿದಾರರಿಂದ ಹಣ ಪಡೆಯುತ್ತಾರೆ. ಆದರೆ, ವಸ್ತುಗಳು ಖರೀದಿದಾರರಿಗೆ ಸಿಗುವುದಿಲ್ಲ.

ನಿರುದ್ಯೋಗಿಗಳಿಗೂ ಸುಲಿಗೆ

ನಿರುದ್ಯೋಗಿಗಳ ಅಸಹಾಯಕತೆ ಮತ್ತು ಸಂಕಷ್ಟ ದುರುಪಯೋಗ ಮಾಡಿಕೊಳ್ಳುವ ವಂಚಕರು ತಮ್ಮ ಮೊಬೈಲ್ ನಂಬರ್‌ಗಳನ್ನು ನೀಡಿ, ಉದ್ಯೋಗ ಲಭ್ಯವಿದೆ ಎಂದು ಆಶಾಭಾವ ಮೂಡಿಸುತ್ತಾರೆ. ಲಂಚ ಇಲ್ಲವೇ ಶುಲ್ಕದ ರೂಪದಲ್ಲಿ ಹಣ ಪಡೆಯುತ್ತಾರೆ. ಶೈಕ್ಷಣಿಕ ಮತ್ತು ಇನ್ನಿತರ ದಾಖಲೆಪತ್ರಗಳನ್ನೂ ಪಡೆಯುತ್ತಾರೆ. ಆದರೆ, ವಂಚನೆಗೆ ಒಳಗಾಗಿದ್ದು ತಡವಾಗಿ ಗೊತ್ತಾಗುತ್ತದೆ.

ಉಡುಗೊರೆ ಆಮಿಷ, ಲಿಂಕ್‌ನಿಂದ ಮೋಸ

ಬಹುಮಾನ ಗೆಲ್ಲಬಹುದು, ಉಡುಗೊರೆ ನಿಶ್ಚಿತ ಎಂದೆಲ್ಲ ಆಮಿಷವೊಡ್ಡಿ ಬೇರೆ ಬೇರೆ ಹೆಸರಿನಲ್ಲಿ ಮೊಬೈಲ್‌ಗೆ ಲಿಂಕ್ (ಎಂಬೇಡೆಡ್) ಸಂದೇಶ ಕಳುಹಿಸುತ್ತಾರೆ. ಇದನ್ನು ಕ್ಲಿಕ್ ಮಾಡಿ ವೈಯಕ್ತಿಕ ಮಾಹಿತಿ ದಾಖಲಿಸಿದರೆ, ಖಾತೆಯಲ್ಲಿರುವ ಹಣವನ್ನು ವಂಚಕರು ವರ್ಗಾಯಿಸಿಕೊಳ್ಳುತ್ತಾರೆ. ಇದು ವಂಚನೆಯ ಜಾಲ ಎಂಬ ಸುಳಿವು ಸಿಗದಂತೆ ವ್ಯವಸ್ಥಿತವಾಗಿ ಮಾಡಲಾಗುತ್ತದೆ.

ಹೂಡಿಕೆ, ಟ್ರೇಡಿಂಗ್ ಆ್ಯಪ್

ವಿವಿಧ ಬ್ಯಾಂಕ್‌ಗಳಲ್ಲಿನ ಹಣದ ವ್ಯವಹಾರ, ಶ್ರೀಮಂತರ ಖಾತೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ವಂಚಕರು, ಷೇರು ಮಾರುಕಟ್ಟೆ ಸೇರಿದಂತೆ ವಿವಿಧ ವಲಯಗಳಲ್ಲಿ ಹಣ ಹೂಡುವಂತೆ ಪ್ರಚೋದಿಸುತ್ತಾರೆ. ಎಲ್ಲವೂ ಪಾರದರ್ಶಕವಾಗಿದೆ ಎಂಬಂತೆ ನಂಬಿಸುತ್ತಾರೆ. ಹಣ ಹೂಡಿದ ಸ್ವಲ್ಪ ಹೊತ್ತಿನಲ್ಲೇ ಅಥವಾ ದಿನಗಳಲ್ಲೇ ವಂಚಕರು ದುಡ್ಡು ಸಹಿತ ಪರಾರಿ ಆಗುತ್ತಾರೆ.

ವಿವಾಹಾಕಾಂಕ್ಷಿಗಳ ಹಣವೂ ನಾಪತ್ತೆ

ಮದುವೆಗೆಂದೇ ಇರುವ ವಿವಾಹಾಕಾಂಕ್ಷಿಗಳ ಜಾಲತಾಣದಲ್ಲೂ ವಂಚಕರು ಬೇರೆ ಬೇರೆ ಸ್ವರೂಪದಲ್ಲಿ ವಂಚಿಸುತ್ತಾರೆ. ನಕಲಿ ಖಾತೆ ತೆರೆದು, ಮದುವೆ ಸೋಗಿನಲ್ಲಿ ಸ್ನೇಹ ಬೆಳೆಸುತ್ತಾರೆ. ಸುತ್ತಾಟ, ಭೇಟಿ ಎಂದೆಲ್ಲಾ ಹೇಳಿಕೊಂಡು ಮದುವೆಯಾಗುವುದಾಗಿ ನಂಬಿಸುತ್ತಾರೆ. ಹಣ ಪಡೆದು, ಸಂಕಷ್ಟ ಹೇಳಿಕೊಂಡು ಮತ್ತೆ ಸಿಗದಂತೆ ಪರಾರಿಯಾಗುತ್ತಾರೆ. ಅವರ ಪತ್ತೆ ಕಷ್ಟವಾಗುತ್ತದೆ.

ಪೂರಕ ಮಾಹಿತಿ: ಸಂತೋಷ ಜಿಗಳಿಕೊಪ್ಪ, ಮಲ್ಲಿಕಾರ್ಜುನ ನಾಲವಾರ, ಬಸವರಾಜ ಡಿ.ಕೆ, ಆರ್. ಜಿತೇಂದ್ರ, ಡಿ.ಎಂ. ಕುರ್ಕೆ ಪ್ರಶಾಂತ್, ಪ್ರವೀಣ ಪಾಡಿಗಾರ

(ಅಂಕಿ ಅಂಶ – ಆಧಾರ:ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೊ)

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 29-10-1998

• ಶಿರಾದಲ್ಲಿ ಕರ್ಫ್ಯೂ, ಗೋಲಿಬಾರ್, 8 ಬಲಿ

ಶಿರಾ, ಅ 28– ತುಮಕೂರಿನಿಂದ 50 ಕಿ.ಮೀ ದೂರದ ಶಿರಾದಲ್ಲಿ ಇಂದು ಭುಗಿಲೆದ್ದ ಹಿಂಸಾಚಾರದಲ್ಲಿ ಇಬ್ಬರು ಪೊಲೀಸರು, ಆರು ರೈತರು ಸೇರಿದಂತೆ ಒಟ್ಟು ಎಂಟು ಜನರು ಸತ್ತಿದ್ದು ಇದರ ಪರಿಣಾಮವಾಗಿ ಶಿರಾ ಪಟ್ಟಣ ಹಾಗೂ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಮೇಲಿನ ಹಲವಾರು ಹಳ್ಳಿಗಳು ಅಕ್ಷರಶಃ ಹೊತ್ತಿ ಉರಿಯುತ್ತಿವೆ. ಶಿರಾ ಎಪಿಎಂಸಿಯಲ್ಲಿ ಎರಡು ದಿನದಿಂದ ಉದ್ಭವಿಸಿದ ‘ಶೆಂಗಾ ಹಗರಣ’ದ ಫಲಶೃತಿ ಇದಾಗಿದ್ದು, ಪರಿಸ್ಥಿತಿ ತಹಬದಿಗೆ ತರಲು ಕರ್ಫ್ಯೂ ಘೋಷಿಸಿ ದುಷ್ಕರ್ಮಿಗಳನ್ನು ಕಂಡಲ್ಲಿ ಗುಂಡಿಕ್ಕುವ ಆದೇಶ ಹೊರಡಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಸೋಮವಾರ, 29-10-1973

• ಹಿಂದುಳಿದವರ ಏಳಿಗೆ ಆಗದಿದ್ದರೆ ಅರಾಜಕತೆ

ಬೆಂಗಳೂರು,28– ದೇಶ ಸಾಧಿಸುತ್ತಿರುವ ಆರ್ಥಿಕ ಅಭಿವೃದ್ಧಿಯು ಪರಿಶಿಷ್ಟ ಜನಾಂಗ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಜೀವನಮಟ್ಟವನ್ನು ಏರಿಸದೇ ಹೋದರೆ, ಅದು ರಾಷ್ಟ್ರದಲ್ಲಿ ಅರಾಜಕತೆಯ ಆರಂಭಕ್ಕೆ ಸ್ಪಷ್ಟ ದಾರಿಯಾದೀತು ಎಂದು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಅವರು ಇಂದು ಇಲ್ಲಿ ಎಚ್ಚರಿಕೆ ನೀಡಿದರು. ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ದಕ್ಷಿಣ ಭಾರತದ ಹಿಂದುಳಿದ ವರ್ಗದ ಮತ್ತು ಪರಿಶಿಷ್ಟ ಜನಾಂಗದ ಎರಡು ದಿನಗಳ ಸಮ್ಮೇಳನವನ್ನು ಬೆಳಿಗ್ಗೆ ಉದ್ಘಾಟಿಸಿ ಅವರು ಮಾತನಾಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಅಕ್ಟೋಬರ್ 29, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಪ್ರತಿಪದ್ ಗಂ. 23-54 **ನಕ್ಷತ್ರ:** ಭರಣಿ ಗಂ. 28-42 **ಯೋಗ:** ಸಿದ್ಧಿ (ಆಸ್ರಿಕ್) ಗಂ 20-01 **ಕರಣ:** ಬಾಲವ ಗಂ. 12-50, ತುಲಾ ಮಾಸದ 12 ನೇ ದಿನ,
ಮಳೆನಕ್ಷತ್ರ: ಸ್ವಾತಿ 2.
ರಾಹುಕಾಲ: ಸಾಯಂಕಾಲ 04-30 - 06-00
ಸೂರ್ಯೋದಯ: 06-27 **ಸೂರ್ಯಾಸ್ತ:** 06-01
ಮುಸ್ಲಿಂ ದಿನಾಂಕ : 13 ರಬಿಯುಸ್ಸಾನಿ ಅದೃಷ್ಟ ಸಂಖ್ಯೆ : 1, 6

ಮೇಷ: ಏಕಾಗ್ರತೆ ಕೊರತೆಯಿಂದ ಬರಲಿರುವ ಅವಕಾಶ ಸದುಪಯೋಗ ಪಡಿಸಿಕೊಳ್ಳುವ ವಿಚಾರದಲ್ಲಿ ವಿಫಲ. ವೈದ್ಯಕೀಯ ವೃತ್ತಿಯವರಿಗೆ ವೃತ್ತಿಪರ ಅನಿವಾರ್ಯ ಎದುರಾಗುವುದು. ವಿವಾಹ ಅಪೇಕ್ಷಿಗಳಿಗೆ ಸುದಿನ.

ವೃಷಭ: ಈ ದಿನ ಸಣ್ಣಪುಟ್ಟ ಅಡಚಣೆಗಳು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ. ದುಂದುವೆಚ್ಚದಿಂದ ದಿನಾಂತ್ಯದಲ್ಲಿ ಹಣದ ಅಭಾವ ಕಾಡುತ್ತದೆ. ಇತರರ ಭಾವನೆಗಳಿಗೆ ಆದ್ಯತೆಯನ್ನು ಕೊಡುಲು ಕಲಿಯಬೇಕಾಗುತ್ತದೆ.

ಮಿಥುನ: ಗೌರವಕ್ಕೆ ಚ್ಯುತಿ ಬರುವಂತಹ ಅನಿವಾರ್ಯ ಸಂದರ್ಭಕ್ಕೆ ಸರಿಯಾಗಿ ಒದಗುವ ಧನಾರ್ಜನೆ ಆಶ್ಚರ್ಯವೆನಿಸುವುದು. ಪತ್ರ ವ್ಯವಹಾರದಲ್ಲಿ ಎಚ್ಚರಿಕೆ ವಹಿಸಿದಲ್ಲಿ ಕಾರ್ಯ ಸಫಲ. ಮಾತಿನಲ್ಲಿ ಸಹನೆ, ಎಚ್ಚರವಿರಲಿ.

ಕರ್ಕಾಟಕ: ಪ್ರಾಮಾಣಿಕತನ, ನೇರ ವ್ಯಕ್ತಿತ್ವದಿಂದಾಗಿ ಒಳ್ಳೆಯ ಸ್ಥಾನಮಾನ ಅಯಾಚಿತವಾಗಿ ಸಿಗಲಿದೆ. ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆ ನಿಮ್ಮ ಆರೋಗ್ಯದ ಮೇಲೆ ಅತ್ಯಂತ ಪ್ರಭಾವ ಬೀರಲಿದೆ.

ಸಿಂಹ: ನಿಮ್ಮ ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಲ್ಲಿ ಯಶಸ್ವಿಯಾಗುವಿರಿ. ಮನರಂಜನೆಗೂ ಸಾಕಷ್ಟು ಸಮಯ ಮೀಸಲಿಟ್ಟು ಸಂತಸ ತರುವುದು. ಸಾಂಸಾರಿಕ ಸಂತೋಷ ಹೆಚ್ಚಾಗುತ್ತದೆ.

ಕನ್ಯಾ: ನಿಮ್ಮ ನಯವಾದ ಮಾತುಗಳು ಎದುರಿನ ವ್ಯಕ್ತಿಯ ಮನ ಗೆಲ್ಲುವ ಮೂಲಕ ನಿಮ್ಮ ಕಾರ್ಯ ಸಾಧನೆ. ಆಹಾರ ಪದ್ಧತಿಯಲ್ಲಿ ಸರಿಯಾದ ಕ್ರಮ-ನಿಯಮ ಪಾಲಿಸುವುದರಿಂದ ಆರೋಗ್ಯ ವೃದ್ಧಿ.

ತುಲಾ: ಟ್ರಾವೆಲ್ ಏಜೆನ್ಸಿಯವರಿಗೆ ಆರ್ಥಿಕ ಮುನ್ನಡೆ, ಹೆಚ್ಚಿನ ಅವಕಾಶ ಕಾಣುವಿರಿ. ಸದ್ಯಕ್ಕೆ ವೃತ್ತಿಯ ಬದಲಾವಣೆಯ ಯೋಚನೆ ಸರಿಯಲ್ಲ. ನಿರ್ದಿಷ್ಟವಾದ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು.

ವೃಶ್ಚಿಕ: ಯಾರಲ್ಲಿಯೂ ಶತ್ರುತ್ವ ವೃದ್ಧಿಸಿಕೊಳ್ಳುವಂತಹ ಘಟನೆಗಳಿಗೆ ಆಸ್ಪದ ನೀಡದಿರಿ. ನಿಮ್ಮ ಮೇಲಧಿಕಾರಿಗಳಿಂದ ಮುಚ್ಚಿಟ್ಟ ವಿಷಯವನ್ನು ನೀವಾಗಿಯೇ ಪ್ರಸ್ತಾಪಿಸಿ. ಪ್ರಯಾಣದಲ್ಲಿ ಎಚ್ಚರಿಕೆಯಿಂದ ಇರುವುದು ಲೇಸು.

ಧನು: ಹಿರಿಯರನ್ನು ತೀರ್ಥಯಾತ್ರೆಗೆ ಕಳುಹಿಸುವ ಬಗ್ಗೆ ಸರಿಯಾದ ತೀರ್ಮಾನ ತೆಗೆದುಕೊಳ್ಳಿ. ನಿಮ್ಮ ಜೀವನದಲ್ಲಿ ಅತಿಯಾಗಿ ನಂಬುವ ವ್ಯಕ್ತಿ ಜೊತೆ ಸಮಯ ಕಳೆಯುವಿರಿ. ಬೆನ್ನು ನೋವು, ವೈದ್ಯರ ಭೇಟಿ.

ಮಕರ: ತುಂಬಾ ದಿನಗಳಿಂದ ಬರಬೇಕಿದ್ದ ಹಣ ಇಂದು ನಿಮ್ಮ ಕೈ ಸೇರಲಿದೆ. ಆತ್ಮೀಯರೊಂದಿಗೆ ನಿಮ್ಮ ಮನಸ್ಸಿನ ಭಾವನೆ ಹಂಚಿಕೊಳ್ಳುವಿರಿ. ಉರಿಯುತ್ತಿರುವಂತಹಾ ಬೆಂಕಿಗೆ ಶತ್ರುಗಳು ತುಪ್ಪ ಸುರಿಯಬಹುದು.

ಕುಂಭ: ಮನೆಯಲ್ಲಿನ ಆಗು–ಹೋಗು ಬಗೆಗೆ ಹೆಚ್ಚು ಗಮನ ನೀಡಬೇಕಾಗುವುದು. ಎಣ್ಣೆ ಮತ್ತು ಬೇಳೆಕಾಳು ವ್ಯಾಪಾರದಲ್ಲಿ ಉತ್ತಮ ಮಾರಾಟ. ಕಲಾವಿದರ ಆಸಕ್ತಿಯಿಂದ ಹೆಚ್ಚು ಅವಕಾಶಗಳು ಲಭ್ಯವಾಗಲಿದೆ.


ಮೀನ: ಅಜಾಗರುಕತೆಯಿಂದ ಹಣ ಕಳೆದುಕೊಳ್ಳುವಂತಾಗಬಹುದು ಎಚ್ಚರವಿರಲಿ. ಧಾರ್ಮಿಕ ಕಾರ್ಯದಲ್ಲಿ ಆಸಕ್ತಿ ವೃದ್ಧಿಯಾಗುವುದು. ಮಕ್ಕಳೊಂದಿಗೆ ಸುಖ ಭೋಜನ ನಡೆಯುವುದು. ಹಿರಿಯರ ಆರೋಗ್ಯದಲ್ಲಿ ಚೇತರಿಕೆ.

ಪದಬಂಧ 5484

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸ್ವರ್ಗ ಇಲ್ಲಿಯೇ ಕಾಣುತ್ತಿದೆ (4)
3.ಬುದ್ಧಿ ಇಟ್ಟುಕೊಂಡು ಮಾಡಿದ ಕ್ಷೌರ (4)
5.ಒನಪು ತೋರಿದಾಗ ಬಂದಿರುವ ಸ್ಮರಣೆ (3)
6.ಆಕ್ಷೇಪವಿಲ್ಲದೆ ಒಯ್ದ ಗುಪ್ತ ನಿಧಿ (3)
8.ಕುಲದಲ್ಲಿ ಎಲ್ಲರೂ ಕ್ಷೇಮ! (3)
9.ಹಿತವಲ್ಲದ್ದು ಇದು (3)
10.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
12.ವನದಲ್ಲಿ ತ್ಯಜಿಸುವಿಕೆ (3)
14.ಕರುಣೆಯೇ ಇಲ್ಲದ ಕ್ರೂರ (4)
15.ಚಾರನದ್ದು ಕೆಟ್ಟ ನಡುವಳಿಕೆ (4)

ಮೇಲಿಂದ ಕೆಳಕ್ಕೆ
1.ಹಾಲು ಕರೆಯುವ ಹಸು (4)
2.ಮದಿಸಿದ ಗಜ (3)
3.ಚರಪು ತಿನ್ನಲು ತೋರಿದ ಉತ್ಸಾಹ! (3)
4.ದೊಡ್ಡ ಗಾತ್ರದ ಜಲಚರ (4)
7.ಹಬ್ಬವಿದ್ದಾಗ ನೋಡಿರುವ ಬೆಟ್ಟ (3)
8.ಅಷ್ಟದಿಕ್ಪಾಲಕರಲ್ಲಿ ಈತನೇ ಶ್ರೀಮಂತ (3)
9.ಸ್ಮರಣ ಶಕ್ತಿ ಚನ್ನಾಗಿರುವವನು (4)
11.ಕರದಲ್ಲಿರುವ ದೇಹ (4)
12.ನೀರಿನ ಅಧಿದೇವತೆ (3)
13.ಆಭರಣದೊಡನಿರುವ ಕೈಯಲ್ಲಿನ ಹಣ (3)



5483ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ವಿಶ್ವತೋಮುಖ 5.ಅಕ್ಷರ 6.ರಸನ 8.ತತಿ 11.ಜೋಗುಳ 12.ಕರ 14.ವಕ್ತಾರ 17.ಚರಕ 18.ಪುನರುತ್ಥಾನ
ಮೇಲಿಂದ ಕೆಳಕ್ಕೆ: 1.ಅವಿರತ 2.ಸಂತೋಷ 3.ಪ್ರಖರ 5.ಅವಿನಾಭಾವ 7.ನರಭಕ್ಷಕ 9.ತಿಜೋರಿ 10.ಪುಳಕ 13.ರಚನವ 15.ರಪುನೂ 16.ಹುರುಪ

ಸುಡೊಕು 5870

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5869 ಸುಡೊಕು

3		1		7		6		2
		5	2		9		8	1
2				1			9	
	5		7			8		
				8		5		9
8		6		9				
6				5		9		7
		8					5	
5		3		6		1		8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನೆರೆಯ ರಾಜ್ಯದಲ್ಲಿ 'ಗ್ಯಾರಂಟಿ' ಜಾರಿಗೊಳಿಸಿರುವುದನ್ನು ಮತದಾರರ ಮುಂದಿಡಲು ಕಾಂಗ್ರೆಸ್ ಪ್ರಯತ್ನ

ತೆಲಂಗಾಣ ಗೆಲ್ಲಲು ಕರ್ನಾಟಕ ತಂತ್ರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಐದು ಗ್ಯಾರಂಟಿಗಳ ಮೂಲಕ ಗೆಲುವು ಸಾಧಿಸಿ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಮುಖಭಂಗ ಮಾಡಿದ ಕಾಂಗ್ರೆಸ್, ಈಗ ಅದೇ ತಂತ್ರವನ್ನು ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲೂ ಪ್ರಯೋಗಿಸುತ್ತಿದೆ. ತೆಲಂಗಾಣಕ್ಕೆ 'ಆರು ಗ್ಯಾರಂಟಿ'ಗಳನ್ನು ಘೋಷಿಸಿರುವ ಕಾಂಗ್ರೆಸ್, ಕರ್ನಾಟಕದಲ್ಲಿ ನೀಡಿದ್ದ ಭರವಸೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿರುವುದನ್ನು ಮತದಾರರ ಮುಂದಿಡಲು ಪ್ರಯತ್ನಿಸುತ್ತಿದೆ.

'ಕರ್ನಾಟಕ ಮಾದರಿ'ಯನ್ನು ಉತ್ತೇಜಿಸುವ ಭಾಗವಾಗಿ ಕಾಂಗ್ರೆಸ್, ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ನೆರೆಯ ರಾಜ್ಯದ ಕೆಲವು ನಾಯಕರೊಂದಿಗೆ ಹಲವಾರು ಸಭೆಗಳು, ರೋಡ್ ಶೋಗಳನ್ನು ಯೋಜಿಸಿದೆ.

ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಚಾರ ನಡೆಸುವ ಸಾಧ್ಯತೆಯಿದೆ. ಡಿ.ಕೆ.ಶಿವಕುಮಾರ್ ಅವರು ಶನಿವಾರ ತಾಂಡೂರಿನಿಂದ ನಡೆಯುತ್ತಿರುವ ಪಕ್ಷದ ಎರಡನೇ ಹಂತದ 'ವಿಜಯ ಭೇರಿ' ಯಾತ್ರೆಯಲ್ಲಿ ಭಾಗವಹಿಸಿದ್ದರು.

ಇದಕ್ಕೆ ಪ್ರತಿಯಾಗಿ ಬಿಆರ್‌ಎಸ್, ಕರ್ನಾಟಕದಲ್ಲಿನ ಕಾಂಗ್ರೆಸ್ ಪಕ್ಷದ ಆಡಳಿತ ಮಾದರಿಯನ್ನು ಅಷ್ಟೇ ಅಪಖ್ಯಾತಿಗೊಳಿಸುತ್ತಿದೆ. ವಿಶೇಷವಾಗಿ ಕೃಷಿಗೆ ಉಚಿತ ವಿದ್ಯುತ್ ಸರಬರಾಜು ವಿಷಯವು ಬಿಆರ್‌ಎಸ್ ಮತ್ತು ಕಾಂಗ್ರೆಸ್ ನಡುವೆ ಹೊಸ ವಿವಾದ ಹುಟ್ಟುಹಾಕಿದೆ.

'ಕಾಂಗ್ರೆಸ್ ವಿರುದ್ಧ ಪ್ರಚಾರ ಮಾಡಲು ಇತ್ತೀಚೆಗೆ ಪರಗಿಗೆ ಕರ್ನಾಟಕ ರೈತರು ಬಂದಿದ್ದರು. ಕೃಷಿಗೆ ಉಚಿತ ವಿದ್ಯುತ್ ನೀಡುವ ಹೆಸರಿನಲ್ಲಿ ಕಾಂಗ್ರೆಸ್ ವಂಚಿಸುತ್ತಿದೆ ಮತ್ತು ಕರ್ನಾಟಕ ಸರ್ಕಾರ ಐದು ತಾಸುಗಳ ನಿರಂತರ ವಿದ್ಯುತ್ ಸಹ ಪೂರೈಸುತ್ತಿಲ್ಲ ಎಂದು ರೈತರು ಆರೋಪಿಸಿದರು' ಎಂದು ಬಿಆರ್‌ಎಸ್ ಹೇಳಿದೆ.

ಕಾಂಗ್ರೆಸ್ ಪಕ್ಷದ ಪ್ರಚಾರ ತಂಡವು ಕರ್ನಾಟಕದ ರೈತರು ಹೇಳಿರುವುದು ಸುಳ್ಳು ಎಂದು ಸ್ಪಷ್ಟಪಡಿಸಿದೆ.

'ಕರ್ನಾಟಕದ ರೈತರ ಹೆಸರಿನಲ್ಲಿ ಬಿಆರ್‌ಎಸ್ ನಡೆಸಿರುವ ಪಿತೂರಿ ಬಯಲಾಗಿದೆ. ಕಾಂಗ್ರೆಸ್ ಸರ್ಕಾರದ ವಿರುದ್ಧ ಪರಗಿಯಲ್ಲಿ ಪ್ರತಿಭಟನೆಗೆ ಬಂದ ಕರ್ನಾಟಕದ ರೈತರು, ತಮಗೆ ತಲಾ ₹ 300 ರೂಪಾಯಿ ಕೊಟ್ಟು ಕರೆತಂದಿದ್ದಾರೆ ಎಂದಿದ್ದಾರೆ. ಕರ್ನಾಟಕ ಸರ್ಕಾರವು ವಿದ್ಯುತ್, ಉಚಿತ ಬಸ್ ಸೇವೆ ಮತ್ತು ಇತರ ಕಲ್ಯಾಣ ಯೋಜನೆಗಳನ್ನು ಒದಗಿಸುತ್ತಿರುವುದಾಗಿ ಅವರು ಹೇಳಿದ್ದಾರೆ' ಎಂದು ಕಾಂಗ್ರೆಸ್ ಪ್ರಚಾರ ತಂಡದ ಸದಸ್ಯರೊಬ್ಬರು ಕರ್ನಾಟಕದ ರೈತರ ವಿಡಿಯೊಗಳನ್ನು ಪ್ರದರ್ಶಿಸಿದರು.

ವಾಸ್ತವ ಸ್ಥಿತಿ ಅರಿಯಲು ತಮ್ಮ ಜತೆ ಪ್ರವಾಸಕ್ಕೆ ಬರಬೇಕು ಎಂದು ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ, ಕೈಗಾರಿಕಾ ಸಚಿವ ಕೆ.ಟಿ. ರಾಮರಾವ್ ಅವರು ತೆಲಂಗಾಣ ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಿದ್ದಾರೆ.

'ನಿಮಗೆ ಕರ್ನಾಟಕದ ವಿದ್ಯುತ್ ಬೇಕೋ ಅಥವಾ ತೆಲಂಗಾಣದ ವಿದ್ಯುತ್ ಬೇಕೋ? ಕರ್ನಾಟಕಕ್ಕೆ ತೆರಳಿ, ವಿದ್ಯುತ್ ಹೇಗೆ ಸರಬರಾಜು ಮಾಡಲಾಗುತ್ತಿದೆ ಎಂದು ಅಲ್ಲಿನ ರೈತರನ್ನು ಕೇಳೋಣ' ಎಂದರು.



ತೆಲಂಗಾಣದ ತಾಂಡೂರಿನಲ್ಲಿ ಶನಿವಾರ ನಡೆದ ವಿಜಯಭೇರಿ ಯಾತ್ರೆಯಲ್ಲಿ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ತೆಲಂಗಾಣ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಮತ್ತಿತರರು ಪಾಲ್ಗೊಂಡರು.

'ಕೈ' ಅಧಿಕಾರಕ್ಕೆ: ಡಿಕೆಶಿ ವಿಶ್ವಾಸ

ಹೈದರಾಬಾದ್ (ಪಿಟಿಐ); ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಲಿದೆ ಮತ್ತು ಚುನಾವಣಾ ಭರವಸೆಗಳನ್ನು ಕಾರ್ಯಗತಗೊಳಿಸುತ್ತದೆ ಎಂದು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ತೆಲಂಗಾಣದ ತಾಂಡೂರಿನಲ್ಲಿ ಶನಿವಾರ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ತೆಲಂಗಾಣದಲ್ಲಿ ಪಕ್ಷ ಘೋಷಿಸಿರುವ ಆರು ಗ್ಯಾರಂಟಿಗಳು ಕರ್ನಾಟಕದ 5 ಭರವಸೆಗಳಿಗಿಂತ ಉತ್ತಮವಾಗಿವೆ ಎಂದರು.

ಕರ್ನಾಟಕದಲ್ಲಿ ಕಾಂಗ್ರೆಸ್ ನೀಡಿದ ಭರವಸೆಗಳನ್ನು ಜಾರಿಗೆ ತರುತ್ತಿಲ್ಲ ಎಂಬ ಬಿಆರ್‌ಎಸ್ ಆರೋಪಗಳನ್ನು ತಳ್ಳಿಹಾಕಿದ ಅವರು, 'ಸಿಎಂ ಕೆಸಿಆರ್ ಮತ್ತು ಅವರ ಪುತ್ರ ಕೆ.ಟಿ.ರಾಮರಾವ್ ಅವರು ಕರ್ನಾಟಕಕ್ಕೆ ಭೇಟಿ ನೀಡಲಿ. ಅವರಿಗೆ ನಾನೇ ಬಸ್ ವ್ಯವಸ್ಥೆ ಮಾಡುತ್ತೇನೆ. ನೀವೆಲ್ಲರೂ ಅವರೊಂದಿಗೆ ಬನ್ನಿ. ಭರವಸೆಗಳನ್ನು ಈಡೇರಿಸಿದ್ದು ಗೊತ್ತಾಗುತ್ತದೆ' ಎಂದರು.

ಹಿಂದುಳಿದ ವರ್ಗಕ್ಕೆ ಸಿ.ಎಂ ಸ್ಥಾನ: ಬಿಜೆಪಿ ವಿರುದ್ಧ ವಾಗ್ದಾಳಿ

ಹೈದರಾಬಾದ್ (ಪಿಟಿಐ): ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗದ (ಬಿಸಿ) ನಾಯಕನನ್ನು ತೆಲಂಗಾಣದ ಮುಖ್ಯಮಂತ್ರಿಯನ್ನಾಗಿ ಮಾಡುವ ಘೋಷಣೆ ಬಗ್ಗೆ ಬಿಆರ್‌ಎಸ್ ಹಾಗೂ ಎಐಎಂಐಎಂ ಶನಿವಾರ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದೆ.

ಪತ್ರಕರ್ತರ ಸಂವಾದ ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದ ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ ಕೆ.ಟಿ.ರಾಮರಾವ್, ಒಬಿಸಿ ಕಲ್ಯಾಣ ಸಚಿವಾಲಯ ಸ್ಥಾಪಿಸುವ ಬೇಡಿಕೆಗೆ ಕೇಂದ್ರವು ಇನ್ನೂ ಒಪ್ಪಿಕೊಂಡಿಲ್ಲ. ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗಿನಿಂದಲೂ ಒಬಿಸಿಗಳಿಗೆ ಸಚಿವಾಲಯ ಸ್ಥಾಪಿಸುವ ಬೇಡಿಕೆ ಇದೆ. ಈ ನಿಟ್ಟಿನಲ್ಲಿ ತೆಲಂಗಾಣ ವಿಧಾನಸಭೆ ನಿರ್ಣಯವನ್ನು ಅಂಗೀಕರಿಸಿದೆ ಎಂದರು.

ಹಿಂದುಳಿದ ವರ್ಗಗಳ ಗಣತಿಯನ್ನು ಕೇಂದ್ರವು ನಡೆಸಿಲ್ಲ ಎಂದು ಆರೋಪಿಸಿದ ರಾಮರಾವ್ ನರೇಂದ್ರ ಮೋದಿ ಅವರು ಒಬಿಸಿಗೆ ಸೇರಿದವರು. ಕಳೆದ ಒಂಬತ್ತೂವರೆ ವರ್ಷಗಳಲ್ಲಿ ದೇಶದಲ್ಲಿ ಹಿಂದುಳಿದ ವರ್ಗಗಳ ಸ್ಥಿತಿ ಬದಲಾಗಿದೆಯೇ? ಪ್ರಜಾಪ್ರಭುತ್ವದಲ್ಲಿ, ಒಬ್ಬ ವ್ಯಕ್ತಿ ಮುಖ್ಯಮಂತ್ರಿ ಅಥವಾ ಪ್ರಧಾನಿಯಾದರೆ ಇಡೀ ಸಮುದಾಯಕ್ಕೆ ಪ್ರಯೋಜನವಾಗುತ್ತದೆ ಎಂದು ಭಾವಿಸುವುದು ಸರಿಯಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಹಿಂದುಳಿದ ವರ್ಗಗಳ ಬಗ್ಗೆ ಬಿಜೆಪಿಗೆ ಕಾಳಜಿ ಇದ್ದರೆ ಆ ಸಮುದಾಯದ ಗಣತಿ ಏಕೆ ನಡೆಸುವುದಿಲ್ಲ ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಪ್ರಶ್ನಿಸಿದ್ದಾರೆ.

ಶುಕ್ರವಾರ ರಾತ್ರಿ ಜಹೀರಾಬಾದ್‌ನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಓವೈಸಿ, ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಜನತೆ ತಿರಸ್ಕರಿಸುತ್ತಾರೆ. ಮಹಿಳಾ ಮೀಸಲಾತಿ ಮಸೂದೆಯಲ್ಲಿ ಒಬಿಸಿ ಮತ್ತು ಮುಸ್ಲಿಂ ಮಹಿಳೆಯರಿಗೆ ಒಳ ಮೀಸಲಾತಿ ನೀಡಬೇಕೆಂಬ ತಮ್ಮ ಬೇಡಿಕೆಯನ್ನು ಮೋದಿ ಅಥವಾ ರಾಹುಲ್ ಗಾಂಧಿ ಬೆಂಬಲಿಸಲಿಲ್ಲ ಎಂದು ಅವರು ಹೇಳಿದ್ದಾರೆ.

ಚುನಾವಣಾ ಕಣದಲ್ಲಿ...

₹200 ಕೋಟಿ ಮೌಲ್ಯದ ವಸ್ತು ವಶ

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ನೀತಿ ಸಂಹಿತೆ ಜಾರಿಯಾದಾಗಿನಿಂದ ಮತದಾರರಿಗೆ ಆಮಿಷ ಒಡ್ಡುವ ಸಲುವಾಗಿ ಸಂಗ್ರಹಿಸಿದ್ದ ನಗದು ಸೇರಿದಂತೆ ₹ 200 ಕೋಟಿ ಮೌಲ್ಯದ ವಿವಿಧ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪ್ರಚಾರದ ವೇಳೆ ಮತದಾರರು ಅಭ್ಯರ್ಥಿಗಳಿಂದ ಪ್ರಭಾವಿತರಾಗದಂತೆ ನಿಗಾವಹಿಸುವ ಸಲುವಾಗಿ ಐಜಿಪಿ ವಿಕಾಸ್ ಕುಮಾರ್ ಅವರು 12 ಅಧಿಕಾರಿಗಳ ತಂಡವನ್ನು ರಚಿಸಿದ್ದಾರೆ.

₹25 ಕೋಟಿ ನಗದು, ₹20 ಕೋಟಿ ಮೌಲ್ಯದ ಮದ್ಯ, ₹20 ಕೋಟಿ ಮೌಲ್ಯದ ಆಭರಣ ಮತ್ತು ಚಿನ್ನ ಸೇರಿದಂತೆ ₹214 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಐಪಿಎಸ್ ಅಧಿಕಾರಿ ಕುಮಾರ್ ಹೇಳಿದ್ದಾರೆ.

ಇದಲ್ಲದೆ, ವಿವಿಧ ಜಿಲ್ಲೆಗಳಲ್ಲಿ ₹60 ಕೋಟಿ ಮೌಲ್ಯದ ಮಾದಕವಸ್ತು, ಪೆಟ್ರೋಲ್, ಡೀಸೆಲ್ ಮತ್ತು ಮತದಾರರ ಮೇಲೆ ಪ್ರಭಾವ ಬೀರಲು ಅಕ್ರಮವಾಗಿ ಸಂಗ್ರಹಿಸಿದ ರಸಗೊಬ್ಬರವನ್ನು ಸಹ ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಜ್ಯುಬಿಲಿ ಹಿಲ್ಸ್‌ನಿಂದ ಅಜರ್ ಸ್ಪರ್ಧೆ

ನವದೆಹಲಿ (ಪಿಟಿಐ): ತೆಲಂಗಾಣ ವಿಧಾನಸಭೆಗೆ 45 ಅಭ್ಯರ್ಥಿಗಳ ಕಾಂಗ್ರೆಸ್ ಎರಡನೇ ಪಟ್ಟಿ ಬಿಡುಗಡೆ ಮಾಡಿದೆ. ಮಾಜಿ ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್ ಅವರನ್ನು ಜ್ಯುಬಿಲಿ ಕ್ಷೇತ್ರದಿಂದ ಕಣಕ್ಕಿಳಿಸಿದೆ.



ಮೊಹಮ್ಮದ್ ಅಜರುದ್ದೀನ್

110 ಸ್ಥಾನಗಳ ಪೈಕಿ 100ಕ್ಕೆ ಅಭ್ಯರ್ಥಿಗಳ ಹೆಸರು ಘೋಷಣೆ ಮಾಡಿದೆ. 2009ರಲ್ಲಿ ಉತ್ತರ ಪ್ರದೇಶದ ಮೊರದಾಬಾದ್ ಲೋಕಸಭಾ ಕ್ಷೇತ್ರದಿಂದ ಅಜರುದ್ದೀನ್ ಆಯ್ಕೆಯಾಗಿದ್ದರು.

ಮಾಜಿ ಸಂಸದ ಮಧುಗೌಡ ಯಕ್ಷಿ ಅವರನ್ನು ಲಾಲ್‌ಬಹದ್ದೂರ್ ನಗರ ಕ್ಷೇತ್ರ, ಪೊನ್ನಮ್ ಪ್ರಭಾಕರ್ ಅವರನ್ನು ಹುಸಾನ್‌ಬಾದ್, ಕಂಡಿ ಶ್ರೀನಿವಾಸ್ ರೆಡ್ಡಿ ಅವರನ್ನು ಅದಿಲ್‌ಬಾದ್ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ.

ಕಮಲ್ ನಾಥ್-ದಿಗ್ವಿಜಯ್ ಜೋಡಿ ಅಮಿತಾಭ್-ಧರ್ಮೇಂದ್ರಗೆ ಹೋಲಿಕೆ

ಭೋಪಾಲ್ (ಪಿಟಿಐ); ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಮತ್ತು ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಅವರನ್ನು 'ಶೋಲೆ' ಚಿತ್ರದಲ್ಲಿ ಕ್ರಮವಾಗಿ 'ಜೈ' ಮತ್ತು 'ವೀರು' ಪಾತ್ರ ನಿರ್ವಹಿಸಿದ ಅಮಿತಾಭ್ ಬಚ್ಚನ್ ಮತ್ತು ಧರ್ಮೇಂದ್ರ ಅವರಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಹೋಲಿಸಿದ್ದಾರೆ.

ಪ್ರತಿಸ್ಪರ್ಧಿ ಬಿಜೆಪಿ ಈ ಇಬ್ಬರನ್ನು ಜೈಲಿನಿಂದ ತಪ್ಪಿಸಿಕೊಂಡವರು ಮತ್ತು ಮೋಸಗಾರರು ಎಂದಿದೆ.

ಟಿಕೆಟ್ ಹಂಚಿಕೆಯಲ್ಲಿ ಇಬ್ಬರು ನಾಯಕರ ನಡುವಿನ ಭಿನ್ನಾಭಿಪ್ರಾಯ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, 'ಧರ್ಮೇಂದ್ರ ಮತ್ತು ಅಮಿತಾಭ್ ಬಚ್ಚನ್ (ಶೋಲೆ ಚಿತ್ರ) ನಡುವಿನ ಸಂಬಂಧ ಸಿಂಗ್ ಮತ್ತು ನಾಥ್ ನಡುವಿನ ಸಂಬಂಧದಂತೆಯೇ ಇದೆ ಎಂದು ಹೇಳಿದರು.

'ಟಿಕೆಟ್ ಹಂಚಿಕೆಗೆ ಸಂಬಂಧಿಸಿದಂತೆ ಬಿಜೆಪಿಯೊಳಗೆ ಭಾರಿ ಸಂಘರ್ಷ ನಡೆಯುತ್ತಿದೆ. ಟಿಕೆಟ್ ಬದಲಾವಣೆ ಎಲ್ಲಿ ಬೇಕು ಎಂಬ ಬಗ್ಗೆ ತಮ್ಮ ಪಕ್ಷ ನಿರ್ಧಾರ ತೆಗೆದುಕೊಂಡಿದೆ' ಎಂದರು.

ಉಚಿತ ಶಿಕ್ಷಣ: ರಾಹುಲ್ ಭರವಸೆ

ರಾಯಪುರ (ಪಿಟಿಐ); ಛತ್ತೀಸಗಢದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಉಚಿತ ಶಿಕ್ಷಣ ಮತ್ತು 'ತೆಂಡು' ಎಲೆ ಸಂಗ್ರಹಿಸುವವರಿಗೆ ವರ್ಷಕ್ಕೆ ₹4,000 ನೀಡಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಭರವಸೆ ನೀಡಿದ್ದಾರೆ.

ಕಂಕೇರ್ ಜಿಲ್ಲೆಯ ಭಾನುಪ್ರತಾಪ್ಪುರ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಶಿಶುವಿಹಾರ ದಿಂದ ಸ್ನಾತಕೋತ್ತರ ಪದವಿವರೆಗೆ ಸರ್ಕಾರಿ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುವುದು. ಒಂದು ಪೈಸೆಯನ್ನೂ ಪಾವತಿಸ ಬೇಕಾಗಿಲ್ಲ. ಕಳೆದ ವಿಧಾನಸಭಾ ಚುನಾವಣೆ ವೇಳೆ ಪಕ್ಷ ನೀಡಿದ ಪ್ರಮುಖ ಭರವಸೆಗಳನ್ನು ಛತ್ತೀಸಗಢದಲ್ಲಿ ಈಡೇರಿಸಲಾಗಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ತಮ್ಮ ಭಾಷಣಗಳಲ್ಲಿ ಇತರ ಹಿಂದುಳಿದ ವರ್ಗ (ಒಬಿಸಿ)ಗಳ ಬಗ್ಗೆ ಪ್ರಸ್ತಾಪಿಸುತ್ತಾರೆ. ಆದರೆ, ಜಾತಿ ಗಣತಿಗೆ ಏಕೆ ಹೆದರುತ್ತಾರೆ ಎಂದು ಪ್ರಶ್ನಿಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಎರಡು-ಮೂರು ಉದ್ಯಮಿಗಳ ಲಾಭಕ್ಕಾಗಿ ಕೆಲಸ ಮಾಡುತ್ತದೆ. ರೈತರು, ದಲಿತರು, ಕಾರ್ಮಿಕರು ಮತ್ತು ಆದಿವಾಸಿಗಳ ಹಿತದೃಷ್ಟಿಯಿಂದ ಕಾಂಗ್ರೆಸ್ ಕೆಲಸ ಮಾಡುತ್ತದೆ ಎಂದರು.

ಬುಡಕಟ್ಟು ಜನರಿಗೆ 'ಆದಿವಾಸಿ' ಬದಲಿಗೆ 'ವನವಾಸಿ' ಪದ ಬಳಕೆಗೆ ಆಕ್ಷೇಪಿಸಿದ ಅವರು, ಇದು ಆದಿವಾಸಿಗಳಿಗೆ ಬಿಜೆಪಿ ಮಾಡಿದ ಅವಮಾನ ಮತ್ತು ಅವರ ಸಂಸ್ಕೃತಿ, ಇತಿಹಾಸ ಹಾಗೂ ಭಾಷೆಯ ಮೇಲಿನ ದಾಳಿಯಾಗಿದೆ ಎಂದು ಹೇಳಿದರು.



ಸಿಎಂ ನೃತ್ಯ

ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಧುಲ್ಕೋಟ್ ಗ್ರಾಮದಲ್ಲಿ ಬುಡಕಟ್ಟು ಜನರೊಂದಿಗೆ ಶನಿವಾರ ನೃತ್ಯ ಮಾಡಿದರು. ಪಿಟಿಐ ಚಿತ್ರ

ತಿದ್ದುಪಡಿ

2018ರ ಛತ್ತೀಸಗಢ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 68 ಸ್ಥಾನಗಳನ್ನು ಗೆದ್ದಿದ್ದರಿಂದ ರಮಣ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರ ಕಳೆದುಕೊಂಡಿತ್ತು. ಆದರೆ, ಶನಿವಾರದ ಸಂಚಿಕೆಯಲ್ಲಿ ಕಣ್ತಪ್ಪಿನಿಂದ 'ರಮಣ್ ಸಿಂಗ್ ಸರ್ಕಾರ ಅಧಿಕಾರದ ಗದ್ದುಗೆಗೇರಿತು' ಎಂದು ಪ್ರಕಟವಾಗಿತ್ತು.

'ಶಾಸಕರ ಖರೀದಿ ಹೊಸದಲ್ಲ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಬಿಜೆಪಿಯವರು 10 ವರ್ಷಗಳಲ್ಲಿ ದೇಶದಲ್ಲಿ 2,500 ಶಾಸಕರನ್ನು ಖರೀದಿಸಿದ್ದಾರೆ. ಅವರು ಹಣದ ಆಮಿಷವೊಡ್ಡುವುದು ಹೊಸದಲ್ಲ' ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಹೇಳಿದರು.



ಸಂತೋಷ ಲಾಡ್

ಕಾಂಗ್ರೆಸ್ ಶಾಸಕರಿಗೆ ಬಿಜೆಪಿಯವರು ಹಣದ ಆಮಿಷವೊಡ್ಡಿರುವ ಬಗ್ಗೆ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ಹಣದ ಪಾರ್ಟಿ. ಬಿಜೆಪಿ ನಿಧಿ ₹7,500 ಕೋಟಿ ಇದೆ ಎಂದು ಅಧಿಕೃತವಾಗಿ ಘೋಷಿಸಿದ್ದಾರೆ. ಕೋವಿಡ್ ವೇಳೆ, ಪ್ರಧಾನಮಂತ್ರಿ ಪರಿಹಾರ ನಿಧಿಯಲ್ಲಿ ₹30 ಸಾವಿರ ಕೋಟಿ ಸಂಗ್ರಹವಾಗಿದೆ. ಆ ಹಣದಲ್ಲಿ ಈವರೆಗೆ ಒಂದೇ ಒಂದು ಆಸ್ಪತ್ರೆ ನಿರ್ಮಾಣವಾಗಿಲ್ಲ' ಎಂದರು.

'ಸತೀಶ ಜಾರಕಿಹೊಳಿ ಅವರನ್ನು 30 ವರ್ಷಗಳಿಂದ ಬಲ್ಲೆ. ಅವರು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬಹಿರಂಗವಾಗಿ ಹೇಳಲ್ಲ. ಅವರು ಅಸಮಾಧಾನ ಬೇರೆ ರೀತಿ ತೋಡಿಕೊಂಡಿದ್ದಾರೆ, ಅದು ರಾಜಕೀಯ ಅಲ್ಲ' ಎಂದರು.

'ಬರಗಾಲ ಆವರಿಸಿರುವ ಇಂದಿನ ಸಂದರ್ಭದಲ್ಲಿ ಬ್ಯಾಂಕ್‌ಗಳು ಸಾಲ ಮರುಪಾವತಿಗೆ ರೈತರಿಗೆ ಒತ್ತಡ ಹೇರಬಾರದು. ಮಾನವೀಯತೆಯಿಂದ ನಡೆದುಕೊಳ್ಳಬೇಕು. ರೈತರು ಸಾಲ ಪಾವತಿಸದಿದ್ದರೆ ಸರ್ಕಾರವು ಮನ್ನಾ ಮಾಡಬೇಕು. ಅದಕ್ಕೆ, ಮಾನದಂಡ ನಿಗದಿಪಡಿಸಬೇಕು. ಉದಾರವಾಗಿ ಯೋಚಿಸಬೇಕು ಎಂದರು.

> ತಾತಾ, ತಾಯಿ, ತಂದೆ ಬಗ್ಗೆ ಬಿಜೆಪಿಯವರು ಎಷ್ಟೇ ಹೀಯಾಳಿಸಿದರೂ ರಾಹುಲ್ ಗೌತಮ ಬುದ್ಧನ ರೀತಿ ಎಲ್ಲವನ್ನೂ ಸಹಿಸಿಕೊಂಡಿದ್ದಾರೆ
> **ಸಂತೋಷ ಲಾಡ್,** ಕಾರ್ಮಿಕ ಸಚಿವ

'ಮೋದಿ ಸುಳ್ಳುಗಳ 3 ಸಾವಿರ ವಿಡಿಯೊ ಶೀಘ್ರ ಬಿಡುಗಡೆ'

ಹುಬ್ಬಳ್ಳಿ: 'ಪ್ರಧಾನಿ ನರೇಂದ್ರ ಮೋದಿ ಅವರು 10 ವರ್ಷಗಳಲ್ಲಿ ಮಾಡಿದ ಸುಳ್ಳು ಭಾಷಣಗಳ 3 ಸಾವಿರ ವಿಡಿಯೊಗಳನ್ನು ಸಂಗ್ರಹಿಸಿದ್ದು, ಅವುಗಳನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು' ಎಂದು ಸಚಿವ ಸಂತೋಷ ಲಾಡ್ ಹೇಳಿದರು.

ನಗರದಲ್ಲಿ ಕಾಂಗ್ರೆಸ್ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ಮೋದಿ ಅವರ ಸುಳ್ಳುಗಳನ್ನು ಜನರಿಗೆ ತಿಳಿಸುವ ಕೆಲಸ ಇನ್ನು ಮುಂದೆ ಮಾಡಲಾಗುವುದು' ಎಂದರು.

'ದೇಶದ ಬಹುತೇಕ ಮಾಧ್ಯಮಗಳು ಮೋದಿ ಪರವಾಗಿವೆ. ಟಿ.ವಿ ಧಾರಾವಾಹಿಗಳಲ್ಲೂ ಅವರನ್ನೇ ತೋರಿಸಲಾಗುತ್ತದೆ. ಅವರು (ಮೋದಿ) ಮಾಧ್ಯಮಗಳ ಮೂಲಕ ಜನರನ್ನು ತಲುಪುತ್ತಾರೆ. ನಮಗೆ ಜನರನ್ನು ನೇರವಾಗಿ ಸಂಪರ್ಕಿಸದ ಹೊರತು ಬೇರೆ ದಾರಿ ಇಲ್ಲ' ಎಂದರು.

'ಚುನಾವಣೆ ಸಮೀಪಿಸಿದಾಗ, ಬಿಜೆಪಿಯವರು ಪಾಕಿಸ್ತಾನ, ಮುಸ್ಲಿಂ ಮತ್ತು ಹಿಂದೂತ್ವದ ಬಗ್ಗೆ ಮಾತನಾಡುತ್ತಾರೆ. ಇದನ್ನು ಬಿಟ್ಟರೆ ಮಾತನಾಡಲು ಅವರಿಗೆ ಬೇರೆ ವಿಷಯಗಳಿಲ್ಲ. ಇದಕ್ಕೆ ಪ್ರತಿಯಾಗಿ, ನಾವು ಅಂಬೇಡ್ಕರ್, ಬಸವಣ್ಣ ಮತ್ತು ಕಾಂಗ್ರೆಸ್ ತತ್ವಗಳು ಒಂದೇ ಎಂಬುದನ್ನು ಜನರಿಗೆ ತಿಳಿಸಬೇಕಿದೆ' ಎಂದರು.

ಮಂತ್ರಿಗಿರಿಯೋ ನಿಗಮವೋ: ಶಾಸಕರ ವಿವೇಚನೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗಮ-ಮಂಡಳಿಗೆ ನೇಮಕ ಮಾಡಲು ಒಪ್ಪಿಗೆ ಸೂಚಿಸಿರುವ ಕಾಂಗ್ರೆಸ್ ವರಿಷ್ಠರು, ನಿಗಮವೋ ಅಥವಾ ಎರಡೂವರೆ ವರ್ಷಗಳ ಬಳಿಕ ಸಚಿವ ಸ್ಥಾನವೋ ಎಂಬ ಆಯ್ಕೆಯನ್ನು ಶಾಸಕರ ಮುಂದಿಡುವಂತೆ ರಾಜ್ಯ ನಾಯಕರಿಗೆ ಸೂಚಿಸಿದ್ದಾರೆ.

ನಿಗಮ-ಮಂಡಳಿಗಳ ನೇಮಕಕ್ಕೆ ಒಪ್ಪಿಗೆ ನೀಡಿದ ಬಳಿಕ, ಹೊಸಸೂತ್ರವೊಂದನ್ನು ವರಿಷ್ಠರು ಸಿದ್ಧಪಡಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ನಡೆಸಿದ ಸಭೆಯಲ್ಲಿ ಈ ಸೂತ್ರ ಸಿದ್ಧವಾಗಿದೆ ಎಂದು ಮೂಲಗಳು ಹೇಳಿವೆ.

ಎರಡೂ ವರ್ಷಗಳ ಬಳಿಕ ಸಚಿವ ಸಂಪುಟ ಪುನರ್‌ರಚನೆಯಾಗಲಿದೆ. ಆಗ ಸಚಿವರಾಗ ಬಯಸುವವರು ಮೊದಲಾರ್ಧದಲ್ಲಿ ನಿಗಮ-ಮಂಡಳಿಯ ಅಧ್ಯಕ್ಷ ಸ್ಥಾನ ಪಡೆಯುವಂತಿಲ್ಲ. ಸಚಿವ ಸ್ಥಾನ ಬೇಡವೆಂದಾದರೆ ಮಾತ್ರ, ನಿಗಮದ ಅಧಿಕಾರ ನೀಡಲಾಗುವುದು. ಆಕಾಂಕ್ಷಿ ಶಾಸಕರಿಂದ ಇದನ್ನು ಖಚಿತ ಪಡಿಸಿಕೊಂಡು ನೇಮಕ ಮಾಡಬೇಕು. ಈಗ ನಿಗಮ-ಮಂಡಳಿಗೆ ನೇಮಕ ಮಾಡಿ, ಎರಡೂವರೆ ವರ್ಷಗಳ ಬಳಿಕ ಸಚಿವ ಸ್ಥಾನವನ್ನೂ ನೀಡಿದರೆ, ಕೆಲವರಿಗಷ್ಟೇ ಅಧಿಕಾರ ಸಿಕ್ಕಂತಾಗುತ್ತದೆ. ಮೊದಲ ಬಾರಿಗೆ ಆಯ್ಕೆಯಾದವರಿಗೂ ಅವಕಾಶ ಸಿಗಬೇಕಾದರೆ ಈ ಸೂತ್ರ ಅನ್ವಯಿಸಿ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಮುಖ್ಯಮಂತ್ರಿಗೆ ಈ ಸೂಚನೆ ಬಂದಿದೆ ಎಂದು ಮೂಲಗಳು ಖಚಿತಪಡಿಸಿವೆ. ಈ ಮಧ್ಯೆ, ಎರಡೂವರೆ ವರ್ಷಗಳ ಬಳಿಕ ಅಧಿಕಾರ ಸೂತ್ರ ಹಂಚಿಕೆ ಆಗಲಿದ್ದು, ಆಗ ಸಚಿವ ಸ್ಥಾನ ಬಯಸುವವರನ್ನು ಈಗ ನಿಗಮ- ಮಂಡಳಿಗೆ ಪರಿಗಣಿಸದಿರಲು ಪಕ್ಷದ ವಲಯದಲ್ಲಿ ಚರ್ಚೆ ನಡೆದಿದೆ. ಸಚಿವ ಸ್ಥಾನ ಆಕಾಂಕ್ಷಿಗಳ ಅಭಿಪ್ರಾಯ ಆಲಿಸಿದ ಬಳಿಕ ನಿಗಮ-ಮಂಡಳಿಗಳಿಗೆ ಆಯ್ಕೆ ಅಂತಿಮಗೊಳಿಸಲು ಉದ್ದೇಶಿಸಲಾಗಿದೆ ಎಂದೂ ಮೂಲಗಳು ತಿಳಿಸಿವೆ.

20 ಶಾಸಕರ ಪಟ್ಟಿ ಸಿದ್ಧ

ಶಾಸಕರ ಸಿಟ್ಟು ತಣಿಸಲು 20 ವಿಧಾನಸಭಾ ಸದಸ್ಯರು ಹಾಗೂ ಐವರು ವಿಧಾನಪರಿಷತ್ತಿನ ಸದಸ್ಯರಿಗೆ ನಿಗಮ-ಮಂಡಳಿಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ನೀಡಲು ತೀರ್ಮಾನಿಸಲಾಗಿದೆ.

ಇದಕ್ಕೆ ಪೂರಕವಾಗಿ ನಿಗಮ- ಮಂಡಳಿಗಳಿಗೆ ನೇಮಿಸಲು 20ಕ್ಕೂ ಹೆಚ್ಚು ಶಾಸಕರ ಪಟ್ಟಿಯೊಂದನ್ನು ಸಿದ್ಧಪಡಿಸಲಾಗಿದೆ. ಆ ಪಟ್ಟಿಯಲ್ಲಿ ಕೆ.ಎಂ. ಶಿವಲಿಂಗೇಗೌಡ, ರಾಘವೇಂದ್ರ ಹಿಟ್ನಾಳ್, ಟಿ. ರಘುಮೂರ್ತಿ, ಬಿ.ಜಿ. ಗೋವಿಂದಪ್ಪ, ಟಿ.ಡಿ.ರಾಜೇಗೌಡ, ಅನಿಲ್ ಚಿಕ್ಕಮಾದು, ಪಿ.ಎಂ. ನರೇಂದ್ರ ಸ್ವಾಮಿ, ಎಚ್.ಸಿ. ಬಾಲಕೃಷ್ಣ, ರಮೇಶ್ ಬಂಡಿಸಿದ್ದೇಗೌಡ, ಎಸ್.ಎನ್. ನಾರಾಯಣಸ್ವಾಮಿ, ಪ್ರಸಾದ್ ಅಬ್ಬಯ್ಯ, ಬಿ.ಕೆ. ಸಂಗಮೇಶ್ವರ್, ಬಿ.ಆರ್.ಪಾಟೀಲ, ಬಿ. ಶಿವಣ್ಣ, ರೂಪಾ ಶಶಿಧರ್, ಎನ್.ಎಚ್. ಕೋನರಡ್ಡಿ, ಮಹಾಂತೇಶ ಕೌಜಲಗಿ, ಅಪ್ಪಾಜಿ ನಾಡಗೌಡ, ಬಿ. ಪುಟ್ಟರಂಗ ಶೆಟ್ಟಿ, ಯು.ಬಿ. ವೆಂಕಟೇಶ್ ಅವರ ಹೆಸರುಗಳಿವೆ ಎಂದು ಗೊತ್ತಾಗಿದೆ.

ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಎರಡು ದಿನಗಳಿಂದಲೂ ಪಟ್ಟಿ ಸಿದ್ಧಪಡಿಸಲು ಕಸರತ್ತು ನಡೆಸಿದ್ದರು. ಪಕ್ಷದ ವರಿಷ್ಠರ ಜೊತೆಗೆ ಚರ್ಚಿಸಿದ ಬಳಿಕ ಈ ಪಟ್ಟಿಗೆ ಅಂತಿಮ ರೂಪ ಸಿಗಲಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ಎಚ್‌ಡಿಕೆ ಆಣೆ ಮಾಡಲಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಾಂಗ್ರೆಸ್- ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ 14 ತಿಂಗಳು ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಭ್ರಷ್ಟಾಚಾರ ಮಾಡಿಲ್ಲವೇ? ಇಲ್ಲ ಎನ್ನುವುದಾದರೆ ದೇವರ ಮುಂದೆ ಆಣೆ ಮಾಡಲಿ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸವಾಲು ಹಾಕಿದರು.

ಇಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, 'ತಾನು ಮುಖ್ಯಮಂತ್ರಿಯಾಗಿದ್ದಾಗ ವರ್ಗಾವಣೆಯಲ್ಲಿ ಹಸ್ತಕ್ಷೇಪ ಮಾಡಿಯೇ ಇಲ್ಲ ಎಂದು ಅವರು ಪ್ರಮಾಣ ಮಾಡಲಿ. ಧರ್ಮಸ್ಥಳ ಸೇರಿದಂತೆ ಯಾವುದೇ ದೇವಾಲಯಕ್ಕೆ ಬರಲಿ, ನಾವೂ ಪ್ರಮಾಣಕ್ಕೆ ಸಿದ್ಧರಿದ್ದೇವೆ. ಕುಮಾರಸ್ವಾಮಿಗೆ ಬೇರೆ ಕೆಲಸವಿಲ್ಲ; ಹೀಗಾಗಿ ಬೇಡದ ವಿಚಾರಗಳನ್ನು ಮಾತನಾಡುತ್ತಿದ್ದಾರೆ' ಎಂದರು.

'ಮುಖ್ಯಮಂತ್ರಿಯಾಗಲು ಸಮರ್ಥರಾದವರು ಕಾಂಗ್ರೆಸ್‌ನಲ್ಲಿ 50 ಮಂದಿ ಇದ್ದಾರೆ. ಸಮಯ ಬಂದಾಗ ಹೈಕಮಾಂಡ್ ತೀರ್ಮಾನಿಸುತ್ತದೆ. ಈಗ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಬಹಳ ಗಂಭೀರವಾಗಿ ಅವರು ಕೆಲಸ ಮಾಡುತ್ತಿದ್ದಾರೆ' ಎಂದು ಹೇಳಿದರು.

'ಬಿಜೆಪಿ ಮುಖಂಡರು ಆಪರೇಷನ್ ವಿಚಾರ ತೆಗೆದು ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ' ಎಂದರು.

ಯೋಗಿ ಭೇಟಿಯಾದ ನಿಖಿಲ್

ಬೆಂಗಳೂರು: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಬಿಜೆಪಿ-ಜೆಡಿಎಸ್ ಮೈತ್ರಿಯ ನಂತರ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ರಾಜ್ಯದ ಹಲವು ಬಿಜೆಪಿ ನಾಯಕರನ್ನು ಭೇಟಿ ಮಾಡಿದ್ದ ನಿಖಿಲ್ ಅವರು, ಈಗ ಇತರೆ ರಾಜ್ಯಗಳ ಹಾಗೂ ಕೇಂದ್ರದ ಬಿಜೆಪಿ ನಾಯಕರ ಭೇಟಿ ಮುಂದುವರಿಸಿದ್ದಾರೆ.

ಪುನೀತ್ ಕೆರೆಹಳ್ಳಿ ವಿರುದ್ಧ ತುಮಕೂರಿನಲ್ಲಿ ಪ್ರಕರಣ

ಪ್ರಜಾವಾಣಿ ವಾರ್ತೆ

ತುಮಕೂರು: ಫೇಸ್‌ಬುಕ್‌ನಲ್ಲಿ ಅವಾಚ್ಯ ಪದಗಳ ಅವಹೇಳನಕಾರಿ ಪೋಸ್ಟ್ ಹಂಚಿಕೊಂಡ ಆರೋಪದ ಮೇಲೆ ರಾಷ್ಟ್ರ ರಕ್ಷಣಾ ಪಡೆಯ ಅಧ್ಯಕ್ಷ ಪುನೀತ್ ಕೆರೆಹಳ್ಳಿ ವಿರುದ್ಧ ಹೆಬ್ಬೂರು ಪೊಲೀಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ.

'ವಕೀಲ ಮತ್ತು ಕೆಪಿಸಿಸಿ ವಕ್ತಾರ ಸೂರ್ಯ ಮುಕುಂದರಾಜು ಮತ್ತು ಅವರ ಸಹೋದ್ಯೋಗಿಗಳ ವಿರುದ್ಧ ಅವಹೇಳನಕಾರಿಯಾಗಿ ಅವಾಚ್ಯ ಪದ ಬಳಸಿ ಪೋಸ್ಟ್ ಹಂಚಿಕೊಂಡಿದ್ದರು. ಇದಕ್ಕೆ ಪುನೀತ್ ಬೆಂಬಲಿಗರು ನಕಲಿ ಖಾತೆ ಸೃಷ್ಟಿಸಿ ಕೆಟ್ಟದ್ದಾಗಿ ಕಮೆಂಟ್ ಮಾಡಿದ್ದಾರೆ. ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು' ಎಂದು ಎಲ್.ಎಚ್.ತೇಜಸ್‌ಗೌಡ ಎಂಬುವರು ದೂರು ನೀಡಿದ್ದಾರೆ.

'ಪುನೀತ್ ಕೆರೆಹಳ್ಳಿ ವಕೀಲ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ. ಅವರ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕು. ಫೇಸ್‌ಬುಕ್ ಖಾತೆ ನಿರ್ಬಂಧಿಸಿ ನ್ಯಾಯ ಒದಗಿಸಬೇಕು' ಎಂದು ಅವರು ದೂರಿನಲ್ಲಿ ಒತ್ತಾಯಿಸಿದ್ದರು. ದೂರು ದಾಖಲಿಸಿಕೊಳ್ಳಲು ನಿರ್ದೇಶನ ನೀಡುವಂತೆ ಕೋರಿ ಜೆಎಂಎಫ್‌ಸಿ ನ್ಯಾಯಾಲಯದ ಮೊರೆ ಹೋಗಿದ್ದರು. ಕೋರ್ಟ್ ಆದೇಶದ ಮೇರೆಗೆ ಕಲಂ 504ರ ಅಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಊಟಕ್ಕೆ ಹೋದರೆ ಮಸಾಲೆ ಹಾಕುವುದು ಯಾಕೆ?'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಗೃಹ ಸಚಿವ ಜಿ.ಪರಮೇಶ್ವರ ಅವರು ಮನೆಗೆ ಊಟಕ್ಕೆ ಕರೆದಿದ್ದರು. ಅದಕ್ಕೆ ಮಸಾಲೆ ಹಾಕುವುದು ಯಾಕೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.



ಸಿದ್ದರಾಮಯ್ಯ

'ನಾನು, ಸಚಿವರಾದ ಮಹದೇವಪ್ಪ, ಸತೀಶ ಜಾರಕಿಹೊಳಿ ಊಟಕ್ಕೆ ಹೋಗಿದ್ದೆವು. ಅಲ್ಲಿ ಲೋಕಾಭಿರಾಮ ಮಾತುಕತೆ ನಡೆದಿದೆಯೇ ವಿನಾ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ' ಎಂದು ಪರಮೇಶ್ವರ ಮನೆಯಲ್ಲಿ ಶುಕ್ರವಾರ ರಾತ್ರಿ ನಡೆದ ಸಭೆಯ ಕುರಿತು ಮಾಧ್ಯಮದವರ ಪ್ರಶ್ನೆಗೆ ಶನಿವಾರ ಪ್ರತಿಕ್ರಿಯಿಸಿದರು.

ಬಿಜೆಪಿಯವರು ಕಾಂಗ್ರೆಸ್ ಶಾಸಕರಿಗೆ ₹50 ಕೋಟಿ ಆಫರ್ ನೀಡಿದ್ದಾರೆ ಎಂಬ ಶಾಸಕರೊಬ್ಬರ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ, 'ಆರೋಪ ಮಾಡಿದವರನ್ನೇ ಕೇಳಬೇಕು. ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಬಿಜೆಪಿಯವರು ನಮ್ಮ ಸರ್ಕಾರ ಅಸ್ಥಿರಗೊಳಿಸಲು ಯತ್ನಿಸುತ್ತಿದ್ದಾರೆ ಎಂಬ ಮಾಹಿತಿ ಇದೆ' ಎಂದರು.

ನಿಗಮ- ಮಂಡಳಿಗಳಿಗೆ ಶೀಘ್ರ ಅಧ್ಯಕ್ಷರ ನೇಮಕ ಮಾಡಲಾಗುವುದು. ಮೊದಲ ಹಂತದಲ್ಲಿ ಶಾಸಕರಿಗೆ, ಎರಡನೇ ಹಂತದಲ್ಲಿ ಕಾರ್ಯಕರ್ತರಿಗೆ ಆದ್ಯತೆ ನೀಡಲಾಗುತ್ತದೆ ಎಂದು ಹೇಳಿದರು.

'ರಾಜ್ಯದಲ್ಲಿ 216 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ₹33 ಸಾವಿರ ಕೋಟಿಗೂ ಅಧಿಕ ಬೆಳೆ ಹಾನಿಯಾಗಿದ್ದು, ₹17,900 ಕೋಟಿ ಪರಿಹಾರವನ್ನು ಕೇಂದ್ರದಿಂದ ಕೇಳಲಾಗಿದೆ. ಆದರೆ, ಕೇಂದ್ರ ಸರ್ಕಾರವು ಇನ್ನೂ ಹಣ ಬಿಡುಗಡೆ ಮಾಡದೆ ಮಲತಾಯಿ ಧೋರಣೆ ತೋರುತ್ತಿದೆ. ನಮ್ಮ ಸಚಿವರು ಹೋದರೆ ಕೇಂದ್ರ ಸಚಿವರು ಭೇಟಿಗೆ ಸಮಯವನ್ನೂ ನೀಡಿಲ್ಲ' ಎಂದು ಮುಖ್ಯಮಂತ್ರಿ ಆರೋಪಿಸಿದರು.

'ಶಾಸಕ ಪೂಂಜ ಇನ್ನೂ ಬಚ್ಚಾ'

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರು ಫೇಸ್‌ಬುಕ್ ಪುಟದಲ್ಲಿ 'ಕಲೆಕ್ಷನ್ ಮಾಸ್ಟರ್ ಆಫ್ ಕರ್ನಾಟಕ' ಎಂದು ಬರೆದುಕೊಂಡಿರುವ ಆರೋಪದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ, 'ನಾನು 1983ರಲ್ಲಿ ಶಾಸಕನಾಗಿ, 1985ರಲ್ಲಿ ಸಚಿವನಾಗಿದ್ದೆ. ಹರೀಶ್ ಪೂಂಜ ಇತ್ತೀಚೆಗೆ ಶಾಸಕರಾದವರು, ರಾಜಕೀಯದಲ್ಲಿ ಇನ್ನೂ ಬಚ್ಚಾ' ಎಂದು ಪ್ರತಿಕ್ರಿಯಿಸಿದರು.

ಕಾರ್ಕಳದ ಪರಶುರಾಮನ ಮೂರ್ತಿಯ ಗುಣಮಟ್ಟ, ಸತ್ಯಾಸತ್ಯತೆ ಬಗ್ಗೆ ತನಿಖೆ ನಡೆಸಲಾಗುತ್ತದೆ. ಸೌಜನ್ಯ ಹತ್ಯೆ ಪ್ರಕರಣವನ್ನು ಈ ಹಿಂದೆ ಸಿಬಿಐ ತನಿಖೆ ಮಾಡಿದ್ದು, ಕೇಂದ್ರ ಸರ್ಕಾರವೇ ಮರುತನಿಖೆ ಮಾಡಬೇಕು ಎಂದರು.

ಹರಿದಾಡಿದ 4 ವರ್ಷದ ಹಿಂದಿನ ವಿಡಿಯೊ

ಶಿಂದೆಯೇ ಸಿ.ಎಂ: ದೇವೇಂದ್ರ

ಪ್ರಜಾವಾಣಿ ವಾರ್ತೆ

ಮುಂಬೈ: 'ಮಹಾರಾಷ್ಟ್ರದ ಅಭಿವೃದ್ಧಿಗಾಗಿ ನಾನು ಮತ್ತೆ ಬರುತ್ತೇನೆ' ಎಂದು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನಾಲ್ಕು ವರ್ಷದ ಹಿಂದೆ ನೀಡಿದ್ದ ಹೇಳಿಕೆಯ ವಿಡಿಯೊ ತುಣುಕೊಂದು ಬಿಜೆಪಿಯ ಸಾಮಾಜಿಕ ಜಾಲತಾಣದಲ್ಲಿ (ಎಕ್ಸ್ ಖಾತೆ) ಶುಕ್ರವಾರ ಹರಿದಾಡಿದ್ದು ಆಗಿದ್ದು, ಮಹಾರಾಷ್ಟ್ರದ ರಾಜಕಾರಣದಲ್ಲಿ ಸಂಚಲನ ಮೂಡಿಸಿದೆ.

ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಶಿವಸೇನಾದ ಇತರ ಶಾಸಕರ ವಿರುದ್ಧ ನಡೆಯುತ್ತಿರುವ ಶಾಸಕತ್ವ ಅನರ್ಹಗೊಳಿಸುವಿಕೆ ಕುರಿತಾದ ಪ್ರಕ್ರಿಯೆ ಬೆನ್ನಲ್ಲೇ, ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿರುವುದು ರಾಜಕೀಯ ವಲಯದಲ್ಲಿ ವಿಭಿನ್ನ ಬಗೆಯ ಸಂದೇಶಕ್ಕೆ ಕಾರಣವಾಗಿದೆ.

ಈ ವಿಡಿಯೊ ರಾಜಕೀಯ ವಲಯದಲ್ಲಿ ಹಲವು ಊಹಾಪೋಹ ಮತ್ತು ಬಿಸಿ ಬಿಸಿ ಚರ್ಚೆಗೆ ಕಾರಣವಾಗುತ್ತಿದ್ದಂತೆ ಎಚ್ಚೆತ್ತ ಬಿಜೆಪಿ, ತನ್ನ ಖಾತೆಯಿಂದ ಇದನ್ನು ತೆಗೆದು ಹಾಕಿದೆ.

ಪರಿಸ್ಥಿತಿ ಕೈಮೀರುವ ಮುನ್ಸೂಚನೆ ಅರಿತ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸಹ, 'ಮುಖ್ಯಮಂತ್ರಿಯಾಗಿ ಏಕನಾಥ ಶಿಂದೆ ಈ ಅವಧಿಯನ್ನು ಪೂರ್ಣಗೊಳಿಸಲಿದ್ದಾರೆ. ಮುಂದಿನ ಚುನಾವಣೆ ಅವರ ನೇತೃತ್ವದಲ್ಲೇ ನಡೆಯಲಿದೆ' ಎಂದು ಶನಿವಾರ ಸ್ಪಷ್ಟಪಡಿಸಿದ್ದಾರೆ.

'ವಿಡಿಯೊವನ್ನು ನಾನು ನೋಡಿಲ್ಲ' ಎಂದು ಶಿವಸೇನಾದ ಮುಖ್ಯಸ್ಥರೂ ಆಗಿರುವ ಏಕನಾಥ ಶಿಂದೆ ಪ್ರತಿಕ್ರಿಯಿಸಿದ್ದಾರೆ.

'ಹಳೆಯ ವಿಡಿಯೊ ಬಗ್ಗೆ ತಪ್ಪಾಗಿ ಅರ್ಥೈಸಿಕೊಳ್ಳಬೇಕಿಲ್ಲ. ಶಿಂದೆ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದು, 2024ರಲ್ಲಿನ ಚುನಾವಣೆಯನ್ನು ಸಹ ಅವರ ನಾಯಕತ್ವದಲ್ಲೇ ಎದುರಿಸಲಿದ್ದೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ಬಾವಾಂಕುಲೆ ಪಾಲ್ಘಾರ್‌ನಲ್ಲಿ ತಿಳಿಸಿದ್ದಾರೆ.

ಜನರ ಹೃದಯದಿಂದಲೇ ಡಿಲೀಟ್: 'ಬಿಜೆಪಿ ತನ್ನ ಸಾಮಾಜಿಕ ಜಾಲತಾಣದಿಂದ ಈ ವಿಡಿಯೊ ಕ್ಲಿಪ್ಪಿಂಗ್ ಅನ್ನು ಬಲವಂತವಾಗಿ ತೆಗೆದು ಹಾಕಿದೆ. ಆದರೆ, ಜನರು ಈಗಾಗಲೇ ಫಡಣವೀಸ್ ಅವರನ್ನು ತಮ್ಮ ಹೃದಯದಿಂದ ಅಳಿಸಿ ಹಾಕಿದ್ದಾರೆ' ಎಂದು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ ತಿಳಿಸಿದ್ದಾರೆ.

'ಫಡಣವೀಸ್ ಬಿಜೆಪಿಯ ಹಿರಿಯ ನಾಯಕರ ಪರವಾಗಿ ನಿಂತಿದ್ದರೆ, ಜನರು 'ಸುಳ್ಳುಗಾರರ ಪಕ್ಷ' ವನ್ನು ನಂಬುವುದನ್ನೇ ನಿಲ್ಲಿಸಿದ್ದಾರೆ' ಎಂದಿದ್ದಾರೆ.

'ಇದೀಗ ಸಾಮಾಜಿಕ ಮಾಧ್ಯಮದ ಪ್ರಾಮುಖ್ಯತೆ ಹೆಚ್ಚಾಗಿದೆ. ವಿಡಿಯೊ ಕ್ಲಿಪ್‌ಗೆ ಬಂದಿದ್ದ ಪ್ರತಿಕ್ರಿಯೆ ನೋಡಬೇಕು. ಬಿಜೆಪಿಗೆ ಯಾವುದೇ ಅವಕಾಶ ನೀಡಲು ಬಯಸುವುದಿಲ್ಲ ಎಂದು ಜನರು ಹೇಳಿದ್ದಾರೆ' ಎಂದು ತಿಳಿಸಿದ್ದಾರೆ.

ಹಮಾಸ್ ಸುರಂಗ ಮಾರ್ಗಗಳು, ಅಡಗುದಾಣಗಳೇ ಗುರಿ; ಶಸ್ತ್ರಸಜ್ಜಿತ ವಾಹನಗಳ ಪ್ರವೇಶ

ಗಾಜಾ ಮೇಲೆ ದಾಳಿ ತೀವ್ರಗೊಳಿಸಿದ ಇಸ್ರೇಲ್



ಜೆರುಸಲೇಂ (ಎಪಿ): ಇಸ್ರೇಲ್ ಶನಿವಾರ ಗಾಜಾದಲ್ಲಿ ಭೂದಾಳಿಯನ್ನು ಮತ್ತಷ್ಟು ವಿಸ್ತರಿಸಿದೆ. ಪದಾತಿ ದಳ ಮತ್ತು ಶಸ್ತ್ರಸಜ್ಜಿತ ವಾಹನಗಳೊಂದಿಗೆ ಅಲ್ಲದೆ ಆಗಸ ಮತ್ತು ಸಮುದ್ರದ ಮೂಲಕವೂ ವ್ಯಾಪಕ ದಾಳಿ ಕೈಗೊಂಡಿದೆ ಎಂದು ಇಸ್ರೇಲ್‌ನ ಮಿಲಿಟರಿ ವಕ್ತಾರ ಹೇಳಿದ್ದಾರೆ.

ಪಡೆಗಳು ದಾಳಿ ಮುಂದುವರಿಸಿವೆ ಎಂದು ರಿಯರ್ ಅಡ್ಮಿರಲ್ ಡೇನಿಯಲ್ ಹಗರಿ ಹೇಳಿದ್ದರೆ, ಗಾಜಾದಲ್ಲಿ ನೆಲ ನಡುಗಿದೆ, ಸಂಘರ್ಷ ಈಗ ಮತ್ತೊಂದು ಹಂತ ಪ್ರವೇಶಿಸಿದೆ ಎಂದು ರಕ್ಷಣಾ ಸಚಿವ ಯೊವವ್ ಗ್ಯಾಲಂಟ್ ಹೇಳಿದ್ದಾರೆ.

'ಗಾಜಾ ಈಗ ಯುದ್ಧ ಭೂಮಿ ಆಗಿದೆ. ಉತ್ತರ ಗಾಜಾದಲ್ಲಿ ಆಶ್ರಯ ಪಡೆದಿರುವವರು ಸುರಕ್ಷಿತವಾಗಿರಲು ಆಗುವುದಿಲ್ಲ. ತಕ್ಷಣ ದಕ್ಷಿಣದತ್ತ ಧಾವಿಸಬೇಕು' ಎಂದು ಫೈಟರ್ ಜೆಟ್‌ಗಳ ಮೂಲಕ ಎಸೆದ ಕರಪತ್ರದಲ್ಲಿ ಸೇನೆ ಹೇಳಿದೆ.

ಶಸ್ತ್ರಸಜ್ಜಿತ ವಾಹನಗಳು ಗಾಜಾ ಪ್ರವೇಶಿಸುವ ವಿಡಿಯೊವನ್ನು ಮಿಲಿಟರಿ ಶನಿವಾರ ಬೆಳಿಗ್ಗೆ ಬಿಡುಗಡೆ ಮಾಡಿದೆ.

ಉತ್ತರ ಗಾಜಾದಲ್ಲಿ ಶುಕ್ರವಾರ ರಾತ್ರಿಯಿಡೀ ನಡೆಸಿದ ಕಾರ್ಯಾಚರಣೆಯಲ್ಲಿ ಯುದ್ಧವಿಮಾನಗಳು 150 ಸುರಂಗ ಮಾರ್ಗಗಳನ್ನು ಮತ್ತು ಅಡಗುತಾಣಗಳನ್ನು ನಾಶಪಡಿಸಿವೆ. ದಾಳಿಯ ಪ್ರಮುಖ ಗುರಿಯಾಗಿದ್ದ ಕೆಲವು ಅಡಗುತಾಣಗಳೂ ಇವುಗಳಲ್ಲಿ ಪ್ರಮುಖವಾಗಿವೆ ಎಂದು ಮಿಲಿಟರಿ ತಿಳಿಸಿದೆ.

ಬಾಂಬ್ ದಾಳಿಯಿಂದಾಗಿ ಸಂವಹನ, ಸಂಪರ್ಕ ಸೇವೆ ಸ್ತಬ್ಧಗೊಂಡಿದ್ದು ಗಾಜಾದಲ್ಲಿರುವ 23 ಲಕ್ಷ ಜನರಿಗೆ ಹೊರ ಗಿನ ಸಂಪರ್ಕ ಕಡಿತಗೊಂಡಿದೆ. ಸಂಘರ್ಷದಿಂದಾಗಿ ಈಗಾಗಲೇ ಅನೇಕ ಕಡೆ ವಿದ್ಯುತ್ ಪೂರೈಕೆಗೆ ತೊಂದರೆಯಾಗಿದೆ. ಮನೆ ಮತ್ತು ಆಶ್ರಯ ತಾಣಗಳಲ್ಲಿ ಆಹಾರ ಮತ್ತು ಕುಡಿಯುವ ನೀರಿನ ಕೊರತೆ ಕಾಣಿಸಿಕೊಂಡಿದೆ. ನೂರಾರು ಮನೆಗಳು, ಕಟ್ಟಡಗಳು ನೆಲಸಮವಾಗಿದೆ.

ದಾಳಿಯಲ್ಲಿ ಇಂಟರ್‌ನೆಟ್ , ಸೆಲ್ಯುಲರ್ ಮತ್ತು ದೂರವಾಣಿ ಸಂಪರ್ಕ ಸಂಪೂರ್ಣ ನಾಶವಾಗಿದೆ ಎಂದು ಪ್ಯಾಲೆಸ್ಟೀನ್‌ನಲ್ಲಿ ದೂರಸಂಪರ್ಕ ಸೇವೆ ಒದಗಿಸುವ ಪಾಲ್‌ಟೆಲ್ ಹೇಳಿದೆ.

ಈ ಮಧ್ಯೆ ಇಸ್ರೇಲ್ ನಡೆಸಿದ ದಾಳಿ ವಿಫಲವಾಗಿದೆ ಎಂದು ಹಮಾಸ್ ಹೇಳಿದೆ. ದಾಳಿಯನ್ನು ಹಿಮ್ಮೆಟ್ಟಿಸಿದ್ದಾಗಿ ತಿಳಿಸಿದೆ.

ಇಂದು ಭೇಟಿ: ಗಾಜಾದಲ್ಲಿ ಒತ್ತೆಯಾಳುಗಳ ಕುಟುಂಬದವರನ್ನು ಭಾನುವಾರ ಭೇಟಿ ಮಾಡುವುದಾಗಿ ಇಸ್ರೇಲ್‌ನ ರಕ್ಷಣಾ ಸಚಿವ ಯೊವವ್ ಗ್ಯಾಲಂಟ್ ಹೇಳಿದ್ದಾರೆ. ಇಸ್ರೇಲ್ ಪ್ರಧಾನಿ ಮತ್ತು ರಕ್ಷಣಾ ಸಚಿವರು ತಮ್ಮನ್ನು ಭೇಟಿ ಮಾಡದಿದ್ದರೆ ಪ್ರತಿಭಟನೆ ನಡೆಸುವುದಾಗಿ ಕುಟುಂಬದವರು ಶನಿವಾರ ಬೆದರಿಕೆ ಹಾಕಿದ್ದರು.

ಪತ್ರಕರ್ತರ ಸುರಕ್ಷತೆ ಬಗ್ಗೆ ಖಚಿತವಾಗಿ ಹೇಳಲು ಆಗುವುದಿಲ್ಲ ಎಂದು ಸೇನೆ ಹೇಳಿದೆ.



ರಫಾದಲ್ಲಿ ಪ್ಯಾಲೆಸ್ಟೀನ್ ನಾಗರಿಕರು ಕ್ಯಾನ್‌ಗಳಲ್ಲಿ ನೀರು ಸಂಗ್ರಹಿಸಿ ಕತ್ತೆಗಾಡಿ ಮತ್ತು ಇತರ ವಾಹನಗಳಲ್ಲಿ ಕೊಂಡೊಯ್ದರು —ಎಎಫ್‌ಪಿ ಚಿತ್ರ

ವಿಶ್ವಸಂಸ್ಥೆ ನಿರ್ಣಯದಿಂದ ಹೊರಗುಳಿದ ಭಾರತ

ಒಂದನೇ ಪುಟದಿಂದ

ಕದನ ವಿರಾಮ ಘೋಷಿಸಬೇಕೆಂದು ಒತ್ತಾಯಿಸುವ ನಿರ್ಣಯವನ್ನು193 ಸದಸ್ಯ ರಾಷ್ಟ್ರಗಳನ್ನು ಹೊಂದಿರುವ ವಿಶ್ವಸಂಸ್ಥೆಯು ಅಂಗೀಕರಿಸಿತು. ನಿರ್ಣಯದ ಪರ 121 ಸದಸ್ಯ ರಾಷ್ಟ್ರಗಳು ಮತ ಚಲಾಯಿಸಿದರೆ, 14 ರಾಷ್ಟ್ರಗಳು ವಿರುದ್ಧ ಮತ ಚಲಾಯಿಸಿದವು. ಭಾರತ, ಆಸ್ಟ್ರೇಲಿಯಾ, ಜರ್ಮನಿ, ಕೆನಡಾ, ಜಪಾನ್, ಉಕ್ರೇನ್, ಬ್ರಿಟನ್ ಸೇರಿ 44 ದೇಶಗಳು ನಿರ್ಣಯದಿಂದ ಹೊರಗುಳಿದವು.

ಇಸ್ರೇಲ್ ಮತ್ತು ಅಮೆರಿಕ, ನಿರ್ಣಯದ ವಿರುದ್ಧ ಮತ ಚಲಾಯಿಸಿದರೆ, ಚೀನಾ, ಫ್ರಾನ್ಸ್, ರಷ್ಯಾ ನಿರ್ಣಯದ ಪರ ಮತ ಹಾಕಿದವು.

'ನಾಗರಿಕರ ರಕ್ಷಣೆ ಹಾಗೂ ಕಾನೂನು ಮತ್ತು ಮಾನವೀಯ ಹೊಣೆಗಾರಿಕೆ ಎತ್ತಿಹಿಡಿಯುವುದು' ಎಂಬ ಘೋಷ ವಾಕ್ಯದ ನಿರ್ಣಯವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಶುಕ್ರವಾರ ಮಂಡಿಸಲಾಯಿತು. ಗಾಜಾದಲ್ಲಿ ಮಾನವೀಯ ನೆಲೆಯಲ್ಲಿ ಕದನ ವಿರಾಮ ಘೋಷಿಸಬೇಕೆಂಬ ನಿರ್ಣಯಕ್ಕೆ ಸದಸ್ಯ ರಾಷ್ಟ್ರಗಳ ಒಪ್ಪಿಗೆ ಕೋರಲಾಯಿತು.

ನಿರ್ಣಯದ ಕರಡನ್ನು ಜೋರ್ಡನ್ ರೂಪಿಸಿ ಮಂಡಿಸಿದ್ದು, ಗಾಜಾ ಪಟ್ಟಿಗೆ ಮಾನವೀಯ ನೆಲೆಯಲ್ಲಿ ಅನಿರ್ಬಂಧಿತವಾಗಿ ನೆರವು ಮುಂದುವರಿಸಬೇಕೆಂದು ಒತ್ತಿ ಹೇಳಿದೆ.

ಭಾರತದ ಪ್ರತಿಪಾದನೆ: ಭಾರತದ ನಿರ್ಧಾರ ಕುರಿತು ಮಾತನಾಡಿದ ವಿಶ್ವಸಂಸ್ಥೆಯಲ್ಲಿ ಭಾರತದ ಉಪ ಕಾಯಂ ಪ್ರತಿನಿಧಿಯಾಗಿರುವ ಯೋಜನಾ ಪಟೇಲ್, 'ವಿಶ್ವದಲ್ಲಿ ಭಿನ್ನಾಭಿಪ್ರಾಯ ಮತ್ತು ವಿವಾದಗಳನ್ನು ಮಾತುಕತೆ ಮೂಲಕ ಪರಿಹರಿಸಿಕೊಳ್ಳಲಾಗುತ್ತಿದೆ. ಹಿಂಸಾಚಾರಕ್ಕೆ ಬೆಂಬಲ ನೀಡುವ ಬಗ್ಗೆ ಈ ಸಭೆಯು ತೀವ್ರ ಕಾಳಜಿ ವಹಿಸಬೇಕು' ಎಂದರು.

ರಾಜಕೀಯ ಉದ್ದೇಶ ಸಾಧನೆಯ ಗುರಿ ಹೊಂದಿರುವ ಹಿಂಸಾಚಾರವು ಭಾರಿ ಹಾನಿ ಉಂಟು ಮಾಡುವುದಲ್ಲದೆ ಯಾವುದೇ ದೀರ್ಘಕಾಲೀನ ಪರಿಹಾರಕ್ಕೆ ದಾರಿ ತೋರುವುದಿಲ್ಲ ಎಂದು ಹೇಳಿದರು.

ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆದ ದಾಳಿಯನ್ನು ಆಘಾತಕಾರಿ ಎಂದ ಅವರು, ಈ ಕೃತ್ಯವು ಖಂಡನೆಗೆ ಅರ್ಹವಾಗಿದೆ ಎಂದರು.

'ಭಿನ್ನಾಭಿಪ್ರಾಯ ಬದಿಗಿರಿಸೋಣ, ಭಯೋತ್ಪಾದನೆಯನ್ನು ಒಗ್ಗೂಡಿ, ಶೂನ್ಯ ಸಹಿಷ್ಣುತೆಯಿಂದ ಎದುರಿಸೋಣ. ಈಗ ನಡೆಯುತ್ತಿರುವ ಸಂಘರ್ಷದಲ್ಲಿ ನಾಗರಿಕರ ಜೀವ ಹಾನಿಯಾಗುತ್ತಿರುವ ಬಗ್ಗೆ ಭಾರತಕ್ಕೆ ತೀವ್ರ ಆತಂಕವಿದೆ. ಎಲ್ಲಾ ರಾಷ್ಟ್ರಗಳು ಹೊಣೆಗಾರಿಕೆಯನ್ನು ಪ್ರದರ್ಶಿಸುವ ಅಗತ್ಯವಿದೆ ' ಎಂದರು.

ಒತ್ತೆಯಾಳುಗಳನ್ನು ತಕ್ಷಣ ಬೇಷರತ್ತಾಗಿ ಬಿಡುಗಡೆ ಮಾಡಬೇಕು ಎಂದು ಕೂಡ ಭಾರತ ಒತ್ತಾಯಿಸಿತು. ಭಾರತದ ವಿವರಣೆಯಲ್ಲಿ ಹಮಾಸ್‌ನ ಉಲ್ಲೇಖ ಇಲ್ಲ.

'ಗಾಜಾದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಮಾನವೀಯ ನೆಲೆಯಲ್ಲಿ ಪರಿಹರಿಸಬೇಕು. ಇದಕ್ಕಾಗಿ ಅಂತರರಾಷ್ಟ್ರೀಯ ಸಮುದಾಯದ ಯತ್ನ ಸ್ವಾಗತಾರ್ಹ. ಭಾರತ ಕೂಡ ಈ ಪ್ರಯತ್ನಕ್ಕೆ ಕೈಜೋಡಿಸಿದೆ. ಔಷಧಗಳು ಸೇರಿದಂತೆ 38 ಟನ್‌ಗಳಷ್ಟು ಪರಿಹಾರ ಸಾಮಗ್ರಿಗಳನ್ನು ಭಾರತವು ಪ್ಯಾಲೆಸ್ಟೀನಿಯನ್ನರಿಗೆ ಕಳುಹಿಸಿದೆ' ಎಂದು ಯೋಜನಾ ಪಟೇಲ್ ಹೇಳಿದರು.

ಇಸ್ರೇಲ್– ಪ್ಯಾಲೆಸ್ಟೀನ್ ಸಂಘರ್ಷಕ್ಕೆ ದ್ವಿರಾಷ್ಟ್ರದ ಪರಿಹಾರವನ್ನು ಭಾರತ ಯಾವಾಗಲೂ ಬೆಂಬಲಿಸಿದೆ. ಇದಕ್ಕಾಗಿ ಎಲ್ಲರೂ ಕಾರ್ಯೋನ್ಮುಖರಾಗಬೇಕು ಎಂದು ಒತ್ತಾಯಿಸುವುದಾಗಿ ತಿಳಿಸಿದರು.

ನಿರ್ಣಯದಲ್ಲಿ ಏನಿದೆ?: ಗಾಜಾಪಟ್ಟಿಯಲ್ಲಿ ಮಾನವೀಯ ತತ್ವಗಳನ್ನು ಎತ್ತಿ ಹಿಡಿದಿರುವ ಮತ್ತು ನಾಗರಿಕರಿಗೆ ತುರ್ತು ನೆರವು ಒದಗಿಸುತ್ತಿರುವ ರೆಡ್‌ಕ್ರಾಸ್ ಮತ್ತು ಇತರ ಸಂಘ ಸಂಸ್ಥೆಗಳಿಗೆ, ಪ್ಯಾಲೆಸ್ಟೀನ್ ನಿರಾಶ್ರಿತರಿಗೆ ನೆರವು ಒದಗಿಸುತ್ತಿರುವ ವಿಶ್ವಸಂಸ್ಥೆಯ ಪರಿಹಾರ ಮತ್ತು ಕಾಮಗಾರಿ ಸಂಸ್ಥೆಗೆ ಯಾವುದೇ ಅಡ್ಡಿ ಆತಂಕ ಒಡ್ಡಬಾರದು. ಈ ಸಂಸ್ಥೆಗಳು ತಕ್ಷಣ, ಪೂರ್ಣ ಪ್ರಮಾಣದಲ್ಲಿ ಮಾನವೀಯ ನೆರವು ಒದಗಿಸಲು ಅವಕಾಶ ನೀಡಬೇಕು ಎಂದು ನಿರ್ಣಯ ಕರೆ ನೀಡಿದೆ.

ಹಮಾಸ್ ಉಲ್ಲೇಖವನ್ನು ನಿರ್ಣಯದಲ್ಲೆಲ್ಲೂ ಮಾಡಿಲ್ಲ ಎಂದು ಅಮೆರಿಕ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಮೊದಲು ನಿರ್ಣಯದಿಂದ ಹೊರಗುಳಿದ ಇರಾಕ್ ನಂತರದಲ್ಲಿ ತನ್ನ ಮತವನ್ನು ಬದಲು ಮಾಡಿ ನಿರ್ಣಯಕ್ಕೆ ಒಪ್ಪಿಗೆ ಸೂಚಿಸಿತು. ಮತ ಹಾಕುವಾಗ ತಾಂತ್ರಿಕ ದೋಷ ಉಂಟಾಗಿದ್ದಾಗಿ ಹೇಳಿತು.

ತದ್ವಿರುದ್ಧ ನಿಲುವು: ಪ್ರತಿಪಕ್ಷಗಳ ಕಟು ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಸ್ರೇಲ್– ಹಮಾಸ್ ಸಂಘರ್ಷ ನಿಲ್ಲಲು ತಕ್ಷಣ ಕದನ ವಿರಾಮ ಘೋಷಿಸಬೇಕೆಂದು ಕೋರಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಂಡಿಸಿದ ನಿರ್ಣಯದಿಂದ ದೂರ ಉಳಿದ ಭಾರತದ ಕ್ರಮವನ್ನು ವಿರೋಧ ಪಕ್ಷಗಳು ಟೀಕಿಸಿವೆ.

ಭಾರತವು ದೀರ್ಘಕಾಲದಿಂದ ಪ್ಯಾಲೆಸ್ಟೀನಿಯನ್ನರಿಗೆ ನೀಡುತ್ತಿದ್ದ ಬೆಂಬಲವನ್ನು ಇದು ಅಲ್ಲಗಳೆದಿದೆ, ದೇಶದ ನಿಲುವಿಗೆ ವಿರುದ್ಧವಾಗಿದೆ ಎಂದು ವಾಗ್ದಾಳಿ ನಡೆಸಿವೆ.

ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು, 'ನಿರ್ಣಯದಿಂದ ದೂರ ಉಳಿದದ್ದು ಆಘಾತಕಾರಿ ಮತ್ತು ನಾಚಿಕೆಗೇಡಿತನದ್ದು' ಎಂದಿದ್ದಾರೆ.

ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮತ್ತು ಸಿಪಿಐನ ಅವರ ಸಹವರ್ತಿ ಡಿ. ರಾಜಾ ಅವರು ಜಂಟಿ ಹೇಳಿಕೆ ನೀಡಿ, ಭಾರತದ ಈ ಹಿಂದಿನ ನಿಲುವಿಗೆ ಇದು ವಿರುದ್ಧವಾಗಿದೆ. ಈಗ ಭಾರತದ ವಿದೇಶಾಂಗ ನೀತಿಯನ್ನು ಅಮೆರಿಕದ ಸಾಮ್ರಾಜ್ಯಶಾಹಿಯ ಪ್ರಭಾವಕ್ಕೆ ಒಳಗಾಗಿ ರೂಪಿಸಿರುವುದನ್ನು ಮತ್ತು ಅಮೆರಿಕ– ಇಸ್ರೇಲ್– ಭಾರತದ ಸಂಬಂಧವನ್ನು ಬಲಪಡಿಸುವ ಮೋದಿ ಸರ್ಕಾರದ ಕ್ರಮವನ್ನು ಇದು ಬಿಂಬಿಸುತ್ತದೆ ಎಂದು ಟೀಕಿಸಿದ್ದಾರೆ.

ನಿರ್ಣಯ ಅಂಗೀಕಾರವಾದ ಬಳಿಕ ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಭೂದಾಳಿ ಮತ್ತು ವಾಯುದಾಳಿ ತೀವ್ರಗೊಳಿಸಿದ್ದು ನರಹತ್ಯೆಯೂ ಮುಂದುವರಿದಿದೆ ಎಂದು ಯೆಚೂರಿ ಮತ್ತು ರಾಜಾ ಹೇಳಿದ್ದಾರೆ. ಅಲ್ಲದೆ ತಕ್ಷಣ ಕದನ ವಿರಾಮ ಘೋಷಿಸುವಂತಾಗಬೇಕು ಎಂದು ಒತ್ತಾಯಿಸಿದ್ದಾರೆ.

ಪಾಕಿಸ್ತಾನದಿಂದ ಅಪ್ರಚೋದಿತ ಶೆಲ್ ದಾಳಿ

ಪ್ರತಿಭಟನೆ ದಾಖಲಿಸಿದ ಬಿಎಸ್‌ಎಫ್

ಜಮ್ಮು (ಪಿಟಿಐ): ಪಾಕಿಸ್ತಾನದ ಪಡೆಗಳು ಅಂತರ ರಾಷ್ಟ್ರೀಯ ಗಡಿಯುದ್ದಕ್ಕೂ ಗ್ರಾಮಗಳು ಮತ್ತು ಠಾಣೆಗಳನ್ನು ಗುರಿಯಾಗಿಸಿ ಅಪ್ರಚೋದಿತವಾಗಿ ಶೆಲ್ ಮತ್ತು ಗುಂಡಿನ ದಾಳಿ ನಡೆಸಿರುವುದನ್ನು ಖಂಡಿಸಿ ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಪ್ರತಿಭಟನೆ ದಾಖಲಿಸಿದೆ.

ಸುಚೇತ್‌ಗಢದ ಗಡಿ ಠಾಣೆಯಲ್ಲಿ ನಡೆದ ಕಮಾಂಡರ್ ಮಟ್ಟದ ಸಭೆಯಲ್ಲಿ ಪಾಕಿಸ್ತಾನದ ರೇಂಜರ್‌ಗಳ ಮುಂದೆ ಬಿಎಸ್‌ಎಫ್ ಪ್ರತಿಭಟನೆ ದಾಖಲಿಸಿದೆ ಎಂದು ಮೂಲಗಳು ತಿಳಿಸಿವೆ.

ಪಾಕಿಸ್ತಾನದ ರೇಂಜರ್‌ಗಳು ನಡೆಸಿರುವ ಶೆಲ್ ದಾಳಿಯು 2021ರ ಅನಂತರ ನಡೆದ ಪ್ರಮುಖ ಕದನವಿರಾಮ ಉಲ್ಲಂಘನೆಯಾಗಿದೆ ಎಂದಿವೆ.

ಗುರುವಾರ ರಾತ್ರಿಯಿಂದ ಸುಮಾರು ಏಳು ಗಂಟೆ ಪಾಕಿಸ್ತಾನದ ಕಡೆಯಿಂದ ಶೆಲ್ ಮತ್ತು ಗುಂಡಿನ ದಾಳಿ ನಡೆದಿದೆ ಎಂದು ತಿಳಿಸಿವೆ.

ಆರ್.ಎಸ್. ಪುರ ವಲಯದ ಅರ್ನಿಯಾ ಪ್ರದೇಶದಲ್ಲಿ ಪಾಕಿಸ್ತಾನದ ಪಡೆಗಳ ಗುಂಡಿನ ದಾಳಿಗೆ ಬಿಎಸ್‌ಎಫ್ ಯೋಧರಾದ ಕರ್ನಾಟಕದ ಬಸವರಾಜ್ ಎಸ್.ಆರ್. ಮತ್ತು ಶೇರ್ ಸಿಂಗ್ ಹಾಗೂ ರಜನಿ ದೇವಿ ಎಂಬವರು ಗಾಯಗೊಂಡಿದ್ದರು.

'ಮಕ್ಕಳಿಗೆ ಊಟ ಮಾಡಿಸುತ್ತಿದ್ದಾಗ ಶೆಲ್ ಸ್ಫೋಟಗೊಂಡಿದೆ. ನನಗೆ ಗಾಯಗಳಾಗಿವೆ. ಮಕ್ಕಳು ಸುರಕ್ಷಿತರಾಗಿದ್ದಾರೆ' ಎಂದು ರಜನಿ ದೇವಿ ತಿಳಿಸಿದ್ದಾರೆ.

ಗುಂಡಿನ ದಾಳಿಯ ಕಾರಣ ಜನರು ವಾಸಸ್ಥಳಗಳನ್ನು ತೊರೆದು ಬೇರೆಡೆಗೆ ತೆರಳುತ್ತಿರುವ ದೃಶ್ಯವಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗ ಳಲ್ಲಿ ಹರಿದಾಡಿದ್ದವು.

ಭಾರತ ಮತ್ತು ಪಾಕಿಸ್ತಾನ 2021 ಫೆಬ್ರುವರಿ 25ರಂದು ಕದನವಿರಾಮ ಒಪ್ಪಂದಕ್ಕೆ ಸಹಿ ಹಾಕಿದ್ದವು.

ಎಲ್‌ಒಸಿಯಲ್ಲಿ ಉಗ್ರರ ನುಸುಳುವಿಕೆ ಹೆಚ್ಚಳ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಗಡಿನಿಯಂತ್ರಣ ರೇಖೆಯುದ್ದಕ್ಕೂ (ಎಲ್‌ಒಸಿ) ಭಯೋತ್ಪಾದಕರು ಒಳನುಸುಳಲು ಯತ್ನಿಸಿರುವ ಪ್ರಕರಣಗಳು ಕಳೆದ ವರ್ಷ ಇಳಿಕೆಯಾಗಿದ್ದರೂ, 2023ರಲ್ಲಿ ಕ್ರಮೇಣ ಅಧಿಕವಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ವರ್ಷ ಒಳ ನುಸುಳಲು ಯತ್ನಿಸಿರುವ 40 ಭಯೋತ್ಪಾದಕರನ್ನು ಭದ್ರತಾ ಪಡೆಗಳು ಹತ್ಯೆ ಮಾಡಿವೆ.

ಕಳೆದ ವರ್ಷ ಉಗ್ರರು ಒಳನುಸುಳಲು 12 ಬಾರಿ ಪ್ರಯತ್ನಿಸಿದ್ದರು ಮತ್ತು ಈ ಎಲ್ಲಾ ಪ್ರಯತ್ನಗಳನ್ನು ಭದ್ರತಾ ಪಡೆಗಳು ವಿಫಲಗೊಳಿಸಿದ್ದವು. 18 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿತ್ತು ಎಂದು ಜಮ್ಮು ಮತ್ತು ಕಾಶ್ಮೀರದ ಡಿಜಿಪಿ ದಿಲ್ಬಾಗ್ ಸಿಂಗ್ ಹೇಳಿದ್ದಾರೆ.

ಉಗ್ರರನ್ನು ಶಸ್ತ್ರಾಸ್ತ್ರ ಮತ್ತು ಮಾದಕ ವಸ್ತುಗಳೊಂದಿಗೆ ಭಾರತದೊಳಕ್ಕೆ ಕಳುಹಿಸುವ 16 ತಾಣಗಳು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಸಕ್ರಿಯವಾಗಿವೆ ಎಂದಿದ್ದಾರೆ.

ಗಡಿಯಲ್ಲಿ ಭದ್ರತೆ ಕಡಿಮೆ ಮಾಡಲಾಗದು: ಸಿಂಗ್

ಜಮ್ಮು (ಪಿಟಿಐ): ಗಡಿ ನಿಯಂತ್ರಣ ರೇಖೆ ಮತ್ತು ಅಂತರ ರಾಷ್ಟ್ರೀಯ ಗಡಿ ಭಾಗದಲ್ಲಿ ಗಡಿಯಾಚೆಗಿನ ಗುಂಡಿನ ದಾಳಿಯ ಘಟನೆ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡು ಬಂದಿದೆ. ಆದರೆ, ಇತ್ತೀಚಿನ ಅಪ್ರಚೋದಿತ ಗುಂಡಿನ ದಾಳಿಯ ಕಾರಣ ಭಾರತವು ಪಾಕಿಸ್ತಾನದ ವಿರುದ್ಧ ತನ್ನ ಭದ್ರತೆಯನ್ನು ಕಡಿಮೆಗೊಳಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಶುಕ್ರವಾರ ಹೇಳಿದರು.

'ಜಮ್ಮುವಿನ ಅರ್ನಿಯಾದಲ್ಲಿ 2021ರ ಬಳಿಕ ಮೊದಲ ಬಾರಿ ಕದನವಿರಾಮ ಉಲ್ಲಂಘನೆಯಾಗಿದೆ. ಇಲ್ಲಿ ಪಾಕಿಸ್ತಾನಿ ರೇಂಜರ್‌ಗಳು ಗಡಿಯಾಚೆಯಿಂದ ಶೆಲ್ ದಾಳಿ ಮತ್ತು ಗುಂಡಿನ ದಾಳಿ ನಡೆಸಿದ್ದಾರೆ. ಇದರಿಂದ ಹಲವು ಮನೆಗಳು ಹಾನಿಯಾಗಿದ್ದು, ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧ ಮತ್ತು ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ' ಎಂದು ಅವರು ತಿಳಿಸಿದರು.

ನ.2ಕ್ಕೆ ವಿಚಾರಣೆಗೆ ಹಾಜರಾಗಲು ಮಹುವಾ ಮೊಯಿತ್ರಾಗೆ ಸೂಚನೆ

ನವದೆಹಲಿ (ಪಿಟಿಐ): ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಉದ್ಯಮಿಯಿಂದ ಲಂಚ ಪಡೆದ ಆರೋಪ ಹೊತ್ತಿರುವ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರಿಗೆ ನ. 2ರಂದೇ ವಿಚಾರಣೆಗೆ ಹಾಜರಾಗುವಂತೆ ಲೋಕ ಸಭೆಯ ನೀತಿ ನಿಯಮಗಳ ಸಮಿತಿ ಸೂಚಿಸಿದೆ.

ಈ ಮೊದಲು ಇದೇ 31ರಂದು ವಿಚಾರಣೆಗೆ ಹಾಜರಾಗುವಂತೆ ಸಮಿತಿ ಸೂಚಿಸಿತ್ತು. ಅಂದು ವಿಚಾರಣೆಗೆ ಹಾಜರಾಗಲು ಆಗುವುದಿಲ್ಲ, ನ. 5ರ ನಂತರ ದಿನಾಂಕ ನಿಗದಿ ಮಾಡಿದರೆ ವಿಚಾರಣೆಗೆ ಹಾಜರಾಗು ವುದಾಗಿ ಮಹುವಾ ಸಮಿತಿಗೆ ಪತ್ರ ಬರೆದಿದ್ದರು.

ಮಹುವಾ ಅವರ ಈ ಮನವಿ ತಿರಸ್ಕರಿಸಿರುವ ಸಮಿತಿ, ನ. 2ಕ್ಕೆ ವಿಚಾರಣೆ ನಿಗದಿಪಡಿಸಿದೆ.

'ಈ ವಿಷಯವು ಗಂಭೀರ ವಾಗಿದ್ದು, ಸಂಸದರ ಘನತೆ ಮೇಲೆ ಪರಿಣಾಮ ಬೀರಿದೆ. ಹೀಗಾಗಿ, ಮತ್ತಷ್ಟು ಕಾಲಾವಕಾಶ ನೀಡಲು ಸಾಧ್ಯವಾಗುವುದಿಲ್ಲ' ಎಂದಿದೆ.

'ಮೀಸಲಾತಿಗಾಗಿ ಉಪವಾಸ'

ಜಲ್ನಾ (ಪಿಟಿಐ): ಮರಾಠ ಸಮುದಾಯಕ್ಕೆ ತಕ್ಷಣ ಮೀಸಲಾತಿ ಕಲ್ಪಿಸಲು ಸರ್ಕಾರ ವಿಫಲವಾದರೆ ಅ.29ರಿಂದ ಮಹಾರಾಷ್ಟ್ರದ ಪ್ರತಿ ಹಳ್ಳಿಗಳಲ್ಲೂ ಸರಣಿ ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು ಎಂದು ಮರಾಠ ಮೀಸಲಾತಿಗಾಗಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಮನೋಜ್ ಜರಂಗೆ ಶನಿವಾರ ಹೇಳಿದ್ದಾರೆ.

ಉಪವಾಸ ಸತ್ಯಾಗ್ರಹದ ವೇಳೆ ಪ್ರತಿಭಟನಕಾರರಿಗೆ ಯಾವುದೇ ತೊಂದರೆಯಾದರೆ ಅದಕ್ಕೆ ಸರ್ಕಾರವೇ ಹೊಣೆ ಎಂದಿದ್ದಾರೆ.



ಬಾಂಗ್ಲಾದೇಶದಲ್ಲಿ ಉಸ್ತುವಾರಿ ಸರ್ಕಾರದ ಅಡಿಯಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಗೆ ಅವಕಾಶ ಮಾಡಿಕೊಡುವ ಸಲುವಾಗಿ ಪ್ರಧಾನಿ ಶೇಖ್ ಹಸೀನಾ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಢಾಕಾದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದು, ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿದರು. ಹಿಂಸಾಚಾರದಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ —ಪಿಟಿಐ/ಎಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಚುನಾವಣಾ ಬಾಂಡ್: 31ಕ್ಕೆ ವಿಚಾರಣೆ

ನವದೆಹಲಿ: ಚುನಾವಣಾ ಬಾಂಡ್ ಯೋಜನೆಯ ಮಾನ್ಯತೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಇದೇ 31ರಂದು ವಿಚಾರಣೆ ನಡೆಯಲಿದೆ.

ಈ ಅರ್ಜಿಗಳ ವಿಚಾರಣೆಗೆ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ಪೀಠ ರಚಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಇದ್ದಾರೆ. ಸಾಂವಿಧಾನಿಕ ಪೀಠ ರಚಿಸುವುದಾಗಿ ಸುಪ್ರೀಂ ಕೋರ್ಟ್ ಅ.16ರಂದು ತಿಳಿಸಿತ್ತು.

2018ರಲ್ಲಿ ಪರಿಚಯಿಸಿದ ಚುನಾವಣಾ ಬಾಂಡ್ ಯೋಜನೆಯ ಮಾನ್ಯತೆ ಪ್ರಶ್ನಿಸಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ಸ್ ರಿಫಾರ್ಮ್ಸ್, ಸಿಪಿಎಂ, ಡಾ. ಜಯಾ ಠಾಕೂರ್ (ಕಾಂಗ್ರೆಸ್ ನಾಯಕಿ), ಸ್ಪಂದನ್ ಬಿಸ್ವಾಲ್ ಮತ್ತು ಇತರರು ಅರ್ಜಿ ಸಲ್ಲಿಸಿದ್ದಾರೆ.

ಏಳು ಮಂದಿ ಆತ್ಮಹತ್ಯೆ

ಸೂರತ್ (ಪಿಟಿಐ): ಗುಜರಾತ್‌ನ ಸೂರತ್ ನಗರದ ನಿವಾಸವೊಂದರಲ್ಲಿ ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಏಳು ಮಂದಿಯ ಮೃತದೇಹಗಳು ಪತ್ತೆಯಾಗಿವೆ. ಎಲ್ಲರೂ ಸಾಮೂಹಿಕವಾಗಿ ಆತ್ಮಹತ್ಯೆಗೆ ಶರಣಾಗಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಪತಿ, ಪತ್ನಿ, 6 ವರ್ಷದ ಮಗ, 10 ಮತ್ತು 13 ವರ್ಷದ ಹೆಣ್ಣು ಮಕ್ಕಳು ಹಾಗೂ ಅವರ ಪೋಷಕರು ಆತ್ಮಹತ್ಯೆಗೆ ಶರಣಾದವರು. ಗುತ್ತಿಗೆದಾರನಾಗಿದ್ದ ಮನೀಷ್ ಸೋಲಂಕಿ (37) ಮಾತ್ರವೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರೆ, ಉಳಿದ ಆರು ಮಂದಿ ವಿಷ ಸೇವಿಸಿದಂತೆ ಕಂಡುಬರುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಗ್ನಿ ಅನಾಹುತ

ಲಂಡನ್ (ಎಪಿ): ಮಧ್ಯ ಕಜಕಸ್ತಾನದ ಕಲ್ಲಿದ್ದಲು ಗಣಿಯಲ್ಲಿ ಶನಿವಾರ ಅಗ್ನಿ ಅನಾಹುತ ಸಂಭವಿಸಿ ಕನಿಷ್ಠ 21 ಮಂದಿ ಕಾರ್ಮಿಕರು ಮೃತಪಟ್ಟಿದ್ದು, 25 ಮಂದಿ ನಾಪತ್ತೆಯಾಗಿದ್ದಾರೆ.

ಪ್ಯಾರಾ ಏಷ್ಯನ್ ಕ್ರೀಡಾಕೂಟಕ್ಕೆ ತೆರೆ; ಪದಕಗಳ ಶತಕ ಸಂಭ್ರಮ

ಭಾರತದ ಐತಿಹಾಸಿಕ ಸಾಧನೆ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಪದಕಗಳ ಶತಕ ಸಾಧನೆ ಮಾಡಿದ್ದ ಭಾರತವು, ಪ್ಯಾರಾ ಏಷ್ಯನ್ ಕೂಟದಲ್ಲೂ ಮೂರಂಕಿಯ ಗಡಿದಾಟಿ ಐತಿಹಾಸಿಕ ಸಾಧನೆ ಮಾಡಿತು.

ಹಾಂಗ್‌ಝೌನಲ್ಲಿ ಶನಿವಾರ ಕೊನೆಗೊಂಡ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಒಟ್ಟು 111 ಪದಕಗಳನ್ನು ಗೆದ್ದುಕೊಂಡರು. ಸೆ.23 ರಿಂದ ಅ.8ರ ವರೆಗೆ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ 107 ಪದಕಗಳನ್ನು ಜಯಿಸಿತ್ತು.

ಪದಕ ಪಟ್ಟಿಯಲ್ಲಿ ಐದನೇ ಸ್ಥಾನ ಪಡೆದಿರುವುದು ಪ್ಯಾರಾ ಏಷ್ಯನ್ ಕೂಟದಲ್ಲಿ ಭಾರತದ ಅತ್ಯುತ್ತಮ ಸಾಧನೆ ಎನಿಸಿಕೊಂಡಿತು. ಮೊದಲ ಪ್ಯಾರಾ ಏಷ್ಯನ್ ಕ್ರೀಡಾಕೂಟ 2010ರಲ್ಲಿ ಚೀನಾದ ಗುವಾಂಗ್‌ಝೌನಲ್ಲಿ ನಡೆದಿತ್ತು. ಅಲ್ಲಿ ಭಾರತವು ಒಂದು ಚಿನ್ನ ಸೇರಿದಂತೆ 14 ಪದಕಗಳೊಂದಿಗೆ 15ನೇ ಸ್ಥಾನವನ್ನು ಗಳಿಸಿತ್ತು. 2014ರಲ್ಲೂ 15ನೇ ಸ್ಥಾನ ಪಡೆದಿತ್ತು. 2018ರ ಆವೃತ್ತಿಯಲ್ಲಿ 72 ಪದಕಗಳನ್ನು ಗೆದ್ದುಕೊಂಡು 9ನೇ ಸ್ಥಾನಕ್ಕೆ ಏರಿತ್ತು.

‘ನಾವು ಹೊಸ ಇತಿಹಾಸ ರಚಿಸಿದ್ದೇವೆ. ನಮ್ಮ ಪ್ಯಾರಾ ಅಥ್ಲೀಟ್‌ಗಳು ದೇಶಕ್ಕೆ ಹೆಮ್ಮೆ ತಂದಿತ್ತಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಗೆದ್ದ ಪದಕಗಳಿಗಿಂತ ಹೆಚ್ಚಿನ ಪದಕಗಳನ್ನು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಗೆಲ್ಲುವ ವಿಶ್ವಾಸವಿದೆ’ ಎಂದು ಭಾರತ ಪ್ಯಾರಾಲಿಂಪಿಕ್ ಸಮಿತಿ ಅಧ್ಯಕ್ಷೆ ದೀಪಾ ಮಲಿಕ್ ಹೇಳಿದ್ದಾರೆ.



ಪುರುಷರ ಜಾವೆಲಿನ್‌ನಲ್ಲಿ ಚಿನ್ನ ಗೆದ್ದ ನೀರಜ್ ಯಾದವ್

ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	214	167	140	521
2	ಇರಾನ್	44	46	41	131
3	ಜಪಾನ್	42	49	59	150
4	ದಕ್ಷಿಣ ಕೊರಿಯಾ	30	33	40	103
5	ಭಾರತ	29	31	51	111

‘ಹಾಂಗ್‌ಝೌನಲ್ಲಿ ತೋರಿದ ಸಾಧನೆಯು ಅಚ್ಚರಿ ಉಂಟುಮಾಡಿಲ್ಲ. ಏಕೆಂದರೆ 110 –115 ಪದಕಗಳನ್ನು ಗೆಲ್ಲುವ ವಿಶ್ವಾಸವಿತ್ತು. 111 ಪದಕ ಜಯಿಸುವಲ್ಲಿ ಯಶಸ್ವಿಯಾದೆವು’ ಎಂದರು.

2018ಕ್ಕೆ ಹೋಲಿಸಿದರೆ, ಭಾರತ ಈ ಬಾರಿ 39 ಪದಕಗಳನ್ನು ಹೆಚ್ಚು ಗೆದ್ದಿದೆ. ಅಥ್ಲೆಟಿಕ್ಸ್‌ನಲ್ಲಿ 55 ಪದಕಗಳು ಬಂದಿವೆ. ಟ್ರ್ಯಾಕ್ ಮತ್ತು ಫೀಲ್ಡ್‌ನ ವಿವಿಧ ಸ್ಪರ್ಧೆಗಳಲ್ಲಿ 18 ಚಿನ್ನ, 17 ಬೆಳ್ಳಿ ಮತ್ತು 20 ಕಂಚು ಲಭಿಸಿವೆ.

ಬ್ಯಾಡ್ಮಿಂಟನ್‌ನಲ್ಲಿ ನಾಲ್ಕು ಚಿನ್ನ ಒಳಗೊಂಡಂತೆ 21 ಪದಕಗಳನ್ನು ಗೆದ್ದಿದೆ. ಚೆಸ್ ಮತ್ತು ಆರ್ಚರಿಯಲ್ಲಿ ಕ್ರಮವಾಗಿ ಎಂಟು ಹಾಗೂ ಏಳು ಪದಕಗಳನ್ನು ಭಾರತ ಜಯಿಸಿದೆ.

ಕೊನೆಯ ದಿನವಾದ ಶನಿವಾರ ಭಾರತದ ಕ್ರೀಡಾಪಟುಗಳು ನಾಲ್ಕು ಚಿನ್ನ ಸೇರಿದಂತೆ 12 ಪದಕಗಳನ್ನು ಗೆದ್ದುಕೊಂಡರು. ನೀರಜ್ ಯಾದವ್ ಅವರು ಪುರುಷರ ಎಫ್55 ವಿಭಾಗದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನ ತಮ್ಮದಾಗಿಸಿಕೊಂಡರು. ಅವರು 33.69 ಮೀ. ಸಾಧನೆ ಮಾಡಿದರು. 39 ವರ್ಷದ ನೀರಜ್ 2018ರ ಕೂಟದಲ್ಲೂ ಚಿನ್ನ ಜಯಿಸಿದ್ದರು.

ದಿಲೀಪ್ ಮಹದೂ ಗಾವಿತ್ ಅವರು ಪುರುಷರ ಟಿ47 ವಿಭಾಗದ 400 ಮೀ. ಓಟದ ಸ್ಪರ್ಧೆಯಲ್ಲಿ 49.48 ಸೆ.ಗಳೊಂದಿಗೆ ಅಗ್ರಸ್ಥಾನ ಪಡೆದರು. ಪೂಜಾ ಅವರು ಮಹಿಳೆಯರ 1,500 ಮೀ. ಓಟದಲ್ಲಿ (ಟಿ20 ವಿಭಾಗ) ಕಂಚು ಜಯಿಸಿದರು.

ಕಿಶನ್, ವೃತಿಗೆ ಕಂಚು: ಚೆಸ್‌ನಲ್ಲಿ ಕರ್ನಾಟಕದ ಕಿಶನ್ ಗಂಗೊಳ್ಳಿ ಅವರು ಪುರುಷರ ರ‍್ಯಾಪಿಡ್ ಸ್ಪರ್ಧೆಯ ವೈಯಕ್ತಿಕ ಮತ್ತು ತಂಡ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು. ವೃತಿ ಜೈನ್ ಅವರು ಮಹಿಳೆಯರ ತಂಡ ವಿಭಾಗದಲ್ಲಿ ಕಂಚು ಪಡೆದರು.

ಈ ಬಾರಿ 22 ಕ್ರೀಡೆಗಳಲ್ಲಿ 17 ರಲ್ಲಿ ಭಾರತವು ಕ್ರೀಡಾಪಟುಗಳನ್ನು ಕಣಕ್ಕಿಳಿಸಿತ್ತು.

ಬ್ಯಾಸ್ಕೆಟ್‌ಬಾಲ್: ಸೆಮಿಫೈನಲ್‌ಗೆ ಕ್ರೈಸ್ಟ್, ಜೈನ್ ತಂಡ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಜೈನ್ ಹಾಗೂ ಕ್ರೈಸ್ಟ್ ಕಾಲೇಜು ತಂಡಗಳು ಇಲ್ಲಿ ನಡೆಯುತ್ತಿರುವ ಚಾಲೆಂಜರ್ಸ್ ಕಪ್ ಅಂತರ ರಾಜ್ಯ ಪದವಿ ಕಾಲೇಜುಗಳ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿವೆ.

ಚೆನ್ನೈನ ಸತ್ಯಭಾಮ ವಿ.ವಿ. ಹಾಗೂ ಕೊಯಮತ್ತೂರಿನ ಪಿ.ಎಸ್.ಜಿ. ಕಲಾ ಮತ್ತು ವಿಜ್ಞಾನ ಕಾಲೇಜು ತಂಡಗಳು ಸಹ ಸೆಮಿಫೈನಲ್ ಪ್ರವೇಶಿಸಿವೆ.

ಮೈಸೂರು ವಿಶ್ವವಿದ್ಯಾಲಯದ ಬ್ಯಾಸ್ಕೆಟ್‌ಬಾಲ್ ಅಂಗಳದಲ್ಲಿ ಶನಿವಾರ ಬೆಳಿಗ್ಗೆ ನಡೆದ ಲೀಗ್ ಹಂತದ ಪಂದ್ಯಗಳಲ್ಲಿ ಕ್ರೈಸ್ಟ್ ಕಾಲೇಜು ತಂಡವು 68–32 ಅಂಕಗಳ ಅಂತರದಲ್ಲಿ ತಿರುಚಿರಾಪಲ್ಲಿಯ ಸೇಂಟ್ ಜೋಸೆಫ್ ಕಾಲೇಜು ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಚೆನ್ನೈನ ಸತ್ಯಭಾಮ ವಿ.ವಿ. ತಂಡವು ಕೊಯಮತ್ತೂರಿನ ಕುಮಾರಗುರು ತಂಡವನ್ನು 70–68 ರಿಂದ ಪರಾಭವಗೊಳಿಸಿತು. ಜೈನ್ ಕಾಲೇಜು ತಂಡವು 43–30 ಅಂತರದಲ್ಲಿ ಬೆಂಗಳೂರಿನ ಕ್ರಿಸ್ತು ಜಯಂತಿ ಕಾಲೇಜು ವಿರುದ್ಧ ಹಾಗೂ ಬೆಂಗಳೂರಿನ ಸಿಂಧಿ ಕಾಲೇಜು ತಂಡವು 57–36ರಿಂದ ಪಿಇಎಸ್ ಕಾಲೇಜು ತಂಡವನ್ನು ಮಣಿಸಿದವು.

ಸಂಜೆ ನಡೆದ ಪಂದ್ಯಗಳಲ್ಲಿ ಜೈನ್ ಕಾಲೇಜು 57–38 ಅಂತರದಿಂದ ಸತ್ಯಭಾಮ ವಿ.ವಿ. ವಿರುದ್ಧ; ಮೈಸೂರಿನ ಮೈಕಾ ಕಾಲೇಜು 75–62 ಅಂತರದಿಂದ ಕೊಯಮತ್ತೂರಿನ ಕುಮಾರಗುರು ಕಾಲೇಜು ವಿರುದ್ಧ; ಕ್ರೈಸ್ಟ್ ಕಾಲೇಜು 66–33ರಿಂದ ಸಿಂಧಿ ಕಾಲೇಜು ವಿರುದ್ಧ ಹಾಗೂ ಕೊಯಮತ್ತೂರಿನ ಪಿಎಸ್‌ಜಿ ಕಾಲೇಜು 61–45ರಿಂದ ಬೆಂಗಳೂರು ಪಿಇಎಸ್ ಕಾಲೇಜು ವಿರುದ್ಧ ಜಯ ಗಳಿಸಿದವು.

ಐಟಿಎಫ್ ದಾವಣಗೆರೆ ಓಪನ್ ಟೆನಿಸ್ ಟೂರ್ನಿ

ವಿಷ್ಣು–ಸಿದ್ಧಾಂತ್‌ಗೆ ಡಬಲ್ಸ್ ಗರಿ

● ಜಿ.ಶಿವಕುಮಾರ

ದಾವಣಗೆರೆ: ಅನುಭವಿ ವಿಷ್ಣುವರ್ಧನ್ ಹಾಗೂ ಯುವ ಆಟಗಾರ ಸಿದ್ಧಾಂತ್ ಬಂತಿಯಾ, ದಾವಣಗೆರೆ ಜಿಲ್ಲಾ ಟೆನಿಸ್ ಸಂಸ್ಥೆಯ ಅಂಗಳದಲ್ಲಿ ಶನಿವಾರ ಮಿಂಚು ಹರಿಸಿದರು.

36 ವರ್ಷದ ವಿಷ್ಣು ಹಾಗೂ 23ರ ಹರೆಯದ ಸಿದ್ಧಾಂತ್, ಇಲ್ಲಿ ನಡೆಯುತ್ತಿರುವ ಐಟಿಎಫ್ ದಾವಣಗೆರೆ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್‌ನಲ್ಲಿ ಚಾಂಪಿಯನ್ ಆದರು. ಇದರೊಂದಿಗೆ 15 ಎಟಿಪಿ ಪಾಯಿಂಟ್ಸ್ ಹಾಗೂ ₹78,000 ಬಹುಮಾನ ಮೊತ್ತ ಪಡೆದರು. ಹೊಳೆಯುವ ಟ್ರೋಫಿಗೂ ಮುತ್ತಿಕ್ಕಿದರು.

ಫೈನಲ್‌ನಲ್ಲಿ ವಿಷ್ಣು ಮತ್ತು ಸಿದ್ಧಾಂತ್ 6–2, 7–5ರಿಂದ ಮನೀಷ್ ಸುರೇಶ್ ಕುಮಾರ್ ಹಾಗೂ ಸಾಯಿ ಕಾರ್ತಿಕ್ ರೆಡ್ಡಿ ಅವರನ್ನು ಸೋಲಿಸಿದರು.

ಟೂರ್ನಿಯಲ್ಲಿ ನಾಲ್ಕನೇ ಶ್ರೇಯಾಂಕ ಹೊಂದಿದ್ದ ವಿಷ್ಣು ಹಾಗೂ ಸಿದ್ಧಾಂತ್, ತಮಗಿಂತಲೂ ಒಂದು ಸ್ಥಾನ ಮೇಲಿದ್ದ ಮನೀಷ್ ಮತ್ತು ಸಾಯಿ ಕಾರ್ತಿಕ್ ಎದುರು ಮೊದಲ ಸೆಟ್‌ನಲ್ಲಿ ಪ್ರಾಬಲ್ಯ ಮೆರೆದರು.

ಸೆಟ್‌ನ ಶುರುವಿನಲ್ಲೇ ಎದುರಾಳಿಗಳ ಸರ್ವ್ ಮುರಿದ ವಿಷ್ಣು ಮತ್ತು ಸಿದ್ಧಾಂತ್, ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿದರು. ನಂತರ ತಮ್ಮ ಪಾಲಿನ ಎರಡು ಸರ್ವ್‌ಗಳನ್ನು ಕಾಪಾಡಿಕೊಂಡ ಈ ಜೋಡಿ ಐದನೇ ಗೇಮ್‌ನಲ್ಲಿ ಸಾಯಿ ಕಾರ್ತಿಕ್ ಸರ್ವ್ ಬ್ರೇಕ್ ಮಾಡುವಲ್ಲಿ ಯಶಸ್ವಿಯಾಯಿತು. ಅದರೊಂದಿಗೆ ಮುನ್ನಡೆಯನ್ನು 4–1ಕ್ಕೆ ಹಿಗ್ಗಿಸಿಕೊಂಡಿತು. 6ನೇ ಗೇಮ್‌ನಲ್ಲಿ ವಿಷ್ಣು, 8ನೇ ಗೇಮ್‌ನಲ್ಲಿ ಸಿದ್ಧಾಂತ್ ಮಿಂಚಿನ ಸರ್ವ್‌ಗಳನ್ನು ಸಿಡಿಸಿ ಕೇವಲ 23 ನಿಮಿಷಗಳಲ್ಲಿ ಸೆಟ್ ಗೆದ್ದರು.

ಎರಡನೇ ಸೆಟ್‌ನಲ್ಲಿ ಉಭಯ ಜೋಡಿಗಳೂ ಜಿದ್ದಾಜಿದ್ದಿನ ಪೈಪೋಟಿ ನಡೆಸಿದವು. ಐದನೇ ಗೇಮ್‌ನಲ್ಲಿ ವಿಷ್ಣು ಮತ್ತು ಸಿದ್ಧಾಂತ್‌ಗೆ ಎದುರಾಳಿಗಳ ಸರ್ವ್ ಬ್ರೇಕ್ ಮಾಡುವ ಅವಕಾಶ ಸಿಕ್ಕಿತು. ಇದನ್ನು ಕೈಚೆಲ್ಲಿದರು. ವಿಷ್ಣು ಮಿಂಚಿನ ಏಸ್‌ಗಳನ್ನು ಸಿಡಿಸಿದರೆ, ನೆಟ್‌ನ ಸನಿಹ ನಿಲ್ಲುತ್ತಿದ್ದ ಸಿದ್ಧಾಂತ್ ಆಕರ್ಷಕ ರಿಟರ್ನ್ ಹಾಗೂ ಚುರುಕಿನ ಡ್ರಾಪ್‌ಗಳ ಮೂಲಕ ಸೇರಿದ್ದ ಪ್ರೇಕ್ಷಕರನ್ನು ರಂಜಿಸಿದರು. ಆರಂಭಿಕ ಸೆಟ್‌ನ ಸೋಲಿನಿಂದ ಹತಾಶರಾಗದ ಸಾಯಿ ಹಾಗೂ ಮನೀಷ್ ಕೂಡಾ ದಿಟ್ಟ ಪೈಪೋಟಿ ನೀಡಿದರು.

7ನೇ ಗೇಮ್‌ನಲ್ಲಿ ಮನೀಷ್ ಸರ್ವ್ ಕಳೆದುಕೊಂಡರು. ಮರು ಗೇಮ್‌ನಲ್ಲಿ ಸಿದ್ಧಾಂತ್ ಸರ್ವ್ ಬ್ರೇಕ್ ಮಾಡಿದ ಮನೀಷ್ ಮತ್ತು ಸಾಯಿ 4–4ರಿಂದ ಸಮಬಲ ಸಾಧಿಸಿದರು. ವಿಷ್ಣು ಹಾಗೂ ಸಿದ್ಧಾಂತ್ ನಂತರ ಇನ್ನಷ್ಟು ಆಕ್ರಮಣಕಾರಿಯಾಗಿ ಆಡಿದರು. 11ನೇ ಗೇಮ್‌ನಲ್ಲಿ ಮನೀಷ್ ಸರ್ವ್ ಮುರಿದ ಈ ಜೋಡಿ, ಅದರ ಬೆನ್ನಲ್ಲೇ ಸರ್ವ್ ಉಳಿಸಿಕೊಂಡು ಖುಷಿಯ ಕಡಲಲ್ಲಿ ತೇಲಿತು.



ಚಾಂಪಿಯನ್ ಆದ ಸಿದ್ಧಾಂತ್ ಬಂತಿಯಾ ಹಾಗೂ ವಿಷ್ಣುವರ್ಧನ್ ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಸತೀಶ ಬಡಿಗೇರ್

ಸಿಂಗಲ್ಸ್‌ನಲ್ಲಿ ಸೋತ ರಾಮ್

ಸಿಂಗಲ್ಸ್‌ನಲ್ಲಿ ಭಾರತದ ಭರವಸೆ ಎನಿಸಿದ್ದ ರಾಮಕುಮಾರ್ ರಾಮನಾಥನ್ ಹಾಗೂ ನಿಕಿ ಪೂಣಚ್ಚ ನಾಲ್ಕರ ಘಟ್ಟದಲ್ಲಿ ಎಡವಿದರು.

ಕಳೆದ ವಾರ ಧಾರವಾಡದಲ್ಲಿ ನಡೆದಿದ್ದ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದ ರಾಮ್, ಫೈನಲ್‌ನಲ್ಲಿ 4–6, 6–7ರಿಂದ ರಷ್ಯಾದ ಬೊಗ್ಡಾನ್ ಬೊಬ್ರೊವ್ ಎದುರು ನಿರಾಸೆ ಕಂಡರು.

ಇನ್ನೊಂದು ಸೆಮಿಫೈನಲ್‌ನಲ್ಲಿ ಅಮೆರಿಕದ ನಿಕ್ ಚಾಪೆಲ್ 6–3, 6–2ರಿಂದ ನಿಕಿ ಪೂಣಚ್ಚ ವಿರುದ್ಧ ಗೆದ್ದರು.

ಡಬಲ್ಸ್‌ನಲ್ಲಿ ಜೊತೆಯಾಗಿ ಆಡುವ ನಿಕ್ ಮತ್ತು ಬೊಬ್ರೊವ್, ಭಾನುವಾರ ಬೆಳಿಗ್ಗೆ ನಡೆಯುವ ಫೈನಲ್‌ನಲ್ಲಿ ಪೈಪೋಟಿ ನಡೆಸಲಿದ್ದಾರೆ.

ಮೈಸೂರು ರೇಸ್

ಟಚ್ ಆಫ್ ಗ್ರೇ ಗೆಲ್ಲುವ ನಿರೀಕ್ಷೆ

1xಬೆಟ್ ಮೈಸೂರು ಡರ್ಬಿ ಭಾನುವಾರ ಮುಕ್ತಾಯಗೊಳ್ಳಲಿರುವ ಮೈಸೂರು 2023 ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟಚ್ ಆಫ್ ಗ್ರೇ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕಂಟ್ರೆಸ್ ಫೇಮ್ 3, ಕೋಡ್ ಆಫ್ ಹಾನರ್ 2, ಕ್ಯಾಲಿಫೋರ್ನಿಯಾ ಗೋಲ್ಡ್ 8

2ನೇ ರೇಸ್: ಸ್ಪಾರ್ಕ್ಲಿಂಗ್ ನೈಟ್ 1, ಕಂಟ್ರೆಸ್ ಮೇಜರ್ 5, ಶೂಟಿಂಗ್ ವೀನಸ್ 2

3ನೇ ರೇಸ್: ದಿ ಒಮೆಗಾ ಮ್ಯಾನ್ 5, ಅಲ್ಟಿಮೇಟ್ ಸ್ಟ್ರೈಕರ್ 4, ಓಸಿರಿಸ್ 3

4ನೇ ರೇಸ್: ಇಮ್ಮೋರ್ಟಲ್ ಬ್ಯೂಟಿ 9, ಐ ಕ್ಯಾನ್ 10, ಫ್ಲೆಮಿಂಗೊ ಡ್ಯಾನ್ಸರ್ 3

5ನೇ ರೇಸ್: ಸೀಝ್ ಕರೇಜಿಯಸ್ 1, ಪಾಲಿಶ್ಡ್ ಗರ್ಲ್ 3

6ನೇ ರೇಸ್: ಟಚ್ ಆಫ್ ಗ್ರೇ 8, ಫಾಸ್ಟ್ ಪೇಸ್ 9, ಫಿಯರ್ಲೆಸ್ ಜೋ 2

7ನೇ ರೇಸ್: ದಿ ಕಿಂಗ್ ಎನ್ ಐ 2, ಡೆವಿಲ್ಸ್ ಮ್ಯಾಜಿಕ್ 4, ಏರ್ ಡಿಸ್ಪ್ಲೆ 3

8ನೇ ರೇಸ್: ಅರಾಲಿನ 9, ಗಿಲ್ಡೆಡ್ ಬಟರ್‌ಫ್ಲೈ 10, ಮ್ಯಾಜಿಕ್ ಸರ್ಕಲ್ 13

ಉತ್ತಮ ಬೆಟ್: ಇಮ್ಮೋರ್ಟಲ್ ಬ್ಯೂಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಮಹಿಳಾ ಹಾಕಿ: ಭಾರತಕ್ಕೆ ಜಯ

ರಾಂಚಿ (ಪಿಟಿಐ): ಹೊಂದಾಣಿಕೆಯ ಆಟವಾಡಿದ ಭಾರತ ತಂಡದವರು ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಸತತ ಎರಡನೇ ಜಯ ಸಾಧಿಸಿದರು.

ಶನಿವಾರ ನಡೆದ ಪಂದ್ಯದಲ್ಲಿ ಭಾರತ 5–0 ಗೋಲುಗಳಿಂದ ಮಲೇಷ್ಯಾ ತಂಡವನ್ನು ಮಣಿಸಿತು. ಆತಿಥೇಯರು ಮೊದಲ ಪಂದ್ಯದಲ್ಲಿ 7–1 ರಿಂದ ಥಾಯ್ಲೆಂಡ್ ತಂಡವನ್ನು ಮಣಿಸಿದ್ದರು.

ವಂದನಾ ಕಟಾರಿಯಾ (7 ಮತ್ತು 21ನೇ ನಿ.) ಎರಡು ಗೋಲುಗಳನ್ನು ಗಳಿಸಿ ಗಮನ ಸೆಳೆದರು. ಸಂಗೀತಾ (28), ಲಾಲ್‌ರೆಮ್ಸಿಯಾಮಿ (28) ಹಾಗೂ ಜ್ಯೋತಿ (38) ತಲಾ ಒಂದು ಗೋಲು ತಂದಿತ್ತರು.

ಭಾರತ ತಂಡ ತನ್ನ ಮುಂದಿನ ಪಂದ್ಯದಲ್ಲಿ ಸೋಮವಾರ ಚೀನಾ ವಿರುದ್ಧ ಹಣಾಹಣಿ ನಡೆಸಲಿದೆ.

ಹಾಕಿ: ಮಲೇಷ್ಯಾ ಮಣಿಸಿದ ಭಾರತ

ಜೊಹೊರ್ ಬಾಹ್ರು, ಮಲೇಷ್ಯಾ (ಪಿಟಿಐ): ಭಾರತ ಜೂನಿಯರ್ ತಂಡದವರು ಸುಲ್ತಾನ್ ಆಫ್ ಜೊಹೊರ್ ಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ 3–1 ಗೋಲುಗಳಿಂದ ಆತಿಥೇಯ ಮಲೇಷ್ಯಾ ತಂಡವನ್ನು ಮಣಿಸಿದರು.

ಶನಿವಾರ ನಡೆದ ಪಂದ್ಯದ 13ನೇ ನಿಮಿಷದಲ್ಲಿ ರಫೈಜುಲ್ ಮೊಹಮ್ಮದ್ ಅವರು ಮಲೇಷ್ಯಾ ತಂಡಕ್ಕೆ ಮುನ್ನಡೆ ತಂದಿತ್ತರು. ಮರುಹೋರಾಟ ನಡೆಸಿದ ಭಾರತ ತಂಡ, 28ನೇ ನಿಮಿಷದಲ್ಲಿ ಆದಿತ್ಯ ಗಳಿಸಿದ ಗೋಲಿನಿಂದ ಸಮಬಲ ಸಾಧಿಸಿತು. ಆ ಬಳಿಕ ಅಮನ್‌ದೀಪ್ (37) ಮತ್ತು ರೋಹಿತ್ (54) ಗೋಲು ಗಳಿಸಿ ಗೆಲುವು ತಂದಿತ್ತರು.

ಮನು ಭಾಕರ್‌ಗೆ ಒಲಿಂಪಿಕ್ಸ್ ಕೋಟಾ

ನವದೆಹಲಿ (ಪಿಟಿಐ): ಭಾರತದ ಮನು ಭಾಕರ್ ಅವರು ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 25 ಮೀ. ಪಿಸ್ತೂಲ್ ವಿಭಾಗದಲ್ಲಿ ಐದನೇ ಸ್ಥಾನ ಪಡೆದರಲ್ಲದೆ, ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಸ್ಥಾನ ಗಿಟ್ಟಿಸಿದರು.


ಶನಿವಾರ ನಡೆದ ಸ್ಪರ್ಧೆಯ ಫೈನಲ್‌ನಲ್ಲಿ 24 ಪಾಯಿಂಟ್ಸ್ ಕಲೆಹಾಕಿದ ಅವರು ‘ಶೂಟ್ ಆಫ್’ನಲ್ಲಿ ಎಡವಿ ಪದಕ ಗೆಲ್ಲುವ ಅವಕಾಶ ಕಳೆದುಕೊಂಡರು.

ಎರಡನೇ ಸ್ಥಾನ ಹೊರತುಪಡಿಸಿ, ಒಂದರಿಂದ ನಾಲ್ಕರವರೆಗಿನ ಸ್ಥಾನಗಳನ್ನು ಚೀನಾ ಸ್ಪರ್ಧಿಗಳು ತಮ್ಮದಾಗಿಸಿಕೊಂಡರು. ಬೆಳ್ಳಿ ಪದಕ ಇರಾನ್‌ನ ಹನಿಯಾ ರೊಸ್ತಿಮಿಯಾನ್ ಪಾಲಾಯಿತು.

ಹನಿಯಾ ಈ ಹಿಂದೆಯೇ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದರಿಂದ ಮತ್ತು ಚೀನಾಕ್ಕೆ ಒಂದು ಒಲಿಂಪಿಕ್ ಕೋಟಾ ಸ್ಥಾನ ಮಾತ್ರ ಪಡೆಯಬಹುದಾಗಿದ್ದ ಕಾರಣ ಮನು ಅವರು ಐದನೇ ಸ್ಥಾನ ಪಡೆದರೂ ಒಲಿಂಪಿಕ್ ಕೋಟಾ ಗಿಟ್ಟಿಸಿಕೊಂಡರು.

ಕೋಟಾ ಆಧಾರದಲ್ಲಿ ಇದುವರೆಗೆ ಭಾರತದ 11 ಶೂಟರ್‌ಗಳು ಒಲಿಂಪಿಕ್ಸ್‌ಗೆ ಆಯ್ಕೆಯಾಗಿದ್ದಾರೆ. ಮನು ಅವರು ಪಿಸ್ತೂಲ್ ವಿಭಾಗದಲ್ಲಿ ಒಲಿಂಪಿಕ್ ಕೋಟಾ ಗಿಟ್ಟಿಸಿದ ಭಾರತದ ಎರಡನೇ ಶೂಟರ್. ಸರಬ್ಜೋತ್ ಸಿಂಗ್ ಅವರು ಪುರುಷರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದರು.

ಮನು ಅವರು ಅರ್ಹತಾ ಸುತ್ತಿನಲ್ಲಿ ನಿಖರ ಪ್ರದರ್ಶನ ನೀಡಿ 591 ಪಾಯಿಂಟ್ಸ್‌ಗಳೊಂದಿಗೆ ಫೈನಲ್ ಪ್ರವೇಶಿಸಿದ್ದರು. ಕಣದಲ್ಲಿದ್ದ ಭಾರತದ ಇಶಾ ಸಿಂಗ್ ಮತ್ತು ರಿದಂ ಸಾಂಗ್ವಾನ್ ಅವರು ಕ್ರಮವಾಗಿ 17 (579) ಹಾಗೂ 23ನೇ (576) ಸ್ಥಾನ ಪಡೆದರು.


ಮನು ಭಾಕರ್

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1530)
ಸೋಯಾ (ರಿಫೈನ್ಡ್)	₹920 (915)
ಸೂರ್ಯಕಾಂತಿ (ರಿಫೈನ್ಡ್)	₹915 (912)
ಪಾಮೋಲಿನ್	₹822 (819)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

ಎನ್.ಆರ್.ಪುರ ರಬ್ಬರ್


(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143.00
ಗುಡ್ ಲಾಟ್	₹132

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹10800
ಎಸಿ	₹6440
ಆರ್‌ಪಿ	₹9800
ಆರ್‌ಸಿ	₹5960

ಈರುಳ್ಳಿ ರಫ್ತಿಗೆ ದರ ಮಿತಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಈರುಳ್ಳಿ ಮೇಲೆ ಕನಿಷ್ಠ ರಫ್ತು ದರ (ಎಂಇಪಿ) ಟನ್‌ಗೆ 800 ಡಾಲರ್ (₹66,728) ನಿಗದಿಪಡಿಸಿದೆ. ಈ ದರ ಮಿತಿಯು ಭಾನುವಾರದಿಂದ ಡಿಸೆಂಬರ್ 31ರವರೆಗೂ ಜಾರಿಯಲ್ಲಿ ಇರಲಿದೆ ಎಂದು ಶನಿವಾರ ತಿಳಿಸಿದೆ.

ದೇಶದಲ್ಲಿ ಈರುಳ್ಳಿ ಲಭ್ಯತೆ ಹೆಚ್ಚಿಸಲು ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸಲು ಈ ಕ್ರಮ ಕೈಗೊಂಡಿದೆ. ವಿದೇಶಿ ವ್ಯಾಪಾರಗಳ ಮಹಾ ನಿರ್ದೇಶನಾಲಯವು (ಡಿಜಿಎಫ್‌ಟಿ) ಈ ಸಂಬಂಧ ಪ್ರಕಟಣೆ ಹೊರಡಿಸಿದೆ.

ಪೂರೈಕೆ ಕೊರತೆಯಿಂದಾಗಿ ದೇಶದಾದ್ಯಂತ ಈರುಳ್ಳಿ ದರವು ದಿನೇ ದಿನೇ ಏರಿಕೆ ಆಗುತ್ತಿದೆ. ದೆಹಲಿಯಲ್ಲಿ ಚಿಲ್ಲರೆ ಮಾರಾಟ ದರವು ಕೆ.ಜಿಗೆ ₹65 ರಿಂದ ₹80ರವರೆಗೆ ಮಾರಾಟ ಆಗುತ್ತಿದೆ.

ಕೇಂದ್ರದ ಬಳಿಕ ಈಗಾಗಲೇ 5 ಲಕ್ಷ ಟನ್‌ನಷ್ಟು ದಾಸ್ತಾನು ಇದ್ದು, ಹೆಚ್ಚುವರಿಯಾಗಿ ಇನ್ನೂ 2 ಲಕ್ಷ ಟನ್ ಖರೀದಿ ಮಾಡುವುದಾಗಿ ತಿಳಿಸಿದೆ.

ಅಲ್ಟ್ರಾಟೆಕ್ ಸಿಮೆಂಟ್: ₹13 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯು ತನ್ನ ವಾರ್ಷಿಕ ತಯಾರಿಕಾ ಸಾಮರ್ಥ್ಯವನ್ನು 2.19 ಕೋಟಿ ಟನ್‌ಗಳಷ್ಟು ಹೆಚ್ಚಿಸುವ ಉದ್ದೇಶದಿಂದ ₹13 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಶನಿವಾರ ಹೇಳಿದೆ. ಒಟ್ಟು ತಯಾರಿಕಾ ಸಾಮರ್ಥ್ಯವು 18.2 ಕೋಟಿ ಟನ್‌ಗಳಿಗೆ ಏರಿಕೆ ಆಗಲಿದೆ.

ಇದು ಭವಿಷ್ಯದ ಬೆಳವಣಿಗೆಗಷ್ಟೇ ಅಲ್ಲದೆ ದೇಶದ ಮನೆ, ರಸ್ತೆ ಮತ್ತು ಮೂಲಸೌಕರ್ಯ ಯೋಜನೆಗಳಿಗೂ ಶಕ್ತಿ ನೀಡಲಿದೆ ಎಂದು ಆದಿತ್ಯ ಬಿರ್ಲಾ ಸಮೂಹ ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

28-10-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1540)
ಒಂದು ವಾರದ ಡೆಲಿವರಿ	1555 (1535)
ಸೋಯಾ ಕಚ್ಚಾ	870 (870)
ಪಾಮ್ ವಾರದ ಡೆಲಿವರಿ	825 (817)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
61,350 (60,650)
ಬೆಳ್ಳಿ ಕೆ.ಜಿ 72,050 (71,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಿಪಿಸಿಎಲ್‌ಗೆ ₹8,243 ಕೋಟಿ ಲಾಭ

ನವದೆಹಲಿ (ಪಿಟಿಐ): ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹8,243 ಕೋಟಿ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ₹338 ಕೋಟಿಯಷ್ಟು ನಷ್ಟ ಆಗಿತ್ತು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕಚ್ಚಾ ತೈಲ ದರ ಇಳಿಕೆ ಕಂಡಿದ್ದರೂ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ದರವನ್ನು ಕಡಿಮೆ ಮಾಡದ ಕಾರಣಕ್ಕಾಗಿ ಕಂಪನಿಯು ಈ ಪ್ರಮಾಣದ ಲಾಭ ಗಳಿಸುವಂತಾಗಿದೆ. ಆದರೆ, ಕಳೆದ ವರ್ಷ ಕಚ್ಚಾ ತೈಲ ದರ ಗರಿಷ್ಠ ಮಟ್ಟಕ್ಕೆ ತಲುಪಿದ್ದಾಗ ಇಂಧನ ಮಾರಾಟ ದರದಲ್ಲಿ ಏರಿಕೆ ಮಾಡದೇ ನಷ್ಟ ಆಗಿತ್ತು ಎಂದು ಕಂಪನಿ ತಿಳಿಸಿದೆ.

2023ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಕಂಪನಿಯು ದಾಖಲೆಯ ₹18,888 ಕೋಟಿಯಷ್ಟು ಲಾಭ ಗಳಿಸಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರಮಾನವು ₹1.28 ಲಕ್ಷ ಕೋಟಿಯಿಂದ ₹1.16 ಲಕ್ಷ ಕೋಟಿಗೆ ಇಳಿಕೆ ಕಂಡಿದೆ. 2022ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ₹6,486 ಕೋಟಿಯಷ್ಟು ನಷ್ಟ ಕಂಡಿತ್ತು.

‘ಅಕ್ಕಿ ಉತ್ಪಾದನೆ ಶೇ 3.79ರಷ್ಟು ಇಳಿಕೆ ಸಾಧ್ಯತೆ’

ನವದೆಹಲಿ (ಪಿಟಿಐ): ಅಕ್ಕಿ ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಮಳೆ ಪ್ರಮಾಣ ವಾಡಿಕೆಗಿಂತಲೂ ಕಡಿಮೆ ಆಗಿದೆ. ಹೀಗಾಗಿ 2023–24ರ ಬೆಳೆ ವರ್ಷದ ಮುಂಗಾರು ಅವಧಿಯಲ್ಲಿ ಅಕ್ಕಿ ಉತ್ಪಾದನೆಯು ಶೇ 3.79ರಷ್ಟು ಕಡಿಮೆ ಆಗುವ ಅಂದಾಜು ಮಾಡಲಾಗಿದೆ ಎಂದು ಕೃಷಿ ಸಚಿವಾಲಯ ಹೇಳಿದೆ.

2022–23ರ ಬೆಳೆ ವರ್ಷದಲ್ಲಿ 11.05 ಕೋಟಿ ಟನ್‌ನಷ್ಟು ಅಕ್ಕಿ ಉತ್ಪಾದನೆ ಆಗಿತ್ತು. ಇದಕ್ಕೆ ಹೋಲಿಸಿದರೆ 2023–24ರ ಬೆಳೆ ವರ್ಷದಲ್ಲಿ ಉತ್ಪಾದನೆಯು 10.63 ಕೋಟಿ ಟನ್‌ಗೆ ಇಳಿಕೆ ಆಗಲಿದೆ ಎಂದು ತಿಳಿಸಿದೆ.

ಆಹಾರಧಾನ್ಯಗಳ ಉತ್ಪಾದನೆಯ ಮೊದಲ ಅಂದಾಜನ್ನು ಸಚಿವಾಲಯ ಬಿಡುಗಡೆ ಮಾಡಿದೆ. ಅದರಂತೆ ಮೆಕ್ಕೆ ಜೋಳದ ಉತ್ಪಾದನೆಯು 2.36 ಕೋಟಿ ಟನ್‌ನಿಂದ 2.24 ಕೋಟಿ ಟನ್‌ಗೆ ಇಳಿಕೆ ಕಾಣಲಿದೆ.

ಎಣ್ಣೆಕಾಳುಗಳ ಉತ್ಪಾದನೆಯು 2.61 ಕೋಟಿ ಟನ್‌ನಿಂದ 2.15 ಕೋಟಿ ಟನ್‌ಗೆ ಇಳಿಕೆ ಕಾಣಲಿದೆ. ಕಬ್ಬು ಉತ್ಪಾದನೆಯು 49.05 ಕೋಟಿ ಟನ್‌ನಿಂದ 43.47 ಕೋಟಿ ಟನ್‌ಗೆ ಇಳಿಕೆ ಕಾಣುವ ಅಂದಾಜು ಮಾಡಿರುವುದಾಗಿ ಹೇಳಿದೆ.

ಆಹಾರಧಾನ್ಯಗಳ ಒಟ್ಟು ಉತ್ಪಾದನೆಯು ಈ ಮುಂಗಾರು ಅವಧಿಯಲ್ಲಿ 14.85 ಕೋಟಿ ಟನ್ ಆಗುವ ಅಂದಾಜು ಮಾಡಲಾಗಿದೆ. ಹಿಂದಿನ ವರ್ಷದ ಮುಂಗಾರಿನಲ್ಲಿ 15.57 ಕೋಟಿ ಟನ್‌ನಷ್ಟು ಉತ್ಪಾದನೆ ಆಗಿತ್ತು ಎಂದು ಸಚಿವಾಲಯ ತಿಳಿಸಿದೆ.

ಬಿಎಸ್‌ಎನ್‌ಎಲ್ 4ಜಿ ಜೂನ್ ವೇಳೆಗೆ

ನವದೆಹಲಿ (ಪಿಟಿಐ): ಬಿಎಸ್‌ಎನ್‌ಎಲ್ ಕಂಪನಿಯು ಡಿಸೆಂಬರ್ ವೇಳೆಗೆ ಸಣ್ಣ ಪ್ರಮಾಣದಲ್ಲಿ 4ಜಿ ಸೇವೆಗಳನ್ನು ಆರಂಭಿಸಲಿದ್ದು, ಮುಂದಿನ ವರ್ಷದ ಜೂನ್ ವೇಳೆಗೆ ದೇಶದಾದ್ಯಂತ ಸೇವೆಯು ಲಭ್ಯವಾಗುವಂತೆ ಮಾಡಲಿದೆ ಎಂದು ಕಂಪನಿಯ ಅಧ್ಯಕ್ಷ ಪಿ.ಕೆ. ಪುರ್ವಾರ್ ತಿಳಿಸಿದ್ದಾರೆ. ಇಂಡಿಯಾ ಮೊಬೈಲ್ ಕಾಂಗ್ರೆಸ್‌ನಲ್ಲಿ ಮಾತನಾಡಿದ ಅವರು, ಜೂನ್ ಬಳಿಕ 5ಜಿ ಸೇವೆಗಳಿಗೆ ಅಪ್‌ಗ್ರೇಡ್ ಆಗುವ ಯೋಜನೆ ಹೊಂದಿರುವುದಾಗಿ ಹೇಳಿದ್ದಾರೆ.

ಎಫ್‌ಪಿಐ: ಹಣಕಾಸು, ಐ.ಟಿ.ಯದ್ದೇ ಸಿಂಹಪಾಲು

ಅಕ್ಟೋಬರ್‌ನಲ್ಲೂ ಭಾರತದಿಂದ ಬಂಡವಾಳ ಹಿಂತೆಗೆತ

● ವಿಶ್ವನಾಥ ಎಸ್.

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರ (ಎಫ್‌ಪಿಐ) ಒಟ್ಟು ಹೂಡಿಕೆ ಮೊತ್ತದಲ್ಲಿ ಹಣಕಾಸು ಸೇವೆಗಳು ಮತ್ತು ಐ.ಟಿ. ವಲಯಗಳ ಪಾಲು ಗರಿಷ್ಠ ಪ್ರಮಾಣದಲ್ಲಿದೆ. ಹೀಗಾಗಿ ಭಾರತದಲ್ಲಿ ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವುದರಿಂದ ಈ ವಲಯಗಳ ಮೇಲೆ ಅತಿ ಹೆಚ್ಚಿನ ಪರಿಣಾಮ ಆಗುತ್ತಿದೆ.

‘ಎಫ್‌ಪಿಐ ನಿರ್ವಹಣಾ ಸಂಪತ್ತು ಮೌಲ್ಯವು (ಎಯುಎಂ) ಒಟ್ಟು ₹54.11 ಲಕ್ಷ ಕೋಟಿಯಷ್ಟು ಇದೆ. ಅದರಲ್ಲಿ ಹಣಕಾಸು ಸೇವೆಗಳ ಪಾಲು ₹17.68 ಲಕ್ಷ ಕೋಟಿಯಷ್ಟು ಇದ್ದರೆ, ಐ.ಟಿ. ವಲಯದ ಪಾಲು ₹5.31 ಲಕ್ಷ ಕೋಟಿಯಷ್ಟು ಇದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

‘ವಿದೇಶಿ ಹೂಡಿಕೆದಾರರು ಮಾರಾಟ ಮಾಡುತ್ತಿರುವುದರಿಂದ ಈ ವಲಯಗಳ ಷೇರುಗಳ ಮೌಲ್ಯ ಇಳಿಮುಖವಾಗಿದೆಯೇ ಹೊರತು ಯಾವುದೇ ಮೂಲಭೂತ ಅಂಶಗಳಿಂದಾಗಿ ಅಲ್ಲ ಎನ್ನುವುದನ್ನು ಗಮನಿಸಬೇಕು’ ಎಂದು ಅವರು ಸಲಹೆ ನೀಡಿದ್ದಾರೆ.




ಎಫ್‌ಪಿಐ ಬಂಡವಾಳ ಹಿಂತೆಗೆತವು ಅಕ್ಟೋಬರ್‌ನಲ್ಲಿಯೂ ಮುಂದುವರಿದಿದೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಅಕ್ಟೋಬರ್ 27ರವರೆಗೆ ನಡೆದಿರುವ ವಹಿವಾಟಿನಲ್ಲಿ ₹20,365 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಬಂಡವಾಳ ಮಾರುಕಟ್ಟೆಯಿಂದ ಒಟ್ಟಾರೆ ₹25,575 ಕೋಟಿಯಷ್ಟು ಹಿಂದಕ್ಕೆ ಪಡೆದಿದ್ದಾರೆ.

‘ಅಕ್ಟೋಬರ್‌ನಲ್ಲಿ ಹಣಕಾಸು ಸೇವೆಗಳು, ವಿದ್ಯುತ್, ಎಫ್‌ಎಂಸಿಜಿ ಮತ್ತು ಐ.ಟಿ. ಷೇರುಗಳನ್ನು ಹೆಚ್ಚಾಗಿ ಮಾರಾಟ ಮಾಡುತ್ತಿದ್ದಾರೆ. ಅಮೆರಿಕದ 10 ವರ್ಷಗಳ ಅವಧಿಯ ಬಾಂಡ್ ಗಳಿಕೆಯು ಅಕ್ಟೋಬರ್ 19ರಂದು 17 ವರ್ಷಗಳ ಗರಿಷ್ಠ ಮಟ್ಟಕ್ಕೆ (ಶೇ 5) ಏರಿಕೆ ಕಂಡಿತ್ತು. ಸದ್ಯ ತುಸು ಇಳಿಕೆ ಕಂಡು ಶೇ 4.84ರಷ್ಟಕ್ಕೆ ಬಂದಿದೆ. ಬಾಂಡ್ ಗಳಿಕೆಯ ಪ್ರಮಾಣ ಗರಿಷ್ಠ ಮಟ್ಟದಲ್ಲಿ ಇರುವುದೇ ವಿದೇಶಿ ಹೂಡಿಕೆದಾರರು ಭಾರತದಿಂದ ಬಂಡವಾಳ ಹಿಂದಕ್ಕೆ ಪಡೆಯಲು ಪ್ರಮುಖ ಕಾರಣ’ ಎಂದು ವಿಜಯಕುಮಾರ್ ತಿಳಿಸಿದ್ದಾರೆ.

ಹಣದುಬ್ಬರ ಮತ್ತು ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವುದಷ್ಟೇ ಭಾರತದಲ್ಲಿ ವಿದೇಶಿ ಹೂಡಿಕೆಯ ಮೇಲೆ ಪರಿಣಾಮ ಬೀರುತ್ತಿಲ್ಲ. ಇಸ್ರೇಲ್–ಹಮಾಸ್ ಯುದ್ಧದ ತೀವ್ರತೆ ಮತ್ತು ಅದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಆಗಲಿರುವ ಪರಿಣಾಮಗಳು ಸಹ ಭಾರತದಿಂದ ಬಂಡವಾಳ ಹಿಂದಕ್ಕೆ ಪಡೆಯುವಂತೆ ಮಾಡುತ್ತಿವೆ ಎಂಬುದು ಮಾರುಕಟ್ಟೆ ವಿಶ್ಲೇಷಕರ ಅಭಿಪ್ರಾಯವಾಗಿದೆ.


ವಿದೇಶಿ ಸಾಂಸ್ಥಿಕ ಹೂಡಿಕೆ (₹ ಕೋಟಿಗಳಲ್ಲಿ)



* ಅಕ್ಟೋಬರ್ 24ರಂದು ಷೇರುಪೇಟೆಗೆ ರಜೆ ಇತ್ತು. ಮಾಹಿತಿ: ಪಿಟಿಐ

ಉದ್ಯೋಗ ಹೆಚ್ಚಿಸಿದ ಕೇಂದ್ರ ಸರ್ಕಾರ: ಮೋದಿ

ನವದೆಹಲಿ(ಪಿಟಿಐ): ಸಾಂಪ್ರದಾಯಿಕ ಹಾಗೂ ಉದಯೋನ್ಮುಖ ಕ್ಷೇತ್ರಗಳಾದ ನವೀಕರಿಸಬಹುದಾದ ಇಂಧನ, ರಕ್ಷಣಾ ಸಾಮಾಗ್ರಿಗಳ ರಫ್ತು ಮತ್ತು ಯಾಂತ್ರಿಕ ರಂಗದಲ್ಲಿ ಭಾರತ ಸರ್ಕಾರ ಉದ್ಯೋಗಾವಕಾಶಗಳನ್ನು ಹೆಚ್ಚಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.


ನರೇಂದ್ರ ಮೋದಿ

ವಿವಿಧ ಸರ್ಕಾರಿ ಇಲಾಖೆಗಳಿಗೆ 'ರೋಜ್‌ಗಾರ್ ಮೇಳ'ದ ಮೂಲಕ ನೇಮಕಗೊಂಡ ಸುಮಾರು 51,000 ಜನರಿಗೆ ವರ್ಚುವಲ್ ಸಮಾರಂಭದಲ್ಲಿ ನೇಮಕಾತಿ ಪತ್ರಗಳನ್ನು ವಿತರಿಸಿ ಅವರು ಮಾತನಾಡಿದರು. ಯುವಜನರ ಕಡೆಗೆ ತಮ್ಮ ಸರ್ಕಾರ ಕ್ಕಿರುವ ಬದ್ಧತೆಯನ್ನು ‘ರೋಜ್‌ಗಾರ್ ಮೇಳ’ ಸಾಬೀತು ಮಾಡಿದೆ ಎಂದು ಮೋದಿ ಹೇಳಿದರು.


‘ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವುದು ಮಾತ್ರವಲ್ಲದೇ, ಸರ್ಕಾರವು ನೇಮಕಾತಿ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುತ್ತಿದೆ. ಪರೀಕ್ಷಾ ವಿಧಾನಗಳನ್ನು ಪುನರ್ ರಚಿಸಲು ಮತ್ತು ಸರಳಗೊಳಿಸಲು ಪ್ರಯತ್ನಿಸುತ್ತಿದೆ’ ಎಂದರು.

‘ಕೇಂದ್ರ ಸರ್ಕಾರ ಮತ್ತು ಬಿಜೆಪಿ ನೇತೃತ್ವದ, ಮಿತ್ರಪಕ್ಷಗಳ ಅಧಿಕಾರವಿರುವ ರಾಜ್ಯಗಳಲ್ಲಿ ಕಳೆದ ವರ್ಷ ಅಕ್ಟೋಬರ್‌ನಿಂದ 'ರೋಜ್‌ಗಾರ್ ಮೇಳ' ಆಯೋಜಿಸುತ್ತಾ ಬರಲಾಗಿದೆ. ಇದುವರೆಗೆ ಲಕ್ಷಾಂತರ ಯುವಕರಿಗೆ ನೇಮಕಾತಿ ಆದೇಶ ಪ್ರತಿಗಳನ್ನು ನೀಡಲಾಗಿದೆ’ ಎಂದು ಮೋದಿ ತಿಳಿಸಿದರು.

‘ಹೊಸ ಅವಕಾಶಗಳನ್ನು ಬಳಸಿಕೊಳ್ಳಲು ಭಾರತವು ತನ್ನ ಯುವಕರಿಗೆ ಶಿಕ್ಷಣ ಒದಗಿಸಿ, ಕೌಶಲ ತರಬೇತಿ ನೀಡಿ ಸಜ್ಜುಗೊಳಿಸುತ್ತಿದೆ. ಅಲ್ಲದೆ ಹಿಂದಿ ಮತ್ತು ಇಂಗ್ಲಿಷ್ ಜತೆಗೆ ದೇಶದ ಇತರ 13 ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ’ ಎಂದು ಅವರು ಹೇಳಿದರು.

ಸಿಹಿ ಕಹಿ ಚಂದ್ರುರಿಂದ ಬಾಯಲ್ಲಿ ನೀರೂರಿಸುವ ಅಡುಗೆಗಳು

ರವಿ ಮಸಾಲೆ ಮತ್ತು ಸ್ಟಾರ್ ಬಜಾರ್ ಸಹಯೋಗದಲ್ಲಿ ‘ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ’ ಪ್ರಸ್ತುತಪಡಿಸಿರುವ ‘ದಿ ಕ್ಯುಸಿನ್ಸ್ ಆಫ್ ಕರ್ನಾಟಕ’ ನಿಮ್ಮನ್ನು ಬೆರಗುಗೊಳಿಸುವುದನ್ನು ನಿಲ್ಲಿಸುವುದಿಲ್ಲ. ಪ್ರತಿ ವರ್ಷ ಪ್ರಸಿದ್ಧ ಬಾಣಸಿಗರು ನಡೆಸಿಕೊಡುವ ಬಹು ನಿರೀಕ್ಷಿತ ಅಡುಗೆ ಪ್ರದರ್ಶನ ಇದಾಗಿದ್ದು, ನಿಮಗೆ ಸಂತೋಷವನ್ನುಂಟು ಮಾಡಲಿದೆ. ಸೆಲೆಬ್ರಿಟಿ ಶೆಫ್ ಸಿಹಿ ಕಹಿ ಚಂದ್ರು ಅವರು ಸಿದ್ಧಪಡಿಸಿದ ಎರಡು ಭಕ್ಷ್ಯಗಳು ಇಲ್ಲಿವೆ.






ವಾಂಗಿ ಬಾತ್

ಪದಾರ್ಥಗಳು

- 4 ಗುಂಟೂರ್ ಖಾರ ಮೆಣಸಿನಕಾಯಿ
- 8 ಬ್ಯಾಡಗಿ ಕೆಂಪು ಮೆಣಸಿನಕಾಯಿ
- 2 ಚಮಚ ದನಿಯಾ ಪುಡಿ
- 1 ಚಮಚ ಉದ್ದಿನಬೇಳೆ
- 1 ಚಮಚ ಕಡಲೆಬೇಳೆ
- 2 ಇಂಚು ದಾಲ್ಚಿನ್ನಿ
- 6 ಲವಂಗಗಳು
- 2 ಏಲಕ್ಕಿಗಳು
- 1 ಮರಾಟ ಮೊಗ್ಗು
- 6 ಬದನೆಕಾಯಿ ಚೂರುಗಳು
- 1 ಸ್ವಲ್ಪ ಕತ್ತರಿಸಿ ಕ್ಯಾಪ್ಸಿಕಂ
- 1 ಕಪ್ ಕತ್ತರಿಸಿದ ಈರುಳ್ಳಿ
- 1/2 ಕಪ್ ತಾಜಾ ಬಟಾಣಿ
- 3 ಚಮಚ ಹುಣಿಸೆಹಣ್ಣಿನ ತಿರುಳು
- 1 ಚೂರು ಬೆಲ್ಲ
- 1 ಕಪ್ ಕೊಬ್ಬರಿ ತುರಿ
- 1 ಚಿಟಿಕೆ ಇಂಗು
- 1/2 ಚಮಚ ಸಾಸಿವೆ
- 2 ಕಪ್ ಅನ್ನ
- 2 ಚಮಚ ತುಪ್ಪ
- 2 ಚಮಚ ಎಣ್ಣೆ
- ಉಪ್ಪು ರುಚಿಗೆ ತಕ್ಕಷ್ಟು

ವಿಧಾನ: ಗುಂಟೂರು ಒಣ ಮೆಣಸಿನ ಕಾಯಿ ಮತ್ತು ಬ್ಯಾಡಗಿ ಕೆಂಪು ಮೆಣಸಿನ ಕಾಯಿ, ದನಿಯಾ, ಉದ್ದಿನಬೇಳೆ, ಕಡಲೆ ಬೇಳೆ, ದಾಲ್ಚಿನ್ನಿ, ಲವಂಗ, ಇಂಗು, ಏಲಕ್ಕಿ, ಮರಾಟ ಮೊಗ್ಗು ಎಲ್ಲವನ್ನು ಹುರಿದುಕೊಳ್ಳಿ. ತಣ್ಣಗಾಗಲು ಬಿಡಿ. ನಂತರ ಹುರಿದ ಪದಾರ್ಥಗಳನ್ನು ಮಿಕ್ಸಿಯಲ್ಲಿ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ.



ಬಾಣಲೆಯಲ್ಲಿ ಎಣ್ಣೆ ಹಾಕಿ, ಬಿಸಿಯಾದ ನಂತರ ಸಾಸಿವೆ ಮತ್ತು ಇಂಗು ಸೇರಿಸಿ. ಸಾಸಿವೆ ಸಿಡಿಯುವವರೆಗೆ ಇದ್ದು, ನಂತರ ಕಡಲೆಬೇಳೆ, ಉದ್ದಿನಬೇಳೆ ಸೇರಿಸಿ. ಗೋಲ್ಡನ್ ಬ್ರೌನ್ ಆಗುವವರೆಗೆ ನೋಡಿಕೊಳ್ಳಿ. ಕತ್ತರಿಸಿದ ಬದನೆಕಾಯಿ ತುಂಡುಗಳು ಹಾಗೂ ತಾಜಾ ಬಟಾಣಿ ಅದರಲ್ಲಿ ಹಾಕಿ ಚೆನ್ನಾಗಿ ಬೇಯುವವರೆಗೆ ಹುರಿಯಿರಿ. ಈಗ ಕತ್ತರಿಸಿಟ್ಟ ಈರುಳ್ಳಿ ಸೇರಿಸಿ. ಈರುಳ್ಳಿ ಪಾರದರ್ಶಕವಾದ ನಂತರ ಕ್ಯಾಪ್ಸಿಕಂ ಚೂರುಗಳನ್ನು ಬೆರೆಸಿ, ಅರ್ಧ ಬೇಯುವವರೆಗೆ ಹುರಿದುಕೊಳ್ಳಿ.

ನಂತರ ಸಿದ್ಧಪಡಿಸಿರುವ ಮಸಾಲೆ ಪದಾರ್ಥಗಳ ಹುಡಿಯನ್ನು ಸೇರಿಸಿ ಪರಿಮಳ ಬರುವವರೆಗೆ ಹುರಿಯಿರಿ. ಇದರಲ್ಲಿ ಹುಣಸೆ ಹುಳಿ ಮತ್ತು ಬೆಲ್ಲವನ್ನು ಸೇರಿಸಿ. ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಬೆಲ್ಲ ಕರಗುವವರೆಗೆ ಬಿಡಿ. ತುರಿದ ಕೊಬ್ಬರಿ ಬೆರೆಸಿ ಚೆನ್ನಾಗಿ ಕಲಸಿ. ದೊಡ್ಡ ಬೇಸಿನ್‌ನಲ್ಲಿ ಅನ್ನವನ್ನು ಹರಡಿ, ತಯಾರಾದ ವಾಂಗಿಬಾತ್ ಗೊಜ್ಜನ್ನು ಹಾಕಿ. ಕತ್ತರಿಸಿದ ಕೊತ್ತಂಬರಿ ಸೊಪ್ಪನ್ನು ಸ್ವಲ್ಪ ಉದುರಿಸಿ, ಎಲ್ಲವೂ ಒಟ್ಟುಗೂಡುವವರೆಗೆ ಮಿಕ್ಸ್ ಮಾಡಿ. ವಾಂಗಿಬಾತ್ ಬಡಿಸಲು ಸಿದ್ಧ.

ತಾಲಿಪೀಟ್

ಪದಾರ್ಥಗಳು: 1 ಕಪ್ ಜೋಳದ ಹಿಟ್ಟು ಮತ್ತು 1 ಕಪ್ ಅಕ್ಕಿ ಹಿಟ್ಟು, 2 ಚಮಚ ಕಡ್ಲೆಹಿಟ್ಟು, 4 ಸಣ್ಣಗೆ ಹೆಚ್ಚಿದ ಹಸಿಮೆಣಸಿನಕಾಯಿ, 1/4 ಕಪ್ ಕತ್ತರಿಸಿದ ಕೊತ್ತಂಬರಿ, 10 ಕತ್ತರಿಸಿದ ಕರಿಬೇವು, 1/4 ಕಪ್ ಕತ್ತರಿಸಿದ ಸಬ್ಬಿಗೆ ಸೊಪ್ಪು, 1/2 ಕಪ್ ಕತ್ತರಿಸಿ ಈರುಳ್ಳಿ, 1/2 ಕಪ್ ತುರಿದ ಕ್ಯಾರೆಟ್, 1/2 ಕಪ್ ತುರಿದ ತೆಂಗಿನಕಾಯಿ, 1 ಚಮಚ ಜೀರಿಗೆ, 3 ಚಮಚ ಎಣ್ಣೆ ರುಚಿಗೆ ತಕ್ಕಷ್ಟು ಉಪ್ಪು

ವಿಧಾನ: ಒಂದು ಮಿಕ್ಸಿಂಗ್ ಬೌಲ್‌ನಲ್ಲಿ ಜೋಳದ ಹಿಟ್ಟನ್ನು ತೆಗೆದುಕೊಳ್ಳಿ, ಎಣ್ಣೆ ಹೊರತು ಪಡಿಸಿ ಉಳಿದ ಎಲ್ಲ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ನೀರನ್ನು ಸ್ವಲ್ಪ ಸ್ವಲ್ಪ ಹಾಕಿಕೊಂಡು ಹದವಾದ ಹಾಗೂ ಮೃದುವಾದ ಹಿಟ್ಟು ಬರುವವರೆಗೆ ಕಲಸಿ. ಕಲಸಿದ ಹಿಟ್ಟಿನ ಸಣ್ಣ ಉಂಡೆಗಳನ್ನು ಮಾಡಿಕೊಂಡು ಬಾಳೆ ಎಲೆ ಅಥವಾ ಪ್ಲಾಸ್ಟಿಕ್ ಹಾಳೆ ಮೇಲೆ ಎಣ್ಣೆ ಸವರಿ ತೆಳ್ಳಗೆ ರೊಟ್ಟಿ ತಟ್ಟುಕೊಳ್ಳಿ. ರೊಟ್ಟಿ ಬಾಂಡ್ಲಿ ಅಥವಾ ರೋಟಿ ತವಾ ಬಿಸಿ ಮಾಡಿಕೊಂಡು ಬಾಳೆ ಎಲೆ ಅಥವಾ ಪ್ಲಾಸ್ಟಿಕ್ ಶೀಟ್ ಮೇಲೆ ತಟ್ಟಿರುವ ರೊಟ್ಟಿಯನ್ನು ತವಾ ಮೇಲೆ ಹಾಕಿ. ನಿಧಾನವಾಗಿ ಪ್ಲಾಸ್ಟಿಕ್ ಹಾಳೆ ಅಥವಾ ಬಾಳೆ ಎಲೆಯನ್ನು ತೆಗೆಯಿರಿ. ಗರಿಗರಿ ತಾಲಿಪೀಟ್ ಆಗುವವರೆಗೆ ನೋಡಿಕೊಳ್ಳಿ. ಇಷ್ಟವಾಗುವ ಚಟ್ನಿ ಜೊತೆ ಗರಿಗರಿ ತಾಲಿಪೀಟ್ ಉಣಬಡಿಸಿ.



ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್‌ಸ್ಪಾಟ್



ಸೋಲಿನ ಸರಪಳಿ ಕಳಚಲು ಇಂಗ್ಲೆಂಡ್ ಪ್ರಯತ್ನ • ಸಚಿನ್ ದಾಖಲೆ ಸಮಗಟ್ಟುವರೇ ವಿರಾಟ್ ಕೊಹ್ಲಿ?

ಅಜೇಯ ಓಟದತ್ತ ಭಾರತ ಚಿತ್ತ

ಪ್ರಜಾವಾಣಿ ವಾರ್ತೆ

ಲಖನೌ: ಆಡಿದ ಐದು ಪಂದ್ಯಗಳನ್ನೂ ಗೆದ್ದು ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ಭಾರತ ತಂಡವು ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಒಂದು ವಾರದ ವಿಶ್ರಾಂತಿಯ ಬಳಿಕ ಕಣಕ್ಕಿಳಿಯುತ್ತಿದೆ.

ಏಕನಾ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್ ವಿರುದ್ಧ ರೋಹಿತ್ ಶರ್ಮಾ ಬಳಗವು ಸೆಣಸಲಿದೆ. ಭಾರತ ತಂಡವು ಸೆಮಿಫೈನಲ್ ಪ್ರವೇಶದ ಹೊಸ್ತಿಲಿಗೆ ಬಂದು ನಿಂತಿದ್ದರೆ, ಇಂಗ್ಲೆಂಡ್ ಹೊರಬೀಳುವ ಹಾದಿಯಲ್ಲಿದೆ.

ಈಚೆಗೆ ಬೆಂಗಳೂರಿನಲ್ಲಿ ಶ್ರೀಲಂಕಾ ವಿರುದ್ಧ ಸೋಲುವ ಮೂಲಕ ಬಟ್ಲರ್ ಬಳಗದ ಅವಕಾಶವು ಕ್ಷೀಣವಾಗಿದೆ. ಒಂದೊಮ್ಮೆ ಭಾರತದ ವಿರುದ್ಧವೂ ಸೋತರೆ ನಾಲ್ಕರ ಘಟ್ಟದ ಕನಸು ನುಚ್ಚುನೂರಾಗುವುದು ಖಚಿತ.

ವಿಶ್ವಕಪ್ ಟೂರ್ನಿಗೂ ಮುನ್ನ ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ತನ್ನ ಬೀಸಾಟದ ಶೈಲಿಯ ಬ್ಯಾಟಿಂಗ್ ಮೂಲಕ ಎಲ್ಲ ತಂಡಗಳಿಗೂ ನಡುಕ ಮೂಡಿಸಿದ್ದ ಇಂಗ್ಲೆಂಡ್ ಇಲ್ಲಿ ಪೇಲವವಾಗಿದೆ. ಅಫ್ಗಾನಿಸ್ತಾನದ ಎದುರು ಕೂಡ ಆಘಾತ ಅನುಭವಿಸಿದೆ.

ಅನುಭವಿ ಮತ್ತು ಉತ್ತಮ ದಾಖಲೆಗಳನ್ನು ಹೊಂದಿರುವ ಆಟಗಾರರಿದ್ದರೂ ಇಂಗ್ಲೆಂಡ್ ಈಗ ಟೂರ್ನಿಯಿಂದ ಹೊರಬೀಳುವ ಆತಂಕ ಎದುರಿಸುತ್ತಿದೆ.

ಆದರೆ ಇನ್ನೊಂದೆಡೆ ತವರಿನಂಗಳದಲ್ಲಿ ರೋಹಿತ್ ಬಳಗವು ಅಮೋಘ ಆಟವಾಡುತ್ತಿದೆ. ಮೊದಲ ಪಂದ್ಯದಿಂದಲೂ ತನ್ನ ಯೋಜನೆಗಳನ್ನು ಅಚ್ಚುಕಟ್ಟಾಗಿ ಜಾರಿಗೊಳಿಸುತ್ತಿದೆ.

ರೋಹಿತ್ ಶರ್ಮಾ ಲಯಕ್ಕೆ ಮರಳಿರುವುದು ಉತ್ತಮ ಆರಂಭ ದೊರೆಯುತ್ತಿದೆ. ಯುವ ಆಟಗಾರ ಶುಭಮನ್ ಗಿಲ್ ತಮ್ಮ ನೈಜ ಆಟಕ್ಕೆ ಮರಳಿದರೆ ಬೌಲರ್‌ಗಳು ಪರದಾಡಬೇಕಾಗಬಹುದು.

ಇಂಗ್ಲೆಂಡ್ ತಂಡದ ಬೌಲರ್‌ಗಳಿಗೆ ನಿಜಕ್ಕೂ ದೊಡ್ಡ ಸವಾಲೆಂದರೆ ವಿರಾಟ್ ಕೊಹ್ಲಿಯನ್ನು ಕಟ್ಟಿಹಾಕುವುದು. ಸಚಿನ್ ತೆಂಡೂಲ್ಕರ್ (49 ಶತಕ) ಅವರ ದಾಖಲೆಯನ್ನು ಸರಿಗಟ್ಟುವುದರ ಮೇಲೆ ಕಣ್ಣಿಟ್ಟಿರುವ 'ಚೇಸಿಂಗ್ ಮಾಸ್ಟರ್' ವಿರಾಟ್ ಇದುವರೆಗೆ ಒಟ್ಟು 354 ರನ್‌ಗಳನ್ನು ಪೇರಿಸಿದ್ದಾರೆ. ಕಳೆದ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ವಿರಾಟ್ 95 ರನ್ ಗಳಿಸಿದ್ದರು. ಇನ್ನೈದು ರನ್ ಹೊಡೆದಿದ್ದರೆ ಸಚಿನ್ ದಾಖಲೆಯನ್ನು ಮುಟ್ಟುತ್ತಿದ್ದರು.

ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ ಕೂಡ ಉತ್ತಮ ಲಯದಲ್ಲಿದ್ದಾರೆ. ಆದರೆ ಹಾರ್ದಿಕ್ ಪಾಂಡ್ಯ ಅನುಪಸ್ಥಿತಿಯಲ್ಲಿ ಸೂರ್ಯಕುಮಾರ್ ಯಾದವ್ ಅವರಿಗೆ ತಮ್ಮ ವೈಫಲ್ಯದ ಪೊರೆಯನ್ನು ಕಳಚಿಕೊಳ್ಳಲು ಇಲ್ಲೊಂದು ಅವಕಾಶ ಸಿಗಲಿದೆ. ಕಳೆದ ಪಂದ್ಯದಲ್ಲಿ ಅವರು ಕೇವಲ 2 ರನ್ ಗಳಿಸಿದ್ದರು.

ಬಲಾಬಲ

ಏಕದಿನ ವಿಶ್ವಕಪ್

ಪಂದ್ಯ	8
ಇಂಗ್ಲೆಂಡ್ ಜಯ	4
ಭಾರತ ಜಯ	3
ಟೈ	1

ಏಕದಿನ ಕ್ರಿಕೆಟ್

ಪಂದ್ಯ	106
ಭಾರತ ಜಯ	57
ಇಂಗ್ಲೆಂಡ್ ಜಯ	44
ಟೈ	2
ಫಲಿತಾಂಶವಿಲ್ಲ	3



ಅಭ್ಯಾಸದ ಸಂದರ್ಭದಲ್ಲಿ ರಗ್ಬಿ ಆಡಿದ ಇಂಗ್ಲೆಂಡ್ ಆಟಗಾರರಾದ ಬೆನ್ ಸ್ಟೋಕ್ಸ್ ಮತ್ತು ಹ್ಯಾರಿ ಬ್ರೂಕ್ –ಪಿಟಿಐ ಚಿತ್ರ



ಅಶ್ವಿನ್‌ಗೆ ಅವಕಾಶ?

ಲಖನೌ ಅಂಗಣವು ಸ್ಪಿನ್ ಬೌಲರ್‌ಗಳಿಗೆ ಹೆಚ್ಚು ಅವಕಾಶ ನೀಡುವ ಸಾಧ್ಯತೆ ಇದೆ. ಅದರಿಂದಾಗಿ ಶಾರ್ದೂಲ್ ಠಾಕೂರ್ ಬದಲಿಗೆ ಅಶ್ವಿನ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ. ಕುಲದೀಪ್ ಮತ್ತು ಜಡೇಜ ಜೊತೆಗೆ ಅವರು ಸ್ಪಿನ್ ದಾಳಿ ಸಂಘಟಿಸಬಹುದು. ಕಿವೀಸ್ ಎದುರು ಐದು ವಿಕೆಟ್ ಗಳಿಸಿದ್ದ ಮೊಹಮ್ಮದ್ ಶಮಿ ಅವರಿಗಾಗಿ ಮೊಹಮ್ಮದ್ ಸಿರಾಜ್ ಬೆಂಚ್ ಕಾಯಬೇಕಾಗಬಹುದು. ಈ ಬೌಲರ್‌ಗಳ ಪಡೆಯನ್ನು ಎದುರಿಸಲು ನಾಯಕ ಬಟ್ಲರ್, ಜಾನಿ ಬೆಸ್ಟೊ, ಡೇವಿಡ್ ಮಲಾನ್, ಜೋ ರೂಟ್ ಮತ್ತು ಬೆನ್ ಸ್ಟೋಕ್ಸ್ ಅವರು ಸಿದ್ಧವಾಗಬೇಕಿದೆ.



ಅಭ್ಯಾಸನಿರತ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಸೂರ್ಯಕುಮಾರ್ ಯಾದವ್, ರವೀಂದ್ರ ಜಡೇಜ, ಕುಲದೀಪ್ ಯಾದವ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಮೊಹಮ್ಮದ್ ಶಮಿ, ಇಶಾನ್ ಕಿಶನ್, ಆರ್. ಅಶ್ವಿನ್.
ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ–ವಿಕೆಟ್‌ಕೀಪರ್), ಜಾನಿ ಬೆಸ್ಟೊ, ಡೇವಿಡ್ ಮಲಾನ್, ಜೋ ರೂಟ್, ಬೆನ್ ಸ್ಟೋಕ್ಸ್, ಹ್ಯಾರಿ ಬ್ರೂಕ್, ಡೇವಿಡ್ ವಿಲಿ, ಆದಿಲ್ ರಶೀದ್, ಕ್ರಿಸ್ ವೋಕ್ಸ್, ಗಸ್ ಅಟ್ಕಿನ್ಸನ್, ಮಾರ್ಕ್ ವುಡ್, ಬ್ರೈಡನ್ ಕೇರ್ಸ್, ಮೋಯಿನ್ ಆಲಿ, ಲಿಯಾಮ್ ಲಿವಿಂಗ್‌ಸ್ಟೋನ್, ಸ್ಯಾಮ್ ಕರನ್.
ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ದಕ್ಷಿಣ ಆಫ್ರಿಕಾ	6	5	1	0	10	2.032
ಭಾರತ	5	5	0	0	10	1.353
ನ್ಯೂಜಿಲೆಂಡ್	6	4	2	0	8	1.232
ಆಸ್ಟ್ರೇಲಿಯಾ	6	4	2	0	8	0.970
ಶ್ರೀಲಂಕಾ	5	2	3	0	4	-0.205
ಪಾಕಿಸ್ತಾನ	6	2	4	0	4	-0.387
ಅಫ್ಗಾನಿಸ್ತಾನ	5	2	3	0	4	-0.969
ನೆದರ್ಲೆಂಡ್ಸ್	6	2	4	0	4	-1.277
ಬಾಂಗ್ಲಾದೇಶ	6	1	5	0	2	-1.338
ಇಂಗ್ಲೆಂಡ್	5	1	4	0	2	-1.634

ಶಮ್ಸಿ ನಾಟ್‌ಔಟ್ ನಿರ್ಣಯ; ಅಸಮಾಧಾನ

ಬೆಂಗಳೂರು: ಕ್ರಿಕೆಟ್ ಪಂದ್ಯಗಳಲ್ಲಿ ಅಂಪೈರ್‌ಗೆ ನೀಡಲಾಗಿರುವ ಸ್ವಯಂಪ್ರೇರಿತ ಮರುಪರಿಶೀಲನಾ ಹಕ್ಕು ರದ್ದುಗೊಳಿಸಬೇಕು ಎಂದು ಪಾಕಿಸ್ತಾನ ಕ್ರಿಕೆಟಿಗ ಮಿಸ್ಬಾ ಉಲ್ ಹಕ್ ಒತ್ತಾಯಿಸಿದ್ದಾರೆ.

ಚೆನ್ನೈನಲ್ಲಿ ಶುಕ್ರವಾರ ರೋಚಕ ಅಂತ್ಯ ಕಂಡ ವಿಶ್ವಕಪ್ ಪಂದ್ಯದ ನಿರ್ಣಾಯಕ ಘಟ್ಟದಲ್ಲಿ ದಕ್ಷಿಣ ಆಫ್ರಿಕಾ ತಂಡದ ಕೊನೆಯ ಬ್ಯಾಟರ್ ತಬ್ರೇಜ್ ಶಮ್ಸಿ ಅವರ ಎಲ್‌ಬಿಡಬ್ಲ್ಯು ಅಪೀಲ್‌ಗೆ ನಾಟ್‌ಔಟ್ ನೀಡಿದ್ದು ಈಗ ವಿವಾದಕ್ಕೆ ಕಾರಣವಾಗಿದೆ.

ಆದರೆ ಅಂಪೈರ್ ಗಳು ನಾಟ್‌ಔಟ್ ನೀಡಿದ್ದನ್ನು ಪಾಕಿಸ್ತಾನ ತಂಡವು ಯುಡಿಆರ್‌ಎಸ್‌ನಲ್ಲಿ ಮರುಪರಿಶೀಲನೆಗೆ ಮನವಿ ಸಲ್ಲಿಸಿತ್ತು. ಮೂರನೇ ಅಂಪೈರ್ ಮರುಪರಿಶೀಲನೆ ಮಾಡಿ ನಾಟ್‌ಔಟ್ ನೀಡಿದ್ದರು. ನಂತರ ದಕ್ಷಿಣ ಆಫ್ರಿಕಾ ತಂಡವು 1 ವಿಕೆಟ್ ಜಯ ಗಳಿಸಿತ್ತು. ಪಾಕ್ ತಂಡಕ್ಕೆ ಸೆಮಿಫೈನಲ್ ಅವಕಾಶ ಜೀವಂತವಾಗುಳಿಯಲು ಈ ಪಂದ್ಯದಲ್ಲಿ ಜಯಗಳಿಸುವ ಅಗತ್ಯವಿತ್ತು.

ಈ ಬಗ್ಗೆ ಎಕ್ಸ್ (ಟ್ವಿಟರ್)ನಲ್ಲಿ ಮಿಸ್ಬಾ, ದಕ್ಷಿಣ ಆಫ್ರಿಕಾದ ಗ್ರೇಮ್ ಸ್ಮಿತ್ ಮತ್ತು ಭಾರತದ ಹರಭಜನ್ ಸಿಂಗ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕೆಟ್ಟ ಅಂಪೈರಿಂಗ್ ಮತ್ತು ದೋಷಯುಕ್ತ ನಿಯಮಗಳಿಂದಾಗಿ ಪಾಕಿಸ್ತಾನ ಸೋತಿತು. ಐಸಿಸಿಯು ಈ ನಿಯಮ ಬದಲಿಸಲು ಕ್ರಮ ಕೈಗೊಳ್ಳಬೇಕು. ಚೆಂಡು ಸ್ಟಂಪ್‌ಗೆ ನೇರವಾಗಿದ್ದರೂ ಅಂಪೈರ್‌ಗಳೂ ಔಟ್ ಕೊಟ್ಟಿಲ್ಲ. ಇನ್ನು ತಂತ್ರಜ್ಞಾನದ ಅವಶ್ಯಕತೆಯಾದರೂ ಏನು?' ಎಂದು ಹರಭಜನ್ ಹೇಳಿದ್ದಾರೆ.

ಹಿಮದಂಗಳದಲ್ಲಿ ರನ್ ಪ್ರವಾಹ; ಹೆಡ್–ವಾರ್ನರ್ ಶತಕ ಜೊತೆಯಾಟ; ಮನಗೆದ್ದ ಕಿವೀಸ್ ಆಟ

ಪ್ಯಾಟ್ ಕಮಿನ್ಸ್ ಬಳಗಕ್ಕೆ ರೋಚಕ ಜಯ

ಧರ್ಮಶಾಲಾ (ಪಿಟಿಐ): ಹಿಮಾಲಯದ ಅಂಗಣದಲ್ಲಿ ಶನಿವಾರ ಮುಸ್ಸಂಜೆ ಆಸ್ಟ್ರೇಲಿಯಾ ತಂಡವು ರೋಚಕ ಜಯ ಸಾಧಿಸಿತು. ನ್ಯೂಜಿಲೆಂಡ್ ತಂಡವು ಕ್ರಿಕೆಟ್ ಪ್ರೇಮಿಗಳ ಮನ ಗೆದ್ದಿತು.

ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿದ್ದ ವಿಶ್ವಕಪ್ ಪಂದ್ಯದಲ್ಲಿ ಆಸ್ಟ್ರೇಲಿಯಾ 5 ರನ್‌ಗಳಿಂದ ಜಯಿಸಿತು. ಅದಕ್ಕೆ ಟ್ರಾವಿಸ್ ಹೆಡ್ (67 ಎಸೆತದಲ್ಲಿ 109) ಅಬ್ಬರದ ಶತಕ ಪ್ರಮುಖ ಕಾರಣವಾಯಿತು. 389 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ನ್ಯೂಜಿಲೆಂಡ್ ಹೋರಾಟಕ್ಕೆ ಬೆಂಗಳೂರು ಹುಡುಗ ರಚಿನ್ (89 ಎಸೆತಗಳಲ್ಲಿ 116) ತಮ್ಮ ಶತಕದ ಮೂಲಕ ಬಲ ತುಂಬಿದರು. ಉಳಿದ ಬ್ಯಾಟರ್‌ಗಳೂ ತಂಡವನ್ನು ಗೆಲುವಿನ ಗಡಿ ದಾಟಿಸುವ ಪ್ರಯತ್ನ ಮಾಡಿದರು. ಆದರೂ ಕೊನೆಯ ಓವರ್‌ನಲ್ಲಿ 19 ರನ್‌ಗಳ ಅಗತ್ಯವಿದ್ದಾಗ ಕಿವೀಸ್ ತಂಡದಲ್ಲಿ ಎರಡು ವಿಕೆಟ್‌ಗಳು ಮಾತ್ರ ಬಾಕಿ ಇದ್ದವು. ಜಿಮ್ಮಿ ನಿಶಾಮ್ (58; 39ಎ) ಕ್ರೀಸ್‌ನಲ್ಲಿ ಇದ್ದರು.

ಈ ಓವರ್ ಅನ್ನು ಅನುಭವಿ ಬೌಲರ್ ಮಿಚೆಲ್ ಸ್ಟಾರ್ಕ್ ಬೌಲಿಂಗ್ ಮಾಡಿದರು. ಕೆಲವು ನಾಟಕೀಯ ಪ್ರಸಂಗಗಳು ಈ ಓವರ್‌ನಲ್ಲಿ ನಡೆದವು. ಸ್ಟಾರ್ಕ್ ಹಾಕಿದ ವೈಡ್ ಎಸೆತ ಬೌಂಡರಿಗೆರೆ ದಾಟಿತು. ಇದರಿಂದಾಗಿ ಕಿವೀಸ್ ಬಳಗದಲ್ಲಿ ಸಂತಸ ಹೊನಲಾಯಿತು. ಆದರೆ ಇದರಿಂದ ಎದೆಗುಂದದ ಆಸ್ಟ್ರೇಲಿಯಾ ಆಟಗಾರರು ಚುರುಕಾದ ಫೀಲ್ಡಿಂಗ್ ಮಾಡಿ ರನ್‌ಗಳನ್ನು ತಡೆದರು. ಇದೇ ಓವರ್‌ನಲ್ಲಿ ನಿಶಾಮ್ ಅವರನ್ನು ರನೌಟ್ ಮಾಡಿದ ಫೀಲ್ಡರ್ ಲಾಬುಷೇನ್ ಮತ್ತು ವಿಕೆಟ್‌ಕೀಪರ್ ಜೋಷ್ ಇಂಗ್ಲಿಷ್ ಕಿವೀಸ್‌ಗೆ ಬಲವಾದ ಪೆಟ್ಟು ಕೊಟ್ಟರು. ಆಗಲೂ ಕೊನೆಯ ಎಸೆತದಲ್ಲಿ ಆರು ರನ್ ಅಗತ್ಯವಿತ್ತು. ಬ್ಯಾಟರ್ ಫರ್ಗ್ಯುಸನ್ ಅವರಿಗೆ ಸಿಕ್ಸರ್ ಹೊಡೆಯಲು ಸ್ಟಾರ್ಕ್ ಬಿಡಲಿಲ್ಲ.

19 ಓವರ್ 175 ರನ್: ಬೆಳಿಗ್ಗೆ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ನ್ಯೂಜಿಲೆಂಡ್ ತಂಡವು ಆಸ್ಟ್ರೇಲಿಯಾದ ಆರಂಭಿಕ ಜೋಡಿ ಟ್ರಾವಿಸ್ ಹೆಡ್ ಮತ್ತು ಡೇವಿಡ್ ವಾರ್ನರ್(65ಎಸೆತಗಳಲ್ಲಿ 81) ಅವರಿಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ 175 ರನ್ ಗಳಿಸಿದರು. ಅದೂ ಕೇವಲ 19 ಓವರ್‌ಗಳಲ್ಲಿ. ಈ ಅಡಿಪಾಯದ ಮೇಲೆ ಆಸ್ಟ್ರೇಲಿಯಾ 388 ರನ್‌ಗಳ ಬೃಹತ್ ಮೊತ್ತ ಪೇರಿಸಿತು.

ಗಾಯದಿಂದ ಚೇತರಿಸಿಕೊಂಡು ಮರಳಿದ ನಂತರ ಟ್ರಾವಿಸ್ ಆಡಿದ ಮೊದಲ ಪಂದ್ಯ ಇದು. ಅವರು ವಾರ್ನರ್‌ಗಿಂತ ವೇಗವಾಗಿ ಆಡಿದರು. 25 ಎಸೆತಗಳಲ್ಲಿ 50 ರನ್ ಗಳಿಸಿದರು. ನಂತರ ಶತಕದತ್ತ ವೇಗವಾಗಿ ಸಾಗಿದರು. ಏಕದಿನ ಕ್ರಿಕೆಟ್‌ನಲ್ಲಿ ಇದು ಅವರ 4ನೇ ಶತಕ. ಟೂರ್ನಿಯಲ್ಲಿ ಮೂರನೇ ಶತಕ ದಾಖಲಿಸುವ ವಾರ್ನರ್ ಆಸೆ ಈಡೇರಲಿಲ್ಲ. ಇವರ ಜೊತೆಯಾಟವನ್ನು 20ನೇ ಓವರ್ ಬೌಲಿಂಗ್ ಮಾಡಿದ ಗ್ಲೆನ್ ಫಿಲಿಪ್ಸ್ ಮುರಿದರು. ಅವರ ಬೌಲಿಂಗ್‌ಗೆ ವಾರ್ನರ್ ಔಟ್ ಆದರು. ಮೂರು ಓವರ್‌ಗಳ ನಂತರ ಹೆಡ್ ವಿಕೆಟ್ ಕೂಡ ಉರುಳಿಸಿದ ಗ್ಲೆನ್ ಸಂಭ್ರಮಿಸಿದರು.

ಆದರೆ ಉಳಿದ ಬ್ಯಾಟರ್‌ಗಳು ಸಣ್ಣ ಸಣ್ಣ ಇನಿಂಗ್ಸ್ ಆಡಿದರೂ ತಂಡವು ಬೃಹತ್ ಮೊತ್ತ ಗಳಿಸಲು ಕಾರಣರಾದರು.

ರಚಿನ್ ಶತಕ: ಗುರಿ ಬೆನ್ನಟ್ಟಿದ ಕಿವೀಸ್‌ಗೂ ಡೆವೊನ್ ಕಾನ್ವೆ ಮತ್ತು ವಿಲ್ ಯಂಗ್ ಉತ್ತಮ ಆರಂಭ ನೀಡಿದರು. ಆದರೆ ತಂಡದ ಮೊತ್ತವೂ 72 ರನ್‌ಗಳಾಗಿದ್ದಾಗ ಇವರಿಬ್ಬರೂ ಪೆವಿಲಿಯನ್ ಸೇರಿದ್ದರು.

ಈ ಹಂತದಲ್ಲಿ ರಚಿನ್ ಮತ್ತು ಡೆರಿಲ್ ಮಿಚೆಲ್ (54) ಮೂರನೇ ವಿಕೆಟ್ ಜೊತೆಯಾಟದಲ್ಲಿ 96 ರನ್ ಸೇರಿಸಿದರು. ರಚಿನ್ ವಿಶ್ವಕಪ್ ಟೂರ್ನಿಯಲ್ಲಿ ಎರಡನೇ ಶತಕ ದಾಖಲಿಸಿದರು. ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಟಾಮ್ ಲಥಾಮ್ ಜೊತೆಗೆ 55 ರನ್ ಗಳಿಸಿದರು. ಆದರೆ, ಇನ್ನೊಂದೆಡೆ ಆಸ್ಟ್ರೇಲಿಯಾ ಬೌಲರ್‌ಗಳು ಪ್ರಮುಖ ಘಟ್ಟಗಳಲ್ಲಿ ವಿಕೆಟ್‌ಗಳನ್ನು ಉರುಳಿಸಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 49.2 ಓವರ್‌ಗಳಲ್ಲಿ 388 (ಡೇವಿಡ್ ವಾರ್ನರ್ 81, ಟ್ರಾವಿಸ್ ಹೆಡ್ 109, ಮಿಚೆಲ್ ಮಾರ್ಷ್ 36, ಗ್ಲೆನ್ ಮ್ಯಾಕ್ಸ್‌ವೆಲ್ 41, ಜೋಷ್ ಇಂಗ್ಲಿಷ್ 38, ಪ್ಯಾಟ್ ಕಮಿನ್ಸ್ 37, ಟ್ರೆಂಟ್ ಬೌಲ್ಟ್ 77ಕ್ಕೆ3, ಮಿಚೆಲ್ ಸ್ಯಾಂಟನರ್ 80ಕ್ಕೆ2, ಗ್ಲೆನ್ ಫಿಲಿಪ್ಸ್ 37ಕ್ಕೆ3, ಜಿಮ್ಮಿ ನಿಶಾಮ್ 32ಕ್ಕೆ1, ಮ್ಯಾಟ್ ಹೆನ್ರಿ 67ಕ್ಕೆ1) ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 383 (ಡೆವೊನ್ ಕಾನ್ವೆ 28, ವಿಲ್ ಯಂಗ್ 32, ರಚಿನ್ ರವೀಂದ್ರ 116, ಡೆರಿಲ್ ಮಿಚೆಲ್ 54, ಟಾಮ್ ಲಥಾಮ್ 21, ಜೇಮ್ಸ್ ನಿಶಾಮ್ 58, ಮಿಚೆಲ್ ಸ್ಯಾಂಟನರ್ 17, ಟ್ರೆಂಟ್ ಬೌಲ್ಟ್ ಔಟಾಗದೆ 10, ಜೋಷ್ ಹ್ಯಾಜಲ್‌ವುಡ್ 70ಕ್ಕೆ2, ಪ್ಯಾಟ್ ಕಮಿನ್ಸ್ 66ಕ್ಕೆ2, ಆ್ಯಡಂ ಜಂಪಾ 74ಕ್ಕೆ3) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 5 ರನ್‌ಗಳ ಜಯ



ಆಸ್ಟ್ರೇಲಿಯಾ ತಂಡದ ಟ್ರಾವಿಸ್ ಹೆಡ್ ಅವರ ಶತಕ ಸಂಭ್ರಮ –ಪಿಟಿಐ ಚಿತ್ರ

771 ರನ್, 19 ವಿಕೆಟ್!

ಸಾಂಪ್ರದಾಯಿಕ ಎದುರಾಳಿಗಳಾಗಿರುವ ಉಭಯ ತಂಡಗಳ ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಒಟ್ಟು 771 ರನ್‌ಗಳು ಹರಿದವು. ಇದೇ ಟೂರ್ನಿಯಲ್ಲಿ ಅಕ್ಟೋಬರ್ 7ರಂದು ನವದೆಹಲಿಯಲ್ಲಿ ದಕ್ಷಿಣ ಆಫ್ರಿಕಾ (428) ಮತ್ತು ಶ್ರೀಲಂಕಾ (326) ನಡುವಣ ಪಂದ್ಯದಲ್ಲಿ ಒಟ್ಟು 754 ರನ್‌ಗಳು ದಾಖಲಾಗಿದ್ದವು.

ಅಲ್ಲದೇ ಈ ಪಂದ್ಯದಲ್ಲಿ ಒಟ್ಟು 19 ವಿಕೆಟ್‌ಗಳೂ ಪತನವಾದವು.

ಆಸ್ಟ್ರೇಲಿಯಾಕ್ಕೆ 100ನೇ ಪಂದ್ಯ

ನ್ಯೂಜಿಲೆಂಡ್ ವಿರುದ್ಧದ ಪಂದ್ಯದ ಮೂಲಕ ಆಸ್ಟ್ರೇಲಿಯಾ ತಂಡ ಏಕದಿನ ವಿಶ್ವಕಪ್‌ನಲ್ಲಿ 100 ಪಂದ್ಯಗಳನ್ನಾಡಿದ ಮೊದಲ ತಂಡ ಎಂಬ ಸಾಧನೆ ಮಾಡಿತು. ಇದರಲ್ಲಿ 73 ಪಂದ್ಯಗಳನ್ನು ಗೆದ್ದಿದೆ. ವಿಶ್ವಕಪ್‌ನಲ್ಲಿ ಹೆಚ್ಚು ಪಂದ್ಯಗಳನ್ನಾಡಿದ ತಂಡಗಳಲ್ಲಿ ನ್ಯೂಜಿಲೆಂಡ್ (95) ಮತ್ತು ಭಾರತ (89) ಬಳಿಕದ ಸ್ಥಾನಗಳಲ್ಲಿವೆ.

ಡಚ್ಚರ ಆಟಕ್ಕೆ ಬಾಂಗ್ಲಾದೇಶ ತಂಡ ಪೆಚ್ಚು

ಕೋಲ್ಕತ್ತ (ಪಿಟಿಐ): ನೆದರ್ಲೆಂಡ್ಸ್ ತಂಡವು ತನಗಿಂತಲೂ ಹೆಚ್ಚು ಅನುಭವಿಯಾಗಿರುವ ಬಾಂಗ್ಲಾದೇಶಕ್ಕೆ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಸೋಲಿನ ಕಹಿಯುಣಿಸಿತು.

ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ನಾಯಕ ಸ್ಕಾಟ್ ಎಡ್ವರ್ಡ್ಸ್ (68; 89ಎ, 4X6) ಅರ್ಧಶತಕ ಮತ್ತು ಪಾಲ್ ವ್ಯಾನ್ ಮೀಕರನ್ (23ಕ್ಕೆ4) ಅವರ ಉತ್ತಮ ಬೌಲಿಂಗ್ ಬಲದಿಂದ 87 ರನ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಡಚ್ ಬಳಗವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 50 ಓವರ್‌ಗಳಲ್ಲಿ 229 ರನ್ ಗಳಿಸಿ ಆಲೌಟ್ ಆಯಿತು. ಅದಕ್ಕುತ್ತರವಾಗಿ ಬಾಂಗ್ಲಾ ತಂಡಕ್ಕೆ 42.2 ಓವರ್‌ಗಳಲ್ಲಿ 142 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಬಾಂಗ್ಲಾ ತಂಡದ ಬ್ಯಾಟರ್‌ಗಳು ಕಳಪೆ ಆಟವಾಡಿದರು. ಸಾಧಾರಣ ಮೊತ್ತವನ್ನು ಮುಟ್ಟುವಲ್ಲಿ ವಿಫಲರಾದರು. ಬಲಗೈ ವೇಗಿ ಪಾಲ್ ಅವರು ಪ್ರಮುಖ ಬ್ಯಾಟರ್‌ಗಳಾದ ನಜ್ಮುಲ್ ಹುಸೇನ್ ಶಾಂತೊ, ನಾಯಕ ಶಕೀಬ್ ಅಲ್ ಹಸನ್, ಮುಸ್ತಫಿಜುರ್ ರಹೀಮ್ ಮತ್ತು ತಸ್ಕಿನ್ ಅಹಮದ್ ಅವರ ವಿಕೆಟ್‌ಗಳನ್ನು ಕಬಳಿಸಿದರು. ಇದರಿಂದಾಗಿ ಬಾಂಗ್ಲಾ ತಂಡವು ಅಲ್ಪಮೊತ್ತಕ್ಕೆ ಕುಸಿಯಿತು.

ಆರನೇ ಪಂದ್ಯವಾಡಿದ ನೆದರ್ಲೆಂಡ್ಸ್ ತಂಡಕ್ಕೆ ಇದು ಎರಡನೇ ಜಯ. 11 ದಿನಗಳ ಹಿಂದೆ ಬಲಿಷ್ಠ ದಕ್ಷಿಣ ಆಫ್ರಿಕಾ ತಂಡವನ್ನು ಡಚ್ಚರ ಪಡೆ ಮಣಿಸಿತ್ತು.

ಬಾಂಗ್ಲಾ ತಂಡಕ್ಕೆ ಇದು ಸತತ ಐದನೇ ಸೋಲು. ಇದರೊಂದಿಗೆ ಸೆಮಿಫೈನಲ್ ಪ್ರವೇಶಿಸುವ ತಂಡದ ಆಸೆ ಕಮರಿತು.

ಸಂಕ್ಷಿಪ್ತ ಸ್ಕೋರು: ನೆದರ್ಲೆಂಡ್ಸ್: 50 ಓವರ್‌ಗಳಲ್ಲಿ 229 (ವೆಸ್ಲಿ ಬರೆಸಿ 41, ಸ್ಕಾಟ್ ಎಡ್ವರ್ಡ್ಸ್ 68, ಸೈಬ್ರಾಂಡ್ ಎಂಗೆಲ್‌ಬ್ರೆಕ್ಟ್ 35, ವ್ಯಾನ್ ಬೀಕ್ ಔಟಾಗದೆ 23, ಶೊರಿಫುಲ್ ಇಸ್ಲಾಂ 51ಕ್ಕೆ2, ತಸ್ಕಿನ್ ಅಹಮದ್ 43ಕ್ಕೆ2, ಮುಸ್ತಫಿಜುರ್ ರೆಹಮಾನ್ 36ಕ್ಕೆ2, ಮೆಹದಿ ಹಸನ್ 40ಕ್ಕೆ2) ಬಾಂಗ್ಲಾದೇಶ: 42.2 ಓವರ್‌ಗಳಲ್ಲಿ 142 (ಮೆಹದಿ ಹಸನ್ 35, ಮಹಮುದುಲ್ಲಾ 20, ಮುಸ್ತಫಿಜುರ್ ರೆಹಮಾನ್ 20, ಪಾಲ್ ವ್ಯಾನ್ ಮಿಕರನ್ 23ಕ್ಕೆ4)



ನೆದರ್ಲೆಂಡ್ಸ್ ತಂಡದ ಪಾಲ್ ವ್ಯಾನ್ ಮೀಕರನ್ ಬೌಲಿಂಗ್ –ಪಿಟಿಐ ಚಿತ್ರ

36.42 ಕೋಟಿ ಮಂದಿ ವೀಕ್ಷಣೆ

ಭಾರತದ ಆತಿಥ್ಯದಲ್ಲಿ ನಡೆಯುತ್ತಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಮೊದಲ 18 ಪಂದ್ಯಗಳನ್ನು 36.42 ಕೋಟಿ ಜನರು ಟೆಲಿವಿಷನ್‌ನಲ್ಲಿ ವೀಕ್ಷಿಸಿದ್ದಾರೆ. ಇದು ನೂತನ ದಾಖಲೆಯಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದಾರೆ.

ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ವೀಕ್ಷಣೆಯ ಅವಧಿಯು ಶೇ 43ರಷ್ಟು ಏರಿಕೆಯಾಗಿದೆ. ಇದು ಭಾರತೀಯ ಕ್ರಿಕೆಟ್ ಅಭಿಮಾನಿಗಳ ಶಕ್ತಿ ಎಂದೂ ಜಯ್ ಶಾ ಹೇಳಿದ್ದಾರೆ.

ಚೆಸ್: ವಿದಿತ್‌ಗೆ ಎರಡನೇ ಗೆಲುವು

ಐಲ್ ಆಫ್ ಮ್ಯಾನ್ (ಯುಕೆ): ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ಸಾಧಿಸಿದರು.

ಶನಿವಾರ ನಡೆದ ಮೂರನೇ ಪಂದ್ಯದಲ್ಲಿ ತಮ್ಮ ತಾಂತ್ರಿಕ ಕೌಶಲ ಮೆರೆದ ವಿದಿತ್, ಜರ್ಮನಿಯ ದಿಮಿತ್ರಿ ಕೊಲರ್ಸ್ ಅವರನ್ನು ಮಣಿಸಿದರು. ಮೊದಲ ಪಂದ್ಯದಲ್ಲಿ ಸೋತಿದ್ದ ವಿದಿತ್, ಎರಡನೇ ಪಂದ್ಯದಲ್ಲಿ ಸ್ವದೇಶದ ಅಭಿಜಿತ್ ಗುಪ್ತಾ ಅವರನ್ನು ಪರಾಭವಗೊಳಿಸಿದ್ದರು.

ಇನ್ನೊಂದು ಪಂದ್ಯದಲ್ಲಿ ಅರ್ಜುನ್ ಇರಿಗೇಶಿ ಅವರು ಸರ್ಬಿಯದ ಅಲೆಕ್ಸಿ ಸರಾನ ಅವರೊಂದಿಗೆ ಡ್ರಾ ಮಾಡಿಕೊಂಡರು.

ಮಹಿಳೆಯರ ವಿಭಾಗದಲ್ಲಿ ಆರ್. ವೈಶಾಲಿ ಚಾಣಾಕ್ಷ ನಡೆಗಳ ಮೂಲಕ ಲೆಯಾ ಗರಿಫುಲಿನಾ ಅವರನ್ನು ಸೋಲಿಸಿದರು. 2.5 ಪಾಯಿಂಟ್ಸ್‌ಗಳೊಂದಿಗೆ ಅವರು ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.


ಎಸ್.ಎಲ್. ನಾರಾಯಣನ್ ಮತ್ತು ಅರವಿಂದ ಚಿದಂಬರಂ ತಮ್ಮ ಎದುರಾಳಿಗಳ ಜತೆ ಪಾಯಿಂಟ್ಸ್ ಹಂಚಿಕೊಂಡರು.

ಪ್ರಜಾವಾಣಿ
ಭಾನುವಾರದ ಪುರವಣಿ
1
ಭಾನುವಾರ, 29 ಅಕ್ಟೋಬರ್ 2023



ಪ್ರತಿಮಾ ರಾಜಕಾರಣದ ಶೀತಲ ಸಮರ

1



ಬೆಬಿಂಕಾ... ಗೋವಾದ ಸಿಹಿ-ಸವಿ ಪದರು

4




A BRAND OF SSKL
SAI SILKS (KALAMANDIR) LIMITED
FLAT 10% TO 30% OFF
ದೀಪಾವಳಿ ಸೇಲ್
ರೇಷ್ಮೆ ಸೀರೆಗಳು ಮತ್ತು ಫ್ಯಾನ್ಸಿ ಸೀರೆಗಳು
ಡ್ರೆಸ್ ಮೆಟೀರಿಯಲ್ಸ್
ಮೆನ್ಸ್‌ವೇರ್ ಮತ್ತು ಕಿಡ್ಸ್‌ವೇರ್‌ಗಳ ಮೇಲೆ
5% INSTANT DISCOUNT# SBI card
#Min. Trxn.: ₹5,000; Max. Discount: ₹1,000 per card.
Validity: 01 Oct - 14 Nov 2023. T&C Apply.
T & C APPLY
ವೆಬ್‌ಸೈಟ್‌ಗಾಗಿ ಸ್ಕ್ಯಾನ್ ಮಾಡಿ
ಈ ಕೊಡುಗೆಗಳು ಮಾರತ್‌ಹಳ್ಳಿ ಮತ್ತು ಕಮ್ಮನಹಳ್ಳಿ ಸ್ಟೋರ್ಸ್‌ನಲ್ಲಿ ಮಾತ್ರ
ಕಮ್ಮನಹಳ್ಳಿ
Ph.:091089 36060
ಮಾರತ್‌ಹಳ್ಳಿ
Ph.:091489 46060
/kalamandirfashions | /kalamandir
ಕಳಾಮಂದಿರ್®
Symbol Of South


A BRAND OF SSKL
SAI SILKS (KALAMANDIR) LIMITED
ಈ ದೀಪಾವಳಿಗೆ ನಮ್ಮ
ವರಮಹಾಲಕ್ಷ್ಮಿ ಯಲಿ
ನೇಕಾರರ ದರದಲ್ಲೇ
ಶಾಪಿಂಗ್ ಆನಂದವನ್ನು ಪಡೆಯಿರಿ
ಕಾಂಚೀಪುರಂ®
ವರಮಹಾಲಕ್ಷ್ಮಿ ಸಿಲ್ಕ್ಸ್
ಮಾರ್ಕೆಟ್‌ನಲ್ಲಿಯೇ
ಅತಿ ಕಡಿಮೆ ಬೆಲೆಯ
ಗ್ಯಾರಂಟಿ
ನಮ್ಮ ಜಯನಗರ ಸ್ಟೋರ್ಸ್‌ನ ಹೊಸ ಫ್ಲೋರ್‌ನಲ್ಲಿ
ನವನವೀನ ಸಂಗ್ರಹದ ಅನುಭೂತಿ ಪಡೆಯಲು ಬನ್ನಿರಿ
ಕಾಂಚೀಪುರಂ ರೇಷ್ಮೆ ಸೀರೆ | ಆರಣಿ | ಬನಾರಸ್ | ಪೈಥಾನಿ
ಉಪ್ಪಡ | ಪಟೋಲ | ಇಕ್ಕತ್ | ಬಾಂಧನಿ | ಸಾಫ್ಟ್ ಸಿಲ್ಕ್
ಡಿಸೈನರ್ ಫ್ಯಾನ್ಸಿ | ಕಾಟನ್ | ಕುಪ್ಪಡಂ
ಕಲಂಕಾರಿ | ಟಸ್ಸಾರ್ | ಕೋರ | ಚಂದೇರಿ | ಲಿನೆನ್
ಪಾವಾಡಗಳು | ಡಿಸೈನರ್ ಧೋತಿಗಳು | ಪೆರುಮಾಳ್ ವಸ್ತ್ರಗಳು
WE PROMISE PQR • PRICE • QUALITY • RANGE
KANCHEEPURAM ORIGINAL BRAND
ಜಯನಗರ
ಬಸ್ ಸ್ಟಾಪ್ ಎದುರು, ೪೬ನೇ ಕ್ರಾಸ್, ೫ನೇ ಬ್ಲಾಕ್ | ಫೋನ್: 91891 6060
ಮಲ್ಲೇಶ್ವರಂ
8ನೇ ಕ್ರಾಸ್, ಎಸ್.ಬಿ.ಐ. ಬ್ಯಾಂಕ್ ಬಿಲ್ಡಿಂಗ್, ಮಾರ್ಗೋಸ ರೋಡ್ | ಫೋನ್: 080 4148 1117
FLAG SHIP STORE GANDHI ROAD KANCHEEPURAM I ANDHRA PRADESH I TELANGANA I KARNATAKA I TAMIL NADU | Follow Us on: /kanchivmlsilks

ಪ್ರಜಾವಾಣಿ

ಭಾನುವಾರದ ಪುರವಣಿ

ಭಾನುವಾರ, 29 ಅಕ್ಟೋಬರ್ 2023



ಕಿನ್ನೂರಿ ನುಡಿಸೋನ ದನಿ ಚೆಂದ

2



'ಸ್ಪಂದನ'ಕ್ಕೆ ಐವತ್ತು – 'ಪಾರಿಜಾತ' ಹುಟ್ಟಿತ್ತು

3



ನವೆಂಬರ್ 1ಕ್ಕೆ ಸರಿಯಾಗಿ ಕನ್ನಡನಾಡು 'ಕರ್ನಾಟಕ' ಎಂದು ಹೆಸರಾಗಿ 50 ವರ್ಷಗಳು ಸರಿಯುತ್ತವೆ. ಕನ್ನಡ ಹಾಗೂ ತಂತ್ರಜ್ಞಾನದ ವಿಷಯ ಕುರಿತು ಒಬ್ಬರು ಹಾಗೂ ಕನ್ನಡವನ್ನು ಶ್ರದ್ಧೆ, ಶಿಸ್ತಿನಿಂದ ಕಲಿಯುತ್ತಿರುವ ಕನ್ನಡೇತರ ನಟಿಯಾದ ಇನ್ನೊಬ್ಬರು ತಮ್ಮ ಅನುಭವಗಳನ್ನಿಲ್ಲಿ ಅಕ್ಷರರೂಪಕ್ಕೆ ಇಳಿಸಿದ್ದಾರೆ.

ತಂತ್ರಜ್ಞಾನ–ಕನ್ನಡ: ಆದದ್ದು ಇಷ್ಟು, ಆಗಬೇಕಾದದ್ದು ಅಷ್ಟು

ಅರವಿಂದ ವಿ.ಕೆ.

ಡಿಜಿಟಲ್ ಜಗತ್ತಿನಲ್ಲಿ ಕನ್ನಡ ಭಾಷೆ ಬೆಳವಣಿಗೆಗೆ ಕಳೆದ ಐದಾರು ವರ್ಷಗಳ ಹಿಂದೆ ಇದ್ದಂತಹ ಅಡಚಣೆಗಳು ಸದ್ಯಕ್ಕೆ ಅಷ್ಟೊಂದು ಕಾಣುತ್ತಿಲ್ಲ. ಫಾಂಟ್ಸ್ ಹಾಗೂ ಕನ್ವರ್ಟರ್ ತಂತ್ರಜ್ಞಾನ ಕನ್ನಡಕ್ಕೂ ಸಾಕಷ್ಟು ಒಗ್ಗಿಕೊಂಡಿದ್ದು, ಡಿಜಿಟಲ್ ಲೋಕದಲ್ಲಿ ಕನ್ನಡ ಪ್ರಕಾಶಿಸುತ್ತಿದೆ. ಆದರೆ, ಇಂಗ್ಲಿಷ್‌ಗೆ ಹೋಲಿಸಿದರೆ ಕನ್ನಡ ಕಂಟೆಂಟ್ ಬರೆಯುವವರು ಕಡಿಮೆ.

ದಶಕದ ಹಿಂದೆ ನುಡಿ/ಬರಹದ ಕಡತಗಳಲ್ಲಿ ಇರುತ್ತಿದ್ದ ಕಂಟೆಂಟ್ ಅನ್ನು ಡಿಜಿಟಲ್‌ಗೆ ಹಾಕಬೇಕಾದರೆ ಯೂನಿಕೋಡ್ ಅವಶ್ಯವಿತ್ತು. ಆಗ ಕನ್ನಡಕ್ಕೆ ಸಂಬಂಧಿಸಿದಂತೆ ಯೂನಿಕೋಡ್ ತಂತ್ರಜ್ಞಾನ ಅಷ್ಟೊಂದು ಸುಧಾರಣೆ ಆಗಿರಲಿಲ್ಲ. 2008ರಲ್ಲಿ ಯಾವುದೋ ಒಂದು ಕಡತವನ್ನು ಡಿಜಿಟಲ್‌ಗೆ ಹಾಕಬೇಕಾಗಿ ಬಂತು. ಅದನ್ನು ಯೂನಿಕೋಡ್‌ಗೆ ಪರಿವರ್ತನೆ ಮಾಡಬೇಕಿತ್ತು. ಆಗ ನಾನೇ 'ಓಪನ್ ಸೋರ್ಸ್' ಆಗಿ ನುಡಿ/ಬರಹದಲ್ಲಿದ್ದಿದ್ದನ್ನು ಯೂನಿಕೋಡ್‌ಗೆ ಬದಲಾಯಿಸುವ 'ಸಂಕ' ಎಂಬ ವೆಬ್‌ಪೇಜ್ ರಚಿಸಿದ್ದೆ. ಈ ವೆಬ್‌ಪೇಜ್ ಅನ್ನು ಉಚಿತವಾಗಿ ನೀಡಿದೆ. ಸಾಕಷ್ಟು ಜನರಿಂದ ಉತ್ತಮ ಪ್ರತಿಕ್ರಿಯೆ ಬಂತು. ಅನೇಕ ಕನ್ನಡಿಗರು ಸಲಹೆಗಳನ್ನು ನೀಡಿದ್ದರಿಂದ ಅದರಲ್ಲಿ ಸುಧಾರಣೆಗಳನ್ನು ಮಾಡಲು ಸಾಧ್ಯವಾಯಿತು. ನಂತರ ಯೂನಿಕೋಡ್‌ನಿಂದ ಬರಹ/ನುಡಿಗೆ ಬದಲಾಯಿಸುವ ಅವಕಾಶವನ್ನೂ ಒದಗಿಸಿದೆ.

ಸದ್ಯ Aravindavk.in ಪೇಜ್‌ಗೆ ಪ್ರತಿದಿನ ಗೂಗಲ್ ಅನಲಿಟಿಕ್ಸ್ ಪ್ರಕಾರ ಸರಾಸರಿ 5 ಸಾವಿರಕ್ಕೂ ಹೆಚ್ಚು ಬಳಕೆದಾರರು ಭೇಟಿ ನೀಡುತ್ತಾರೆ. ಇದರಿಂದ ಡಿಜಿಟಲ್‌ನಲ್ಲಿ ಕನ್ನಡ ಕಂಟೆಂಟ್ ಹೆಚ್ಚಲು ನನ್ನದೂ ಒಂದು ಅಳಿಲು ಸೇವೆ ಆಗಿರಬಹುದು ಎಂದೆನಿಸುತ್ತದೆ.

ಈ ನಿಟ್ಟಿನಲ್ಲಿ ಬರಹ ಸಾಫ್ಟ್‌ವೇರ್ ಕೂಡ ಉತ್ತಮವಾಗಿದೆ. ಆದರೆ, ಅದನ್ನು ಒಂದು ಅಪ್ಲಿಕೇಶನ್ ತರಹ ಡೌನಲೋಡ್ ಮಾಡಿಕೊಂಡು ಬಳಸಬೇಕಾಗುತ್ತದೆ. 'ಕೇದಿಗೆ', 'ಮಲ್ಲಿಗೆ' ಎಂಬ ಎರಡು ಯೂನಿಕೋಡ್ ಫಾಂಟ್‌ಗಳನ್ನು ಕೂಡ ರಚಿಸಿದೆ. ಆಮೇಲೆ ಅವುಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ, 'ಗುಬ್ಬಿ' ಮತ್ತು 'ನವಿಲು' ಎಂಬ ಹೆಸರಿನಲ್ಲಿ ಬಿಡುಗಡೆ ಮಾಡಿದೆ.

ಡಿಜಿಟಲ್ ವಿಷಯದಲ್ಲಿ, ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಮಲಯಾಳಂ ಮುಂದಿದೆ. ಟೂಲ್ಸ್ ಡೆವೆಲಪ್‌ಮೆಂಟ್, ಫಾಂಟ್ಸ್, ಓಪನ್ ಸೋರ್ಸ್ ವಿಷಯಗಳಲ್ಲಿ ಅಲ್ಲಿ ಸಾಕಷ್ಟು ಕೆಲಸಗಳಾಗಿವೆ. ಇದಕ್ಕಾಗಿ ಕೇರಳದ ತಂತ್ರಜ್ಞರು 'ಮಲಯಾಳಂ ಕಂಪ್ಯೂಟಿಂಗ್' ಎಂಬ ಗುಂಪನ್ನು ರಚಿಸಿಕೊಂಡಿದ್ದಾರೆ. ಕನ್ನಡದಲ್ಲಿ ಸ್ವತಂತ್ರವಾಗಿ ಇಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿರುವವರೇ ಹೆಚ್ಚು.

ಹಳಗನ್ನಡ ಮತ್ತು ಪುಸ್ತಕದ ರೂಪದಲ್ಲಿರುವ ಕನ್ನಡ ಕಂಟೆಂಟ್ ಕೂಡ ಬೇರೆ ಯಾವ ಭಾಷೆಗಳಿಗೂ ಕಡಿಮೆ ಇಲ್ಲ. ಅವನ್ನೆಲ್ಲ ಡಿಜಿಟಲೀಕರಣ ಮಾಡಲು ಸಾಕಷ್ಟು ಸಮಯ ಬೇಕು. ಅವುಗಳೆಲ್ಲ ಇಮೇಜ್ ಅಥವಾ ಪಿಡಿಎಫ್ ಸ್ವರೂಪದಲ್ಲಿ ಇರುತ್ತವೆ. ಇವುಗಳನ್ನು ಪಠ್ಯವಾಗಿ ಪರಿವರ್ತಿಸಲು ಒಸಿಆರ್ (Optical Character Recognition) ತಂತ್ರಜ್ಞಾನ ಬೇಕು. ಇದರಲ್ಲಿ ನಾವು ಹಿಂದುಳಿದಿದ್ದೇವೆ.

ಕಾಗುಣಿತ ಹಾಗೂ ವ್ಯಾಕರಣ ಸರಿಪಡಿಸುವ ವಿಷಯದ ತಾಂತ್ರಿಕ ಅನುಕೂಲದಲ್ಲಿ ಇಂಗ್ಲಿಷ್‌ಗೆ ಹೋಲಿಸಿದರೆ ನಾವು ಹಿಂದೆ ಇದ್ದೇವೆ. ಕನ್ನಡ ಭಾಷೆಯ ಶೈಲಿ ವೈವಿಧ್ಯಮಯವಾಗಿರುವುದರಿಂದ ಈ ಕಷ್ಟ. ಕನ್ನಡದಲ್ಲಿ ಈ ನಿಟ್ಟಿನಲ್ಲಿ ಕೆಲಸಗಳು ನಡೆಯುತ್ತಿವೆ. ಅವು ಇನ್ನೂ ದೊಡ್ಡ ಮಟ್ಟದಲ್ಲಿ ಆಗಬೇಕು.

ಗೂಗಲ್‌ನಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ಟೂಲ್‌ಗಳಿವೆ. ಆದರೆ, ಅವೆಲ್ಲ ಓಪನ್ ಸೋರ್ಸ್‌ಗಳಲ್ಲ. ಸಾಮಾನ್ಯ ಕಂಟೆಂಟ್ ಅನ್ನು ಅಲ್ಲಿ ಬರೆಯಬಹುದು. ಭದ್ರತೆ, ರಹಸ್ಯ ವಿಚಾರಗಳನ್ನು ಬರೆಯವುದು ಕಷ್ಟ. ಏಕೆಂದರೆ ಅಲ್ಲಿ ಖಾಸಗಿತನದ ಖಾತರಿ ಇರುವುದಿಲ್ಲ.

ಬೆಂಗಳೂರಿನ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಕನ್ನಡಿಗರಿದ್ದಾರೆ. ಅವರೆಲ್ಲ ಬಿಡುವಿನಲ್ಲಿ ಇನ್ನಷ್ಟು ಕನ್ನಡದ ಕೆಲಸಗಳನ್ನು ಮಾಡಲು ಚರ್ಚೆ ನಡೆಸಲು ವೇದಿಕೆ ಸೃಷ್ಟಿಯಾದೀತೆ ಎಂದು ನಾನು ಆಶಾವಾದಿಯಾಗಿದ್ದೇನೆ.

(ಲೇಖಕರು: ಬೆಂಗಳೂರಿನ ಕಡಲು ಟೆಕ್ನಾಲಜೀಸ್‌ನ ಸಹ ಸಂಸ್ಥಾಪಕರು)

ನಿರೂಪಣೆ: ಮಂಜುನಾಥ್ ಭದ್ರಶೆಟ್ಟಿ

ಕನ್ನಡದ ಅರಿವೂ ಅಚ್ಚರಿಯೂ

ಪೂಜಾ ಗಾಂಧಿ

ನಾವು ಯಾವ ನೆಲದಲ್ಲಿರುತ್ತೇವೋ ಅಲ್ಲಿನ ಭಾಷೆ ಕಲಿಯುವುದು, ನಾವು ಆ ನೆಲಕ್ಕೆ ಕೊಡುವ ಗೌರವ, ಕೊಡುಗೆ ಎನ್ನುವುದು ನನ್ನ ಭಾವನೆ. ನನ್ನ ಮೊದಲ ಕನ್ನಡ ಸಿನಿಮಾ 'ಮುಂಗಾರು ಮಳೆ' ನಂತರ ಕನ್ನಡ ಬರದೇ ಇದ್ದರೂ ಮಾತಾಡಲು ಪ್ರಯತ್ನಿಸುತ್ತಿದ್ದೆ. ನಂತರದ ದಿನಗಳಲ್ಲಿ, ಬರೀ ಮಾತಾಡಿದರೆ ಸಾಲದು, ಕನ್ನಡ ಭಾಷೆಯ ಸೌಂದರ್ಯವನ್ನು ಕಾಣಬೇಕಾದರೆ ಓದಲು, ಬರೆಯಲು ಕೂಡ ಕಲಿಯಲೇಬೇಕೆಂದು ತುಂಬಾ ಅನ್ನಿಸಿತು. ಆದರೆ ಕಲಿಕೆಗೆ ಸೂಕ್ತ ಸಮಯ ಸಿಕ್ಕಿರಲಿಲ್ಲ.

ಇದೀಗ ಎರಡು ವರ್ಷಗಳಿಂದ, ಕನ್ನಡ ಭಾಷೆಯನ್ನು ಕಲಿಯಲೇಬೇಕೆಂದು ಗಟ್ಟಿಯಾಗಿ ನಿರ್ಧಾರ ಮಾಡಿ ಸಮಗ್ರ ಕಲಿಕೆ ಶುರುಮಾಡಿದ್ದೇನೆ. ಕನ್ನಡವನ್ನು ಕಲಿಯಬೇಕೆಂದು ಹೊರಟಾಗ, ಶಿಕ್ಷಕರ ಹುಡುಕಾಟ, ಎಲ್ಲಿಂದ ಕಲಿಕೆ ಶುರು ಮಾಡಬೇಕು, ಹೇಗೆ ಶುರು ಮಾಡಬೇಕು, ಪಠ್ಯಕ್ರಮ ಹೇಗಿರಬೇಕು ಎಂಬೆಲ್ಲಾ ಗೊಂದಲಗಳು ಇದ್ದೇ ಇದ್ದವು. ಈ ಎಲ್ಲಾ ಗೊಂದಲಗಳ ನಡುವೆಯೇ ಮೊದಲ ಹೆಜ್ಜೆ ಇಟ್ಟಿದ್ದೆ.

ಮೊದಲು ಅಂಗನವಾಡಿ ಶಿಕ್ಷಕರಾದ ಸನತ್ ಎಂಬುವರಿಂದ ಕಲಿಕೆ ಆರಂಭಿಸಿದೆ. ಕನ್ನಡದ ಅಕ್ಷರಗಳು, ವರ್ಣಮಾಲೆಗಳನ್ನು ಮಕ್ಕಳಂತೆ ಅಭ್ಯಾಸ ಮಾಡುತ್ತಲೇ ಹಂತಹಂತವಾಗಿ ವಾಕ್ಯ ರಚನೆಯನ್ನೂ ಕಲಿತೆ. ಆಮೇಲೆ 5ನೇ ತರಗತಿ ಶಿಕ್ಷಕರಿಂದ, 10ನೇ ತರಗತಿ ಶಿಕ್ಷಕರಿಂದ ಕನ್ನಡ ಭಾಷೆಯ ಮೂಲಗಳನ್ನು ಅರಿತೆ. ಒಂದು ವರ್ಷ ಮನೆಯಲ್ಲೇ ಕನ್ನಡ ತರಗತಿ ಪಡೆದುಕೊಂಡೆ. ಹೆಚ್ಚಿನ ಕಲಿಕೆಗೆ ಕೋಚಿಂಗ್ ಸೆಂಟರ್ ಒಂದಕ್ಕೆ ಸೇರಿದೆ. ಅಲ್ಲಿ ಎಂಟು ತಿಂಗಳ ಕಾಲ, ದಿನಕ್ಕೆ ಎಂಟು ಗಂಟೆಯ ಅವಧಿ ಕನ್ನಡ ಮಾಧ್ಯಮದಲ್ಲಿಯೇ ಕರ್ನಾಟಕ ಇತಿಹಾಸ, ಭಾರತದ ಇತಿಹಾಸ, ಅರ್ಥಶಾಸ್ತ್ರ, ಸಾಮಾನ್ಯಜ್ಞಾನದ ವಿಷಯಗಳನ್ನು ಕಲಿತೆ.

ಕನ್ನಡ ಭಾಷೆಯನ್ನು ಓದಿ, ಬರೆಯಲು ಕಲಿಯುತ್ತಿದ್ದಂತೆ ಭಾಷೆಯ ಬಗ್ಗೆ ಆಸಕ್ತಿಯೂ ಹೆಚ್ಚಾಯಿತು. ಹಲವು ಪುಸ್ತಕಗಳನ್ನು ಓದಲು ಆರಂಭಿಸಿದೆ. ಪುಸ್ತಕ ಓದುತ್ತಾ ಮತ್ತೂ ಕಲಿಯಬೇಕೆಂಬ ಉತ್ಸಾಹ ಹೆಚ್ಚಾಗಿದೆ. ಈಗ ಲೋಹಿತ್ ಎಂಬ ಕನ್ನಡ ಪ್ರೊಫೆಸರ್ ಒಬ್ಬರಿಂದ ಕಲಿಕೆ ಮುಂದುವರೆಸಿದ್ದೇನೆ. ಕನ್ನಡವನ್ನು ಆಳವಾಗಿ ಅಧ್ಯಯನ ಮಾಡುವ ಪ್ರಯತ್ನದಲ್ಲಿದ್ದೇನೆ. ವಾರಕ್ಕೆ ನಾಲ್ಕು ದಿನ, ಐದು ಗಂಟೆ ಕಲಿಕೆ ಮುಂದುವರೆದಿದೆ. ಕರ್ನಾಟಕ ಇತಿಹಾಸ, ಸಾಹಿತ್ಯ, ವಚನಗಳನ್ನು ಓದಿ ತಿಳಿದುಕೊಳ್ಳುತ್ತಿದ್ದೇನೆ. ಓದುತ್ತಾ ಓದುತ್ತಾ ಕನ್ನಡ ಭಾಷೆ ಎಷ್ಟು ಸುಂದರ ಎಂಬ ಅರಿವು ಹೆಚ್ಚಾಗುತ್ತದೆ. ಅಚ್ಚರಿಯೂ ಆಗುತ್ತಿದೆ.

ಈಗ ಅನ್ಯಭಾಷಿಗರ ಕನ್ನಡ ಕಲಿಕೆಗೆ ಸಂಬಂಧಿಸಿದಂತೆ ಯೋಜನೆಯೊಂದನ್ನು ಸ್ವಯಂಪ್ರೇರಣೆಯಿಂದ ರೂಪಿಸಿದ್ದೇನೆ. ಅನ್ಯಭಾಷಿಗರಿಗೆ ಯಾವ ರೀತಿಯಲ್ಲಿ ಕನ್ನಡ ಭಾಷೆಯನ್ನು ಹೇಳಿಕೊಟ್ಟರೆ ಸುಲಭವಾಗುತ್ತದೆ ಎಂಬುದರ ಕುರಿತ ಯೋಜನೆಯಿದು. ಇದು ಹಲವರಿಗೆ ಉಪಯೋಗವಾಗಲಿದೆ ಎಂಬ ಭರವಸೆ ನನಗಿದೆ.

ನನ್ನ ಪಾಲಿಗೆ ನವೆಂಬರ್ ಮಾತ್ರವಲ್ಲ, 365 ದಿನವೂ ಕನ್ನಡ ರಾಜ್ಯೋತ್ಸವವೇ. ಕನ್ನಡ ಕಲಿಕೆ ಒಂದು ದಿನದ, ಒಂದು ತಿಂಗಳ ವಿಷಯ ಅಲ್ಲ, ಪ್ರತಿ ದಿನದ ಹಬ್ಬ ನನಗೆ.



(ಲೇಖಕಿ ಚಿತ್ರನಟಿ)

ನಿರೂಪಣೆ: ಸುಮಲತಾ ಎನ್.

ಪ್ರತಿಮಾ ರಾಜಕಾರಣದ ಶೀತಲ ಸಮರ

ಸಾರ್ವಜನಿಕ ಹಬ್ಬ-ಹರಿದಿನ, ಜಾತ್ರೆ, ಉತ್ಸವಗಳಲ್ಲಿ ದೇವತೆಗಳು, ಪೌರಾಣಿಕ ಮತ್ತು ಐತಿಹಾಸಿಕ ವ್ಯಕ್ತಿಗಳ ಚಿತ್ರಗಳು, ಪ್ರತಿಮೆಗಳು, ಮತ್ತು ಸಂಕೇತಗಳ ಅಬ್ಬರ ಹೆಚ್ಚಾಗಿದೆ. ಸದಾ ಪ್ರಚಾರದ ಗುಂಗಿನಲ್ಲಿರುವ ರಾಜಕೀಯ ಪಕ್ಷಗಳು, ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಜಾತ್ರೆ, ಉತ್ಸವ, ಉರುಸ್‌ಗಳನ್ನು ಪ್ರತಿಮಾ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿವೆ. ಈ ಕುರಿತ ವಿಶ್ಲೇಷಣೆ ಇದು.

ಸತ್ಯಪ್ರಕಾಶ್ ಎಂ.ಆರ್.

ಕಳೆದ ತಿಂಗಳು ನಡೆದ ಗಣೇಶೋತ್ಸವ ಮತ್ತು ಈದ್-ಮಿಲಾದ್ ಮೆರವಣಿಗೆ ರಾಜ್ಯದ ಕೆಲ ಭಾಗಗಳಲ್ಲಿ ಅಹಿತಕರ ಬೆಳವಣಿಗೆಗೆ ಸಾಕ್ಷಿಯಾಗಿದ್ದವು. ಹಿಂದೂ ಮತ್ತು ಮುಸ್ಲಿಂ ಸಮುದಾಯದವರು ಶಾಂತಿ,ಸೌಹಾರ್ದದಿಂದ ಆಚರಿಸುತ್ತಿದ್ದ ಈ ಎರಡು ಹಬ್ಬಗಳು, ಇತ್ತೀಚೆಗೆ ಧರ್ಮ ಮತ್ತು ರಾಜಕೀಯ ಬೆರೆತ ಪ್ರತಿಮಾ ರಾಜಕಾರಣದ ಶೀತಲ ಸಮರಕ್ಕೆ ವೇದಿಕೆಯಾಗುತ್ತಲಿವೆ. ವರ್ಷದಿಂದ ವರ್ಷಕ್ಕೆ ಸಮುದಾಯಗಳ ಸಾರ್ವಜನಿಕ ವಲಯದ ಪ್ರತಿಮಾಭಿವ್ಯಕ್ತಿ ತಾರಕಕ್ಕೇರುತ್ತಿದೆ.

ಸದಾ ಪ್ರಚಾರದ ಗುಂಗಿನಲ್ಲಿರುವ ರಾಜಕೀಯ ಪಕ್ಷಗಳು, ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಜಾತ್ರೆ, ಉತ್ಸವ, ಉರುಸ್‌ಗಳ ಮೂಲ ಉದ್ದೇಶವನ್ನು ಬದಿಗೆ ಸರಿಸಿ, ರಾಜಕೀಯ ಮತ್ತು ಧಾರ್ಮಿಕ ಸಂದೇಶ ಕೊಡುವಂತಹ ಚಿತ್ರಗಳು, ಪ್ರತಿಮೆಗಳು, ಸಂಕೇತಗಳನ್ನೊಳಗೊಂಡ ಕಟೌಟ್‌ಗಳು, ಭಿತ್ತಿಚಿತ್ರಗಳು, ಫ್ಲೆಕ್ಸ್‌ಗಳನ್ನು ತೀರ ಅತಿರೇಕವೇ ಎಂಬಂತೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುತ್ತಿವೆ. ಇದು ಆಯಾ ಸಮುದಾಯಗಳ ಅಸ್ಮಿತೆಯ ವಿಷಯಕ್ಕೆ ಮಾತ್ರ ಸೀಮಿತವಾಗದೆ, ಆಕ್ರಮಣಶಾಲಿ ಧಾರ್ಮಿಕ ರಾಜಕಾರಣದ ಪ್ರತಿಪಾದನೆಗೆ ಬಳಕೆಯಾಗುತ್ತಿದೆ.

ಪ್ರತಿಮಾಶಾಸ್ತ್ರ ಮತ್ತು ಸಂವಹನದ ಮಿತಿ

ಬಹಳಷ್ಟು ಬಾರಿ ಬರವಣಿಗೆಗಿಂತ ಮಾತು ಪರಿಣಾಮಕಾರಿ ಎನಿಸುತ್ತದೆ. ಕೆಲವೊಮ್ಮೆ ಅಮೂರ್ತ ಪರಿಕಲ್ಪನೆಗಳನ್ನು, ಸಂಕೀರ್ಣ ವಿಚಾರಗಳನ್ನು ಸಮರ್ಪಕವಾಗಿ ದಾಟಿಸುವಲ್ಲಿ ಮಾತು ಕೂಡ ಸೋಲುತ್ತದೆ. ಆಗ ಹೆಚ್ಚು ಸರಳವಾಗಿ ಗ್ರಹಿಕೆಗೆ ನಿಲುಕುವ ಸಂವಹನದ ಮೂರ್ತರೂಪವೇ ಪ್ರತಿಮೆಗಳು ಅಥವಾ ಸಂಕೇತಗಳು. ಭಾಷೆ ಸೋತಾಗ ಪ್ರತಿಮಾಶಾಸ್ತ್ರ ಕೈಹಿಡಿಯುತ್ತದೆ. ಸಾಮಾನ್ಯ ಜನರಿಗೆ ಬರವಣಿಗೆಗಿಂತ ಛಾಯಾಚಿತ್ರಗಳು, ವಿಡಿಯೋಗಳು, ಚಲನಚಿತ್ರಗಳು, ಸಂಕೇತಗಳು, ಮತ್ತು ಪ್ರತಿಮೆಗಳೇ ಆಪ್ತ. ಇದು ಸಂವಹನದ ಗೆಲುವೂ ಹೌದು, ಮಿತಿಯೂ ಹೌದು.

ಕಲಾವಿದನೋರ್ವ ತನ್ನ ಕರ್ತೃಶಕ್ತಿಯ ಮೂಲಕ ಚಿತ್ರಗಳು, ದೃಶ್ಯಗಳಿಗೆ ಕಲಾತ್ಮಕ ರೂಪ ಕೊಟ್ಟರೆ, ಅವೇ ಚಿತ್ರಗಳು ಜನಪ್ರಿಯ ಸಂಸ್ಕೃತಿಯ ಅಂಗಳಕ್ಕೆ ಕಾಲಿರಿಸಿದಾಗ, ಅದರ ಉದ್ದಿಶ್ಯ, ಮೂಲಾರ್ಥಗಳೆಲ್ಲವೂ ವಿರೂಪಗೊಂಡು, ಹೊಸ ವಿಲಕ್ಷಣ ಅರ್ಥಕ್ಕೆ ಎಡೆ ಮಾಡಿಕೊಡಬಹುದು ಅಥವಾ ಅನುಕೂಲಸಿಂಧು ಪ್ರತಿಮಾ ರಾಜಕಾರಣಕ್ಕೆ ಬಳಕೆಯಾಗಬಹುದು. 2015ರಲ್ಲಿ ಕಾಸರಗೋಡಿನ ಕುಂಬ್ಳೆ ಮೂಲದ ಕರಣ್ ಆಚಾರ್ಯ ಎಂಬ ಕಲಾವಿದ ತನ್ನ ಊರಿನ ಗಣೇಶೋತ್ಸವದ ಬಾವುಟದಲ್ಲಿ ಮುದ್ರಿಸುವ ಸಲುವಾಗಿ ರಚಿಸಿದ ಗ್ರಾಫಿಕಲ್ ಮಾದರಿಯ ಹನುಮಂತನ ರೇಖಾಚಿತ್ರವೊಂದು ಈಗ ರಾಜ್ಯದಾದ್ಯಂತ ಮತ್ತು ಹೊರ ರಾಜ್ಯಗಳಲ್ಲಿ ಕೂಡ ಜನಪ್ರಿಯ ಸ್ಟಿಕರ್‌ಗಳಾಗಿ ಕಾರು-ಬೈಕುಗಳು, ಟ್ಯಾಕ್ಸಿ-ಆಟೋಗಳು, ಗೂಡ್ಸ್ ವಾಹನಗಳು, ಸಾರ್ವಜನಿಕ ಸಾರಿಗೆ ಬಸ್ಸುಗಳು, ಮಳಿಗೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ರಾರಾಜಿಸುತ್ತಿದೆ. ಸ್ನೇಹಿತರ ಒತ್ತಾಯಕ್ಕೆ ಮಣಿದು ಕರಣ್ ರಚಿಸಿದ ಕೇಸರಿ ಬಣ್ಣದ ಹನುಮಂತ, ಅವರೇ ಹೇಳುವಂತೆ ಕೋಪಿಷ್ಟನಲ್ಲ; ಬದಲಿಗೆ, 'ವಿಶಿಷ್ಟ ಆ್ಯಟಿಟ್ಯೂಡ್ ಹೊಂದಿರುವ ಹನುಮಂತ,' ಯುವ ಜನಾಂಗದ ಹುರುಪನ್ನು ಪ್ರತಿನಿಧಿಸುವ 'ಆಧುನಿಕ ಹನುಮಂತ.'

ಸಾರ್ವಜನಿಕ ವಲಯಕ್ಕೆ ಬಂದ ಈ 'ಆ್ಯಟಿಟ್ಯೂಡ್ ಹನುಮಂತ' ಸಂಪೂರ್ಣವಾಗಿ 'ಆ್ಯಂಗ್ರಿ ಹನುಮಂತ'ನ ರೂಪ ಪಡೆದುಕೊಳ್ಳಲು ಬಹಳ ಸಮಯ ತೆಗೆದುಕೊಳ್ಳಲೇ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಗಮನ ಕೂಡ ಸೆಳೆದ ಆಚಾರ್ಯರ ಹನುಮಂತ, ಬರಿಯ ರಾಮನ ಸೇವೆಗೆ ಮುಡಿಪಾಗಿರುವ ದಾಸ್ಯದ ರೂಪಕವಾಗಿ ಅಲ್ಲ, ಬದಲಿಗೆ ಪರಾಕ್ರಮಿಯಾಗಿ, ಸ್ನಾಯುಬಲದ ಪ್ರತೀಕವಾಗಿ ಮತ್ತು ಗಂಡೆದೆಯ ಪೌರುಷದ ಸಂಕೇತವಾಗಿ ಎಲ್ಲೆಡೆ ರಾರಾಜಿಸುತ್ತಿದ್ದಾನೆ. ಸಾಂಸ್ಕೃತಿಕ ರಾಜಕಾರಣದ 'ಉಗ್ರರೂಪಿ' ಬಜರಂಗಬಲಿಯಾಗಿ ಬಳಕೆಯಾಗುತ್ತಿದ್ದಾನೆ.



ರವಿವರ್ಮ ಬಿಡಿಸಿದ ವರ್ಣಚಿತ್ರ

'ಹನುಮಾನ್ಸ್ ಟೇಲ್: ದಿ ಮೆಸೇಜಸ್ ಆಫ್ ಎ ಡಿವೈನ್ ಮಂಕಿ' ಕೃತಿಯ ಲೇಖಕ, ಅಯೋವಾ ವಿಶ್ವವಿದ್ಯಾಲಯದ ಹಿಂದಿ ಪ್ರಾಧ್ಯಾಪಕ ಪ್ರೊ. ಲುಟ್ಗೆಂಡಾರ್ಫ್ ಸರಿಯಾಗಿಯೇ ಗುರುತಿಸಿರುವಂತೆ ಸಾಂಪ್ರದಾಯಿಕವಾಗಿ ಹನುಮಂತ, ಶೈವರು ಮತ್ತು ವೈಷ್ಣವರಿಬ್ಬರಿಂದಲೂ ಪೂಜಿಸಿಕೊಳ್ಳುವ ಆಪ್ತ ದೈವ. ರಾಮಭಂಟ ಹನುಮನನ್ನು ಶೈವರು ರುದ್ರನ ಹನ್ನೊಂದನೇ ಅವತಾರವಾಗಿ ಅಂದರೆ, ರುದ್ರರೂಪಿಯನ್ನಾಗಿ ಪೂಜಿಸುತ್ತಾರೆ. ಆದರೆ ಈಗ, ವಾನರವೀರ ಹನುಮ, ಶೈವ-ವೈಷ್ಣವರೆಂಬ ಕವಲುಗಳನ್ನು ಒಗ್ಗೂಡಿಸಿದ ಸಾಂಸ್ಕೃತಿಕ ರಾಷ್ಟ್ರೀಯವಾದದ ಬಲಶಾಲಿ ಐಕಾನ್ ಆಗಿ ಹೊರಹೊಮ್ಮಿದ್ದಾನೆ.

ಕ್ಯಾಲೆಂಡರ್ ಚಿತ್ರಕಲೆ, ಪ್ರತಿಮಾ ರಾಜಕಾರಣ

ಹಿಂದೂ ಧಾರ್ಮಿಕ ಪರಂಪರೆಯ ದೇವಾನುದೇವತೆಗಳನ್ನು ಚಿತ್ರಗಳ ಮೂಲಕ ಸಾಮಾನ್ಯ ಜನರ ಮನಸ್ಸಿಗೆ ತಲುಪಿಸಿದ ಕೀರ್ತಿ ಕ್ಯಾಲೆಂಡರ್ ಚಿತ್ರಕಲೆಗೆ ಸಲ್ಲಬೇಕು. ಇದಕ್ಕೊಂದು ವಿಶಿಷ್ಟ ಆಯಾಮ ಕೂಡ ಇದೆ. ಖ್ಯಾತ ಚಿತ್ರ ಕಲಾವಿದ ರಾಜಾ ರವಿವರ್ಮ 19ನೇ ಶತಮಾನದಲ್ಲಿ ರಚಿಸಿದ ದೇವತೆಗಳ ಚಿತ್ರಗಳೇ ಭಾರತೀಯ ಜನಮಾನಸದಲ್ಲಿ ಈಗಲೂ ಶಾಶ್ವತವಾಗಿ ನೆಲೆಯೂರಿವೆ. ಮುದ್ರಣ ಯಂತ್ರಗಳ ಕ್ರಾಂತಿಯ ಬಳಿಕ ರವಿವರ್ಮ ಚಿತ್ರಿಸಿದ ರಾಮ, ಗಣಪತಿ, ಲಕ್ಷ್ಮಿ, ಸರಸ್ವತಿ ಮತ್ತಿತರ ಹಿಂದೂ ದೇವತೆಗಳ ಚಿತ್ರಗಳು ಲಿಥೋಗ್ರಾಫಿಕ್ ಪ್ರೆಸ್ ಮೂಲಕ ಕ್ಯಾಲೆಂಡರ್‌ಗಳಲ್ಲಿ ಮುದ್ರಿತವಾಗಿ ದೇಶದ ಮನೆಮನೆಗೂ ತಲುಪಿದವು.

ವಿಶೇಷವೆಂದರೆ, ರವಿವರ್ಮ ರಚಿಸಿದ ಬಹುತೇಕ ಕಲಾಕೃತಿಗಳು ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳ ಉಪಕಥೆಗಳಲ್ಲಿ ಬರುವ ಪಾತ್ರಗಳೇ ಆಗಿದ್ದರೂ ಅವುಗಳ ರೂಪು, ಚೌಕಟ್ಟಿನ ಮೇಲೆ ಯುರೋಪಿನ ಪುನರುಜ್ಜೀವನ ಕಲಾವಿದರ ಪ್ರಭಾವವಿರುವುದು ಗಮನಿಸಬೇಕಾದ ಅಂಶ. ಅಂದರೆ, ಪಾತ್ರ ಭಾರತೀಯವಾದರೂ ಚಿತ್ರಗಳ ಸಂರಚನೆ, ಮತ್ತು ಸಂವೇದನೆಯಲ್ಲಿ ಐರೋಪ್ಯ ಕಲಾವಿದರ ಛಾಯೆ ಗಾಢವಾಗಿ ಕಂಡುಬರುವುದು ವಿಶಿಷ್ಟ. ಹಾಗಾಗಿ, ಭಾರತೀಯ ಪರಂಪರೆ ಮತ್ತು ಐರೋಪ್ಯ ಕಲಾತ್ಮಕ ಸಂವೇದನೆಗಳೆರಡನ್ನೂ ಸಂಕರಗೊಳಿಸಿದ ಹೊಸ ಪ್ರತಿಮಾಶಾಸ್ತ್ರದ ಹರಿಕಾರ ರಾಜಾ ರವಿವರ್ಮ ಎಂದರೆ ತಪ್ಪಾಗಲಾರದು.

ಈ ಹೊತ್ತಿಗೂ, ಜನಸಾಮಾನ್ಯರ ಮನೆಯ ಗೋಡೆಗಳ ಮೇಲೆ ಕಂಡುಬರುವ ಕ್ಯಾಲೆಂಡರ್‌ಗಳಲ್ಲಿ ಮರುಮುದ್ರಿತವಾಗುತ್ತಿರುವ ರವಿವರ್ಮ ರಚಿಸಿದ ನಮ್ಮ ಹಿಂದೂ ದೇವತೆಗಳ ಚಿತ್ರಗಳು ಕಾಕೇಶಿಯನ್ನರ ಲಕ್ಷಣ ಹೊಂದಿರುವುದು ಇದರ ಮುಂದುವರೆದ ಭಾಗ. ಭಾರತೀಯ ಸಾಮೂಹಿಕ ಸ್ಮೃತಿಯಲ್ಲಿ ಹಾಸುಹೊಕ್ಕಾದ ರವಿವರ್ಮನ ಓಲಿಯೋಗ್ರಾಫ್‌ಗಳು (ತೈಲಚಿತ್ರಗಳು), ಚಲನಚಿತ್ರ, ಟಿ.ವಿ. ಧಾರಾವಾಹಿ, ಚಿತ್ರಕಲೆ, ಹೀಗೆ ಜನಪ್ರಿಯ ಸಂಸ್ಕೃತಿಯ ವಿಶಾಲವಾದ ಅಂಗಳಕ್ಕೆ ಲಗ್ಗೆ ಇಟ್ಟವು. ಇದೇ ಮಾದರಿಯನ್ನು ಅನುಕರಿಸಿದ ದೇವತೆಗಳ ಚಿತ್ರಗಳು ತೊಂಬತ್ತರ ದಶಕದಿಂದೀಚೆಗೆ ಭಾರತದಲ್ಲಿ ಪ್ರತಿಮಾ ರಾಜಕಾರಣದ ದಾಳಗಳಾಗಿ ಬಳಕೆಯಾಗಲಾರಂಭಿಸಿದವು.

ಈಗ ಪ್ರತಿಮಾ ರಾಜಕಾರಣದ ಶೀತಲ ಸಮರ ಉಚ್ಛ್ರಾಯ ಸ್ಥಿತಿಯನ್ನು ತಲುಪಿದೆ. ಯಾವುದೇ ಕ್ಷಣ ಸ್ಫೋಟಗೊಳ್ಳಬಹುದಾದ ಅಪಾಯಕಾರಿ ಸ್ವರೂಪ ಪಡೆದುಕೊಳ್ಳುತ್ತಿದೆ. ಹಳ್ಳಿ ಹಳ್ಳಿಗಳಲ್ಲಿ, ಮಹಾನಗರಗಳ ಬೀದಿಗಳಲ್ಲಿ, ಸಣ್ಣ ಪಟ್ಟಣಗಳಲ್ಲಿ ಸಾರ್ವಜನಿಕ ಹಬ್ಬ, ಜಾತ್ರೆ-ಉತ್ಸವಗಳ ಸಂದರ್ಭದಲ್ಲಿ ತಾತ್ಕಾಲಿಕ ಗೋಪುರಗಳು, ಮಿನಾರುಗಳು, ಕಳಶ, ಗುಂಬಜ್‌ಗಳು ಪೈಪೋಟಿಗೆ ಬಿದ್ದಂತೆ ತಲೆಯೆತ್ತುತ್ತಿವೆ. ಜೊತೆಗೆ, ದೇವತೆಗಳು, ಐತಿಹಾಸಿಕ ವ್ಯಕ್ತಿಗಳು ರಾಜಕಾರಣದ ಪ್ರತಿಮೆಗಳಾಗಿ ಬಳಕೆಯಾಗುತ್ತಿದ್ದಾರೆ. ಒಂದು ಬಡಾವಣೆ 'ಹಿಂದೂ ಸಾಮ್ರಾಜ್ಯ'ದ ಕಮಾನಿನಿಂದ ಅಲಂಕೃತಗೊಂಡಿದ್ದರೆ, ಮತ್ತೊಂದು ರಸ್ತೆ 'ಟಿಪ್ಪುವಿನ ಸಲ್ತನತ್' ಆಗಿ ಠೇಂಕರಿಸುತ್ತಿರುತ್ತದೆ. ಒಂದೆಡೆ ಹಿರಣ್ಯಕಶಿಪುವಿನ ಎದೆ ಬಗೆಯುತ್ತಿರುವ ಉಗ್ರ ನರಸಿಂಹನ ಚಿತ್ರವಿದ್ದರೆ, ಮತ್ತೊಂದೆಡೆ, 'ಶೇರ್-ಎ-ಮೈಸೂರ್'ನ ಬೃಹತ್ ಕಟೌಟ್ ಕಣ್ಣಿಗೆ ರಾಚುತ್ತಿರುತ್ತದೆ.

ಹೀಗೆ, ಅಯೋಧ್ಯೆಯ ಶ್ರೀರಾಮ, 'ಹಿಂದೂ ಹೃದಯ ಸಾಮ್ರಾಟ' ಛತ್ರಪತಿ ಶಿವಾಜಿ, ಮೊಘಲರ ಔರಂಗಜೇಬ್, ಹೈದರಾಲಿಯ ಭಿತ್ತಿಚಿತ್ರಗಳು, ಸೈದ್ಧಾಂತಿಕವಾಗಿ ಎಡ, ಬಲ, ಮಧ್ಯದಲ್ಲಿರುವ ಭಗತ್ ಸಿಂಗ್, ಸಾವರ್ಕರ್, ಸ್ವಾಮಿ ವಿವೇಕಾನಂದ, ಗಾಂಧೀಜಿ, ಸರ್ದಾರ್ ಪಟೇಲ್ ಎಲ್ಲರೂ ಅಕ್ಕಪಕ್ಕದಲ್ಲೇ ಚಿತ್ರಣಗೊಂಡ ಫ್ಲೆಕ್ಸ್‌ಗಳು, ಸಂಪೂರ್ಣ ನಗರಗಳನ್ನೇ ಆವರಿಸಿಕೊಳ್ಳುವ ಕೇಸರಿ ಮತ್ತು ಹಸಿರು ಬಾವುಟ-ಬಂಟಿಗ್‌ಗಳ ಅಬ್ಬರದ ನಡುವೆ ನೀಲಿ ಮತ್ತು ಬಿಳುಪಿನ ಬುದ್ಧನ ನಿರ್ಮಲ ನಗುವಿಗೆ ಸ್ಥಾನವೇ ಇರುವುದಿಲ್ಲ.

2ನೇ ಪುಟಕ್ಕೆ...

ಜರ್ಮನಿಯಲ್ಲಿ 'ನಮ್ಮ ಕನ್ನಡ ಶಾಲೆ'

ಕನ್ನಡ ಮಾತನಾಡಿದರೆ ಎಲ್ಲಿ ತಮ್ಮ ಘನತೆ ಕುಗ್ಗಲಿದೆಯೋ ಎಂಬಂಥ ಮನಸ್ಥಿತಿ ನಮ್ಮ ಕರ್ನಾಟಕದಲ್ಲಿದೆ. ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿ, ಮನೆಯಲ್ಲೂ ಕನ್ನಡ ಮರೆಸಿ, ಇಂಗ್ಲಿಷಿನಲ್ಲೇ ಮಾತನಾಡಿ ಆ ಮಕ್ಕಳಿಗೆ ಕನ್ನಡವೇ ಆಡಲು, ಬರೆಯಲು ಬರದಂಥ ದುಃಸ್ಥಿತಿ ಕರುನಾಡಿನದ್ದಾಗಿದೆ. ವಿದ್ಯಾರ್ಥಿಗಳ ಕೊರತೆಯಿಂದ ಅದೆಷ್ಟೋ ಕನ್ನಡ ಶಾಲೆಗಳ ಬಾಗಿಲು ಮುಚ್ಚಿವೆ. ಇಂಥ ಪರಿಸ್ಥಿತಿಯಲ್ಲಿ ವಿದೇಶಗಳಲ್ಲಿ ನೆಲೆನಿಂತ ಅನಿವಾಸಿ ಕನ್ನಡಿಗರು ಮಕ್ಕಳಿಗೆ ಕನ್ನಡ ಓದಿ, ಬರೆಯಲು ಕಲಿಸುವ ಮಹತ್ಕಾರ್ಯದಲ್ಲಿ ತೊಡಗಿರುವುದು ಹೆಮ್ಮೆಯ ಸಂಗತಿ. ಅಂಥ ಅನುಭವದ ತುಣುಕು ಇದು.



ಜರ್ಮನಿಯ ಮ್ಯೂನಿಕನಲ್ಲಿ ನಮ್ಮ ಕನ್ನಡ ಶಾಲೆ ಪ್ರಾರಂಭೋತ್ಸವದ ನೋಟ



ರಶ್ಮಿ ನಾಗರಾಜ್

'ಸರ ಸರ ಕನ್ನಡ ಓದಲು ಬರೆಯಲು ಕಲಿಸಿದ ತಾಯಿಗೆ ನಮೋ ನಮೋ... ಸ್ವರವ್ಯಂಜನಗಳ ಪದ್ಧತಿ ಅರುಹಿದ ಶಾರದಾಂಬೆಗೆ ನಮೋ ನಮೋ ...' ಎಂದು ನಮ್ಮ ಶಾಲೆಯಲ್ಲಿ ಮಕ್ಕಳು ಪ್ರಾರ್ಥನೆ ಹಾಡಿ ರಾಷ್ಟ್ರ ಗೀತೆ ಹಾಡುವಾಗ, 'ನಾವೆಲ್ಲಿದ್ದೀವಿ?, ಜರ್ಮನಿಯ ಮ್ಯೂನಿಕ್ ನಗರದಲ್ಲೋ ಅಥವಾ ಕರ್ನಾಟಕದಲ್ಲೋ' ಎಂದು ನಮಗೇ ಒಮ್ಮೊಮ್ಮೆ ಸಂದೇಹವಾಗುತ್ತದೆ.

ಇಲ್ಲಿ 'ನಮ್ಮ ಕನ್ನಡ ಶಾಲೆ ಜರ್ಮನಿ'ಯ ಚಟುವಟಿಕೆಯ ಬಗ್ಗೆ ಸವಿಸ್ತಾರವಾಗಿ ನಿಮ್ಮೊಂದಿಗೆ ಹಂಚಿಕೊಳ್ಳುವ ಆಶಯ. ಜರ್ಮನಿಯ ಮೊಟ್ಟಮೊದಲ ಕನ್ನಡ ಬಳಗದ ರೂಪದಲ್ಲಿ 2011ರಲ್ಲಿ ಮ್ಯೂನಿಕ್ ಕನ್ನಡ ಬಳಗ ಅಸ್ತಿತ್ವಕ್ಕೆ ಬಂತು. 2015ರಲ್ಲಿ ಸಿರಿಗನ್ನಡಕೂಟ ಆಗಿ ಮರುನಾಮಕರಣಗೊಂಡು ಇಂದಿಗೆ 12 ವರ್ಷಗಳಾದವು.

2021ರ ಡಿಸೆಂಬರ್‌ನಲ್ಲಿ ಮಕ್ಕಳಿಗಾಗಿ ಕನ್ನಡ ಕಲಿಸುವ ಕಾರ್ಯಕ್ಕೆ ಬುನಾದಿ ಹಾಕಿದೆವು. ನಮ್ಮ ಸ್ನೇಹಿತರಾದ ಕನ್ನಡ ಸಂಸ್ಕೃತಿ ಇಲಾಖೆಯ ರಮೇಶ್ ಚಂದ್ರಶೇಖರ್ ಅವರನ್ನು ಸಂಪರ್ಕಿಸಿದಾಗ ಕೂಡಲೇ ಅವರು ಆಗಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಟಿ.ಎಸ್. ನಾಗಾಭರಣ ಅವರನ್ನು ಪರಿಚಯಿಸಿಯೇ ಬಿಟ್ಟರು. ತಕ್ಷಣವೇ ಪ್ರಾಧಿಕಾರದ ಕಾರ್ಯದರ್ಶಿ ಹಾನಗಲ್, ನಲಿ-ಕಲಿ ರವೀಂದ್ರ ಹಾಗೂ ತಂಡದವರ ಜೊತೆ ಒಂದು ಆನ್‌ಲೈನ್ ಕಾರ್ಯಾಗಾರವನ್ನು ಆಯೋಜಿಸಿ, ಶಿಕ್ಷಕರಾಗಲು ಆಸಕ್ತಿಯಿದ್ದ ಸ್ನೇಹಿತರಿಗೆ ತರಬೇತಿಯನ್ನೂ ಕೊಡಿಸಲಾಯಿತು.

ಮ್ಯೂನಿಕ್ ಹಾಗೂ ಸುತ್ತಮುತ್ತಲಿನ ಪ್ರದೇಶದ ಮಕ್ಕಳಿಗೆ ಆಫ್‌ಲೈನ್ ಶಾಲೆ ಹಾಗೂ ಇತರ ಊರುಗಳ ಮಕ್ಕಳಿಗೆ ಆನ್‌ಲೈನ್ ಶಾಲೆ-ಹೀಗೆ ಎರಡೂ ಮಾದರಿ ಆಯೋಜಿಸಿ, 2022ರ ಜೂನ್ ತಿಂಗಳಲ್ಲಿ ಶಿವಾಲಯಮ್ ದೇವಾಲಯದಲ್ಲಿ ಪ್ರಾರಂಭೋತ್ಸವದ ಮೂಲಕ ನಮ್ಮ ಕನ್ನಡ ಶಾಲೆಗೆ ಚಾಲನೆ ನೀಡಲಾಯಿತು. ಅವತ್ತು ನಮ್ಮ ಮಕ್ಕಳಲ್ಲಿ, ಪೋಷಕರಲ್ಲಿ ಹಾಗೂ ಶಿಕ್ಷಕರ ತಂಡದವರಲ್ಲಿ ಕಂಡ ಉತ್ಸಾಹ, ಒಲುಮೆ, ಉಲ್ಲಾಸ ಇವತ್ತಿಗೂ ಹಾಗೆಯೇ ಮುಂದುವರಿದಿದೆ.

3ನೇ ಪುಟಕ್ಕೆ...



ಕಾರ್ಯಕ್ರಮವೊಂದರಲ್ಲಿ ಜನಪದ ಗೀತೆ ಹಾಡಿದ ಬಾನಂದೂರು ಕೆಂಪಯ್ಯ – ಪ್ರಜಾವಾಣಿ ಚಿತ್ರ

ಕಿನ್ನೂರಿ ನುಡಿಸೋಣ ದನಿ ಚೆಂದ

ಮೂಡ್ನಾಕೂಡು ಚಿನ್ನಸ್ವಾಮಿ

ತಮ್ಮ ಕಂಚಿನ ಕಂಠಸಿರಿಯಿಂದ ನಾಡಿನಾದ್ಯಂತ ಮನೆಮಾತಾಗಿರುವ ಬಾನಂದೂರು ಕೆಂಪಯ್ಯನವರಿಗೆ 72ರ ಹರೆಯ. ಉದ್ಯೋಗ ನಿಮಿತ್ತ ಮೈಸೂರು, ಧಾರವಾಡ, ಕಲಬುರಗಿ, ಮಂಗಳೂರು, ಬೆಂಗಳೂರು ವಲಯಗಳಲ್ಲಿ ಕೆಲಸ, ವಾಸ ಮಾಡಿರುವುದರಿಂದ ಅವರ ಕಾರ್ಯವ್ಯಾಪ್ತಿ ದೊಡ್ಡದು, ಗೆಳೆಯರ ಬಳಗವೂ ದೊಡ್ಡದು. ಅವರ ಗೆಳೆಯರೆಲ್ಲರೂ ಕೂಡಿ ಕೆಂಪಯ್ಯನವರ ಜೀವನ- ಸಾಧನೆ ಕುರಿತು 'ಬಾನಂದದ ಕಿನ್ನೂರಿ' ಎಂಬ ಪುಸ್ತಕವನ್ನು ಪ್ರಕಟಿಸುವ ಮೂಲಕ ಈ ಸವಿನೆನಪನ್ನು ಚಿರಸ್ಥಾಯಿಯಾಗಿಸುತ್ತಿದ್ದಾರೆ.

ಇಂದಿನ ರಾಮನಗರ ಜಿಲ್ಲೆಯ ಬಾನಂದೂರಿನ ಕೇರಿಯಲ್ಲಿ ಹುಟ್ಟಿ ಬೆಳೆದ ಕೆಂಪಯ್ಯ ತನ್ನ ಸರೀಕರಂತೆ ಬಡತನ, ಹಸಿವು, ಅಸ್ಪೃಶ್ಯತೆ ಎಲ್ಲವನ್ನೂ ಉಂಡವರು. ಜೀವನೋಪಾಯಕ್ಕಾಗಿ ಆಕಾಶವಾಣಿಯಲ್ಲಿ ಹುದ್ದೆ ಹಿಡಿದರು. ಒಬ್ಬ ಕಲಾವಿದನಿಗೆ ಹುದ್ದೆಯೇ ಸರ್ವಸ್ವವಾಗುವುದಿಲ್ಲ. ತನ್ನ ಒಳದನಿಯ ಸೆಳೆತಕ್ಕೆ ತನುಮನವನ್ನು ಅರ್ಪಿಸಿಕೊಳ್ಳುತ್ತಾನೆ. ಒಮ್ಮೆ ಅಪ್ಪಗೆರೆ ಗ್ರಾಮದ ಮಠದಲ್ಲಿ ಸಂನ್ಯಾಸಿಯೊಬ್ಬರು ತೀರಿಕೊಂಡಿದ್ದರು. ಬಾನಂದೂರು ಅವರನ್ನು ನೋಡಲು ಮಠಕ್ಕೆ ಹೋಗಿದ್ದರು. ಮೃತರನ್ನು ಅಲ್ಲಿ ಮಣ್ಣು ಮಾಡುವಾಗ ಸುತ್ತಲೂ ಇದ್ದ ಸಾಧುಗಳು ಒಂದು ತತ್ತ್ವಪದ ಹಾಡುತ್ತಿದ್ದರು. ಅದೇ 'ತನಿವಿನೊಳಗನುದಿನವಿದ್ದು ಎನ್ನ ಮನಕೊಂದ ಮಾತ ಹೇಳದೆ ಹೋದೆ ಹಂಸಾ'. ಆ ಕ್ಷಣದಲ್ಲಿ ಕೆಂಪಯ್ಯನವರ ಹೃದಯ ಹಿಂಡಿದಂತಿತ್ತು. ಅಲ್ಲಿಯೇ ಪದವನ್ನು ಕೇಳಿ ಬರೆದುಕೊಂಡರು. ಹಾಡಿ ಅಭ್ಯಾಸ ಮಾಡಿದರು. ಇವರ ಕಂಚಿನ ಕಂಠಕ್ಕೆ ಹೇಳಿ ಮಾಡಿಸಿದಂತಿತ್ತು ಆ ಪದ. ಸ್ವರ ತಪ್ಪದೆ ಸ್ಥಾಯಿಗೆ ಏರುವ ಇವರ ಧ್ವನಿಯನ್ನು ಕೊಂಡಾಡದವರಿಲ್ಲ. ಅದು ಇಂದಿಗೂ ಬಾನಂಗಳದಲ್ಲಿ ತೇಲುತ್ತಾ ಜನರ ಕಿವಿಗೆ ಇಂಪನ್ನು ತನುವಿಗೆ ತಂಪನ್ನು ಎರೆಯುತ್ತಿದೆ. ಜೀವನದ ಕ್ಷಣಿಕತೆಯನ್ನು ಸಾರುವ ಆ ತತ್ತ್ವಪದ ಬಾನಂದೂರರಿಗೆ ಅಪಾರ ಕೀರ್ತಿಯನ್ನು ತಂದುಕೊಟ್ಟಿದೆ. 'ಬಿದಿರೂ ನಾನಾರಿಗಲ್ಲದವಳು' ಎಲ್ಲೋ ಜೋಗಪ್ಪ ನಿನ್ನರಮಾನೆ' 'ಚೆಲ್ಲಿದರು ಮಲ್ಲಿಗೆಯಾ' 'ತಿಂಗಾಳು ಮೊಳಗಿದವೊ ರಂಗೋಲಿ ಬೆಳಗಿದವೋ' 'ಮೊಗ್ಗಾಗಿ ಬಾರೊ ತುರುಬೀಗೆ' ಇಂತಹ ಇನ್ನೂ ಹತ್ತು ಹಲವು ಹಾಡುಗಳು ಬಾನಂದೂರರ ಧಾಟಿಯಲ್ಲಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ.

ಬಾನಂದೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಬಿ.ಎ. (ಆನರ್ಸ್) ಓದುವಾಗ ಪಿ. ಲಂಕೇಶರ ಶಿಷ್ಯರಾಗಿದ್ದರು. ಒಮ್ಮೆ ಗಣರಾಜ್ಯೋತ್ಸವದ ಅಂಗವಾಗಿ ಕಾರ್ಯಕ್ರಮವನ್ನು ಕೊಡಲು ಪ್ರತಿಭಾನ್ವಿತ ಕಾಲೇಜು ವಿದ್ಯಾರ್ಥಿಗಳ ತಂಡವೊಂದು ದೆಹಲಿಗೆ ಹೋಗಬೇಕಾಗಿಬಂತು. ಜಾನಪದ ಗಾಯನದಲ್ಲಿ ಆಯ್ಕೆಯಾಗಿದ್ದ ಕೆಂಪಯ್ಯನವರೂ ಅಲ್ಲಿದ್ದರು. ತಂಡದ ನೇತೃತ್ವವನ್ನು ಲಂಕೇಶ್ ವಹಿಸಿದ್ದರು. ರೈಲು ಪ್ರಯಾಣದಲ್ಲಿ ಎಲ್ಲರೂ ಸಸ್ಯಾಹಾರಿ ಊಟವನ್ನು ತರಿಸಿಕೊಂಡರೆ, ಇವರು ಮಾಂಸದೂಟ ಹೇಳಿದರಂತೆ. ಊಟವಾದ ಮೇಲೆ ಮೇಷ್ಟ್ರು ಹತ್ತಿರ ಕರೆದು, 'ನೀನು ಯಾವ ಜಾತಿ?' ಎಂದು ಕೇಳಿ ಜಗ್ಗಿ ಗದರಿದರು. ದೆಹಲಿಯ ಮೆರವಣಿಗೆಯಲ್ಲಿ ಕರ್ನಾಟಕದ ಟ್ಯಾಬ್ಲೋ ಹೊರಟಿತ್ತು. ಅದರಲ್ಲಿ ಬೂಟ್ ಪಾಲಿಷ್ ಮಾಡುವ ಮೋಚಿಯ ಸ್ಥಿರಚಿತ್ರವೊಂದಿತ್ತು. ಅದನ್ನು ನಟಿಸಲು ಯಾವ ವಿದ್ಯಾರ್ಥಿಯೂ ಒಪ್ಪಲಿಲ್ಲವಂತೆ! ಆಗ ಬಾನಂದೂರು ಆ ಪಾತ್ರವನ್ನು ನಿರ್ವಹಿಸಿದರು. ಲಂಕೇಶರಿಗೆ ಖುಷಿಯಾಯಿತು. ಅಂದಿನಿಂದ ಅವರ ಮೆಚ್ಚಿನ ಶಿಷ್ಯರಾದರು.

ಆಕಾಶವಾಣಿಯೊಂದೇ ಪ್ರಬಲ ಮಾಧ್ಯಮವಾಗಿದ್ದ ಆ ಕಾಲದಲ್ಲಿ ಬಾನಂದೂರು ಜಾನಪದ ಕ್ಷೇತ್ರವನ್ನು ವಿಸ್ತರಿಸಲು ಅವರ ವೃತ್ತಿ ಸಹಕಾರಿಯಾಯಿತು. ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಕರ್ತವ್ಯದಲ್ಲಿದ್ದಾಗ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಅನೇಕ ಗ್ರಾಮೀಣ ಪ್ರತಿಭೆಗಳನ್ನು ಮತ್ತು ಹೊಸ ಪ್ರಕಾರಗಳನ್ನು ನಾಡಿಗೆ ಪರಿಚಯಿಸಿದರು. ಸಹೋದ್ಯೋಗಿ ಧ್ವನಿಮುದ್ರಕರೊಂದಿಗೆ ಹಳ್ಳಿಗಳನ್ನು ಹುಡುಕಿಕೊಂಡು ಹೊರಟುಬಿಡುತ್ತಿದ್ದರು. ಗ್ರಾಮೀಣ ಕಲೆಗಳು ಜಾತಿಯೊಂದಿಗೆ ತಳುಕುಹಾಕಿಕೊಂಡಿರುವುದು ಆಶ್ಚರ್ಯವೆನಿಸಿದರೂ ಸತ್ಯ. ಕೆಂಪಯ್ಯ ಸರ್ಕಾರಿ ನೌಕರನಾಗಿದ್ದರೂ ಅಸ್ಪೃಶ್ಯತೆ ಅವರ ಚರ್ಮಕ್ಕೆ ಅಂಟಿಕೊಂಡಿದ್ದೂ ಸತ್ಯ. ದಲಿತ ಕೇರಿಗಳನ್ನು ಬಿಟ್ಟರೆ ಮೇಲಿನವರ ಹಟ್ಟಿಗಳಿಗೆ ಹೋಗುವುದು ಅವರಿಗೆ ನಿಷಿದ್ಧವಾಗಿತ್ತು. ಆದ್ದರಿಂದ ಊರ ಗುಡಿ ಅಥವಾ ಒಂದು ಮರದ ಬಳಿಗೆ ಕಲಾವಿದರನ್ನು ಕರೆಸಿ ಧ್ವನಿಮುದ್ರಣ ಮಾಡಿಕೊಳ್ಳುತ್ತಿದ್ದರು. ಒಂದು ಹಳ್ಳಿಯಲ್ಲಿ ಅಂಗವಿಕಲ ಹೆಣ್ಣುಮಗಳೊಬ್ಬಳು ಒಳ್ಳೆಯ ಹಾಡುಗಾರ್ತಿ. ಆಕೆ ಗುಡಿಯ ಬಳಿಗೆ ಬರಲಾಗದು. ಅವರ ಮನೆಗೆ ಇವರನ್ನು ಕರೆಯಲಾಗದು. 'ನಮ್ಮ ಮನೆಯಲ್ಲಿ ಮಡಿ ಜಾಸ್ತಿ ಅಣ್ಣ, ರೆಕಾರ್ಡ್ ಮಾಡುವುದು ಬೇಡ' ಅಂದುಬಿಟ್ಟಳಂತೆ! ಚೌಡಿಕೆ ಪದಗಳನ್ನು ಹಾಡುತ್ತಿದ್ದವರು ದೇವದಾಸಿಯರು. ಅವರನ್ನು ಒಪ್ಪಿಸುವುದೇ ಕಷ್ಟವಾಗುತ್ತಿತ್ತು. ಗುಮಟೆ ಪದಗಳನ್ನು ಹಾಡುವವರು ಕ್ಷೌರಿಕರು. ಲಂಬಾಣಿ ಜನರು ಹಾಡುವ ಸೇವಾಲಾಲ್ ಭಜನೆಗಳು, ವೀರಶೈವರ ವೀರಗಾಸೆ ಕುಣಿತ, ಜೋಗತಿಯರು ಹಾಡುವ ಎಲ್ಲಮ್ಮನ ಹಾಡುಗಳು ಎಲ್ಲವನ್ನೂ ಸಂಗ್ರಹಿಸುತ್ತಿದ್ದರು. ಸಣ್ಣಾಟ, ದೊಡ್ಡಾಟಗಳನ್ನು ರಾತ್ರಿಯೆಲ್ಲಾ ರೆಕಾರ್ಡ್ ಮಾಡುತ್ತಿದ್ದರು.

ಜನಪದ ವಾದ್ಯ ಸಂಗೀತವನ್ನು ವಿಶೇಷವಾಗಿ ಚರ್ಮವಾದ್ಯ, ತಂತಿವಾದ್ಯ, ಊದುವಾದ್ಯ, ಹಲಗಿ ಮಜಲು, ಕರಡಿ ಮಜಲು ಮುಂತಾದ ವಾದ್ಯಗಳನ್ನು ನುಡಿಸುವ ಜನಪದರನ್ನು ಹುಡುಕಿ ಆಕಾಶವಾಣಿಗೆ ಕರೆತರುತ್ತಿದ್ದರು. ಮರೆತೇಹೋಗಿದ್ದ ಪುರಾತನ ಜನಪದ ಚರ್ಮವಾದ್ಯವಾದ ಜಗ್ಗಲಿಗೆಯನ್ನು ಸಂಶೋಧನೆ ಮಾಡಿ ಹೊರತಂದರು. ಈ ಕೆಲವು ಪ್ರಕಾರಗಳು ಅಲ್ಲಿಯವರೆಗೆ ಹೊರಪ್ರಪಂಚಕ್ಕೆ ತಿಳಿದೇ ಇರಲಿಲ್ಲ. ಅವುಗಳನ್ನು ಪರಿಚಯಿಸಿದ ಕೀರ್ತಿ ಬಾನಂದೂರರಿಗೆ ಸಲ್ಲುತ್ತದೆ. ಅಡ್ಡಿ ಆತಂಕಗಳು ಇದ್ದೇ ಇದ್ದವು. ಶ್ರೋತೃಗಳು ಕೆಲವು ಪ್ರಕಾರದ ಹಾಡುಗಳನ್ನು ಅಶ್ಲೀಲವೆಂದು ಪ್ರಸಾರ ಮಾಡಬೇಡಿ ಎಂದು ನಿಲಯ ನಿರ್ದೇಶಕರಿಗೆ ದೂರು ಬರೆಯುತ್ತಿದ್ದರಂತೆ. ಕೆಂಪಯ್ಯ ಅವುಗಳ ಸಂಗ್ರಹ ಮತ್ತು ಪ್ರಸಾರದ ಪ್ರಾಮುಖ್ಯವನ್ನು ಮೇಲಧಿಕಾರಿಗಳಿಗೆ ಮನವರಿಕೆ ಮಾಡುತ್ತಿದ್ದರು ಮತ್ತು ಆ ಕಲಾವಿದರನ್ನು ಆಕಾಶವಾಣಿ ಕೇಂದ್ರಕ್ಕೆ ಆಹ್ವಾನಿಸಿ, ಹಾಡಿಸುತ್ತಿದ್ದರು. ಹೀಗೆ ಈ ಕಲಾಪ್ರಕಾರಗಳು ಮುಖ್ಯವಾಹಿನಿಗೆ ಬರುವಂತೆ ನೋಡಿಕೊಂಡರು.

ಸಾಧಕ

ಬಾನಂದೂರು ಗಾಯಕನೆಂದೇ ಗುರುತಿಸಿಕೊಂಡಿರುವುದರಿಂದ ಅವರ ಸಾಹಿತ್ಯ ಕಡೆಗಣನೆಗೆ ಒಳಗಾಗಿದೆ ಎಂದು ಹೇಳಬಹುದು. 'ನನ್ನ ಈ ನೆಲದಲ್ಲಿ' ಎಂಬ ಕವಿತೆ ಮತ್ತು 'ಬಯಲುಸೀಮೆಯ ಜಾನಪದ ಕಥೆಗಳು' ಕಥಾಸಂಕಲನ, 'ಸುಡುಗಾಡು ಸಿದ್ಧರು' ಎಂಬ ಸಂಶೋಧನ ಗ್ರಂಥವನ್ನು ಪ್ರಕಟಿಸಿದ್ದಾರೆ. ಸ್ನೇಹಜೀವಿ, ಹಾಸ್ಯಪ್ರಜ್ಞೆಯುಳ್ಳ ಹಸನ್ಮುಖಿ ಕೆಂಪಯ್ಯ ದೂರದರ್ಶನದಲ್ಲಿ ಹಿರಿಯ ಅಧಿಕಾರಿಯಾಗಿದ್ದು, ನಿವೃತ್ತರಾಗಿದ್ದಾರೆ. ಮೊನ್ನೆ ಪಂಡಿತ್ ರಾಜೀವ್ ತಾರಾನಾಥರು ಸರೋದ್ ನುಡಿಸುವಾಗ ಕಲೆ ಕಲಾವಿದನ ಉಸಿರನ್ನು ಜೋಪಾನ ಮಾಡುತ್ತದೆ ಅನ್ನಿಸಿಬಿಟ್ಟಿತು. ಬಾನಂದೂರು ಅವರಿಗೆ ಇನ್ನೂ ಹಾಡುವ ಕಸುವಿದೆ. ಹೀಗೆ ಹಾಡುತ್ತಲೇ ಇರಲಿ ಎಂದು ಹಾರೈಸೋಣ. ❖

> ಭಾವಗೀತೆಯಲ್ಲಿ ಕಾಳಿಂಗರಾಯರನ್ನು ನೆನಪಿಸಿಕೊಳ್ಳುವಂತೆ ಜಾನಪದ ಗೀತೆಯಲ್ಲಿ ಬಾನಂದೂರು ಕೆಂಪಯ್ಯ ಪಿತಾಮಹನಂತೆ ಕಂಡರೆ ಅತಿಶಯವಲ್ಲ. ಇವರ ಜೀವನ-ಸಾಧನೆ ಕುರಿತು 'ಬಾನಂದದ ಕಿನ್ನೂರಿ' ಎಂಬ ಪುಸ್ತಕ ಪ್ರಕಟಗೊಂಡಿದೆ...

ಮಾನವಿಕ ಅಧ್ಯಯನಗಳ 'ಲೋಕಭಿತ್ತಿ'ಗೆ ಹಿಡಿದ ಕನ್ನಡಿ


ಎಂ.ಎಸ್. ಆಶಾದೇವಿ

ಈ ಕೃತಿ ಮಾನವಿಕ ಅಧ್ಯಯನಗಳು ಕಳೆದ ಒಂದೆರಡು ದಶಕಗಳಿಂದ ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿರುವ 'ಲೋಕಭಿತ್ತಿ'ಗೆ ಅತ್ಯುತ್ತಮ ಮಾದರಿಯಾಗಿದೆ. ಮಾನವಿಕ ಅಧ್ಯಯನಗಳು ಅಂತರ್‌ಶಿಸ್ತೀಯ, ಬಹುಶಿಸ್ತೀಯ ಎನ್ನುವ ಆಯಾಮಗಳನ್ನು ಇನ್ನೂ ವಿಸ್ತರಿಸಿಕೊಂಡು ಲೋಕ ಸಮಸ್ತವನ್ನೂ ಒಳಗೊಂಡು ತಮ್ಮ ತಾತ್ವಿಕತೆಯನ್ನು ಗಟ್ಟಿಗೊಳಿಸಿಕೊಳ್ಳುವ, ಸೂಕ್ಷ್ಮಗೊಳಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿವೆ. ಯಾವ ಕ್ಷೇತ್ರವೂ ವರ್ಜ್ಯವಲ್ಲ ಅಥವಾ ಅವುಗಳು ಸಮಾನಾಂತರವಾಗಿಯೂ ಇರಬೇಕಾಗಿಲ್ಲ. ಅವು ಒಂದಕ್ಕೊಂದು ಪೂರಕವಾಗಬಲ್ಲವು ಎನ್ನುವುದನ್ನು ನಂಬಿರುವ ನಿಲುವು ಇದು. ವರ್ತಮಾನದ ಇತಿಹಾಸ ಮಾತ್ರವಲ್ಲದೆ ಇತಿಹಾಸದ ವರ್ತಮಾನವು, ಈ ಎರಡರಿಂದ ಕಾಣಿಸುವ ಭವಿಷ್ಯದ ಹೊಳಹುಗಳನ್ನು ಈ ಸಮಗ್ರತೆ ಅಥವಾ ಅಖಂಡ ತಾತ್ವಿಕತೆಯಿಂದ ಸಾಧ್ಯವಾಗಬಲ್ಲದು ಎನ್ನುವುದನ್ನು ಈ ಮಾದರಿಯ ಅಧ್ಯಯನಗಳು ಸಾಬೀತು ಪಡಿಸುತ್ತಿವೆ.

ಚೆನ್ನಿಯವರ ಈ ಕೃತಿಯಲ್ಲಿ ಅಂಬೇಡ್ಕರ್ ಮತಾಂತರದ ಪ್ರಶ್ನೆಗಳು, ತೇಲ್ತುಂಬ್ಡೆಯವರ ಮಹಾಡ್ ವ್ಯಾಖ್ಯಾನದ ಮಗ್ಗುಲಲ್ಲೇ ಬೇಂದ್ರೆ ಕಾವ್ಯದ ಅಭ್ಯಾಸದ ಕೆಲವು ಟಿಪ್ಪಣಿಗಳು ಬರುವುದು ಆಕಸ್ಮಿಕವೂ ಅಲ್ಲ, ಭಿನ್ನ ರುಚಿಯದ್ದೂ ಅಲ್ಲ. ಅವುಗಳ ನಡುವೆ ಜೈವಿಕ ಸಂಬಂಧವಿದೆಯೆಂದೇ ಅವು ಒಂದೇ ಹಣಿಗೆಯಲ್ಲಿ ಸೇರಿಕೊಂಡಿವೆ.

ಇಲ್ಲಿನ ಬರಹಗಳ ಹಿಂದಿನ ಮನಸ್ಥಿತಿ ಚೆನ್ನಿಯವರ ಸ್ಥಾಯಿಭಾವವೆಂದರೂ ನಡೆಯುತ್ತದೆ. ಸಾರ್ವಜನಿಕ ಬುದ್ಧಿಜೀವಿಯು ತಮ್ಮ ಪಾತ್ರ ಮತ್ತು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಇರಾದೆ ಅವರಿಗೆ ಇಲ್ಲ ಎಂದೇ ಈ ಬರವಣಿಗೆ ಅವರಿಂದ ಸಾಧ್ಯವಾಗಿದೆ.

'ಮನಸ್ಸಿನಿಂದ ಜಾತಿ, ಅಸ್ಪೃಶ್ಯತೆ ಇವುಗಳನ್ನು ತೊಡೆದುಹಾಕಲಾಗದ ಸಮುದಾಯವು ಹಿಂದುತ್ವದ ವಿರೋಧಿಗಳೆಂದು 'ಇತರ'ರನ್ನು ಕಲ್ಪಿಸಿ ಅವರ ಮೇಲೆ ದಾಳಿ ಮಾಡುವಾಗ ಯಾವ ನೈತಿಕ ಪ್ರತಿರೋಧವನ್ನು ತೋರಬಲ್ಲದು? ಬಂಡವಾಳಶಾಹಿಯು ತನ್ನ ಯಾವ ಸ್ವರೂಪದಲ್ಲಿಯೂ ಸಮಾನತೆಯನ್ನು ಬೆಂಬಲಿಸಲಾರದು ಎಂದು ಗೊತ್ತಿರುವಾಗ ಅದರಿಂದ ಪ್ರೇರಿತವಾದ ಪ್ರಗತಿ, ಅಭಿವೃದ್ಧಿಗಳು ನಮಗೆ ಆಪ್ಯಾಯಮಾನವಾಗಿ ಕಂಡರೆ ಪರಿಹಾರವು ಎಲ್ಲಿಂದ ಬರಬೇಕು?'



ಪು: 288 ₹280

ಸಾಂಸ್ಕೃತಿಕ ರಾಜಕೀಯ: ಇಂದಿನ ಇತಿಹಾಸ
ಲೇ: ರಾಜೇಂದ್ರ ಚೆನ್ನಿ
ಪ್ರ: ಅಭಿರುಚಿ ಪ್ರಕಾಶನ
ಸಂ: 9980560013

ಇದು ವ್ಯಕ್ತಿಗಳಲ್ಲ, ಒಟ್ಟಾಗಿ ಸಮುದಾಯವೇ ಹಾಕಿಕೊಳ್ಳಬೇಕಾದ ಅಪ್ರಿಯ ಪ್ರಶ್ನೆಯಾಗಿದೆ. ನಮ್ಮ ದ್ವಂದ್ವಗಳು ಆಯ್ಕೆಯ ಪ್ರಕ್ರಿಯೆಯನ್ನು ಇನ್ನೂ ಸಂಕೀರ್ಣಗೊಳಿಸಿರುವುದು ಮಾತ್ರ ಸಮಸ್ಯೆಯಲ್ಲ, ಅವು ಒಂದಕ್ಕೊಂದು ತಳುಕು ಹಾಕಿಕೊಂಡಿರುವ ಸಂಗತಿಯನ್ನು ನಾವು ಅರ್ಥ ಮಾಡಿಕೊಳ್ಳದೇ ಹೋದರೆ ಎದುರಾಗುವ ದುರ್ದಮ್ಯ ವಾಸ್ತವನ್ನು ಕುರಿತ ಆತಂಕ ಇಲ್ಲಿನ ಎಲ್ಲ ಬರೆಹಗಳಲ್ಲೂ ಕಾಣುತ್ತದೆ.

ವಿಮರ್ಶೆ

ಈ ಕೃತಿಯನ್ನು 'ಆಪತ್ಕಾಲೀನ ಕೃತಿ' ಎಂದು ನೋಡುವುದು ಸರಿ. ತುರ್ತು ಪರಿಸ್ಥಿತಿಯ ಈ ಕಾಲಕ್ಕೆ ಯಾರು ಹೊಣೆ ಎನ್ನುವುದರ ಶವಪರೀಕ್ಷೆಯಾಗಲು ಸಾಧ್ಯವಿಲ್ಲ; ಅದು ಅದರ ಶಕ್ತಿಯನ್ನು ಇನ್ನೂ ಹೆಚ್ಚಿಸಿಕೊಳ್ಳುತ್ತಲೇ ಇರುವುದರಿಂದ. ಅಂಬೇಡ್ಕರ್ ಎದುರಿಸಿದ ಮತಾಂತರದ ಸವಾಲುಗಳನ್ನು, ಮಹಾಡ್ ಕೆರೆಯನ್ನು ಕುರಿತ ತೇಲ್ತುಂಬ್ಡೆಯವರ ಅಧ್ಯಯನಗಳನ್ನು ನಾವು ಹೊರಗಿನಿಂದ ಅಭ್ಯಾಸ ಮಾಡುವುದಲ್ಲ, ಅವು ಒಳಗಿನಿಂದ ನಮ್ಮ ವರ್ತಮಾನವನ್ನು ಎದುರಿಸಲು ಬೇಕಾಗುವ ನೋಟಗಳನ್ನು, ಹತ್ಯಾರಗಳನ್ನು ಹೇಗೆ ಒದಗಿಸಿಕೊಡುತ್ತವೆ ಎಂಬುದನ್ನು ದಕ್ಕಿಸಿಕೊಳ್ಳಬೇಕು ಎನ್ನುವುದನ್ನು ಚೆನ್ನಿಯವರು ಚರ್ಚಿಸುತ್ತಾ ಹೋಗುತ್ತಾರೆ.

ಈ ದೃಷ್ಟಿಯಿಂದ ವೈದಿಕ ದರ್ಶನದ ವಕ್ತಾರರೆಂದು ಆರಂಭದಲ್ಲಿ ದೂರವಿಟ್ಟಿದ್ದ ಬೇಂದ್ರೆಯವರು ಅವರ ಕಾವ್ಯದ ಅವಿಚ್ಛಿನ್ನ ಭಾಗವಾಗಿರುವ ಪ್ರತಿಭಟನೆ, ಅಂತಃಕರಣದ ಕಾರಣಕ್ಕೆ ಇವತ್ತಿನ ಇತಿಹಾಸಕ್ಕೆ ಅಗತ್ಯವೂ ಅನಿವಾರ್ಯವೂ ಆಗುತ್ತಾರೆ. ಸರಳವಾದ 'ಕರಿಮರಿ ನಾಯಿ' ನಾಗರಿಕತೆಯ ವಿಕಾರವನ್ನು ಕುರಿತ ಪ್ರತಿಭಟನೆಯ ಸಂಕೇತವಾಗುತ್ತಾ ಹೋಗುತ್ತದೆ. ಷೇಕ್ಸ್‌ಪಿಯರನ ಕ್ಯಾಲಿಬನ್ ಘನ ರೂಪಕದಂತೆ ಕಾಣಿಸುತ್ತಾನೆ. 'ನೀನು ನನಗೆ ಭಾಷೆಯನ್ನು ಕಲಿಸಿದೆ, ಅದರ ಪ್ರಯೋಜನವೆಂದರೆ, ಅದರಲ್ಲಿ ನಾನು ನಿನ್ನನ್ನೂ ಶಪಿಸಬಲ್ಲೆ' ಎನ್ನುವ ಮಾತಿನ ಧ್ವನಿ ನಮ್ಮ ಸಂದರ್ಭವನ್ನು ಅದೆಷ್ಟು ಬಗೆಗಳಲ್ಲಿ ಅನುರಣಿಸುತ್ತದೆ ಎನ್ನುವುದನ್ನು ಹೇಳುತ್ತಲೇ ಈ ಕೃತಿ ಇದರ ಸಾಮಾಜಿಕ, ಸಾಂಸ್ಕೃತಿಕ ಎಳೆಗಳನ್ನು ಇದಕ್ಕೆ ಜೋಡಿಸಿ ಅದನ್ನು ಈ ಕಾಲದ ವ್ಯಾಖ್ಯಾವಾಗಿಸುತ್ತದೆ.

ಗೇಲ್ ಆಮ್ ವೆಟ್ ಮತ್ತು ಪಂಡಿತ ರಮಾಬಾಯಿಯವರನ್ನು ಕುರಿತ ಲೇಖನಗಳು, ವಿಠಲ್ ಭಂಡಾರಿ, ಡಿ.ಎಸ್. ನಾಗಭೂಷಣರ ವ್ಯಕ್ತಿಚಿತ್ರಗಳು, ಚಿತ್ತಾಲರ ದಿಗಂಬರ, ಅಮರೇಶ ನುಗಡೋಣಿಯವರನ್ನು ಕುರಿತ ಲೇಖನಗಳು, ಮತ ಪಂಥ, ರಾಷ್ಟ್ರೀಯತೆ , ಜಾತಿ ರಾಜಕಾರಣದ ವಿಶ್ಲೇಷಣೆ, ನಮ್ಮ ಕಾಲಕ್ಕೆ ಬೇಕಾದ ಕುವೆಂಪು ಸಂಹಿತೆ... ಈ ಲೇಖನಗಳು ಮುಖ್ಯವಾದವು.

ಚೆನ್ನಿಯವರ ಆಳವಾದ ಓದು, ಒಳಗಣ್ಣಿನಿಂದ ಅವುಗಳನ್ನು ಉದ್ದೇಶಿತ, ಮೇಲ್ನೋಟದ ಚೌಕಟ್ಟಿನಿಂದ ಆಚೆ ತಂದು ಹೊಸ ಆಯಾಮದಲ್ಲಿ ಇಡಬಲ್ಲ ಪ್ರತಿಭೆ ಈ ಎಲ್ಲವೂ ಈ ಕೃತಿಯ ಓದನ್ನು ಒಂದು ಗಾಢವಾದ ಅನುಭವವಾಗಿಸುತ್ತವೆ.

ನಿಂತ 'ಹೆಜ್ಜೆ'ಯನ್ನು, ಆ ಹೆಜ್ಜೆಯ ಒತ್ತು, ಆ ಹೆಜ್ಜೆಯ ತಾವು, ಅದನ್ನು ಇಡುವಾಗಿನ ಮನಸ್ಥಿತಿ, ತಾನೇ ಇಟ್ಟ, ಇಡುತ್ತಿರುವ ಹೆಜ್ಜೆಯ ಗುರುತನ್ನು ಅದು ತನ್ನದಲ್ಲ ಎನ್ನುವ ಆತ್ಮವಂಚನೆಯ ನೆಲೆಗಳು, ಅಂದಿಗೂ ಇಂದಿಗೂ ಮೀರಿಕೊಳ್ಳಲಾಗದ ತರತಮದ ಉಸುಕಿನಲ್ಲಿ ಕುಸಿಯುತ್ತಲೇ ಇರುವ ಸಮುದಾಯದ ಕುಸಿತವನ್ನು, ತಾನೂ ಇದರ ಒಂದು ಭಾಗ ಎನ್ನುವ ಶೋಧದಲ್ಲಿ, ಪ್ರಾಮಾಣಿಕತೆ ಮತ್ತು ಸ್ವಪ್ರಮಾಣದಲ್ಲಿ ಕಾಣುವ ಮನಸ್ಥಿತಿ ಇಂದಿನ ಅಗತ್ಯವೆಂದೇ ನನ್ನ ಮಟ್ಟಿಗೆ ಇದು ನಮ್ಮ ಕಾಲದ ಮುಖ್ಯವಾದ ನಿರೂಪಣೆಗಳಲ್ಲಿ ಒಂದು ಎನ್ನಿಸುತ್ತದೆ. ❖

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಮೂಲ- ಅಮೃತಾ ಪ್ರೀತಮ್, ಅನುವಾದ- ನಿವೇದಿತಾ ಎಚ್. ಅವರ **ಒಂದು ನಿಟ್ಟುಸಿರು...**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ವೀ. ಪ. ಬಳಿಗಾರ ಅವರ **ಯಮಪುರಿ**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಪ್ರತಿಮಾ ರಾಜಕಾರಣದ...

1ನೇ ಪುಟದಿಂದ...

ಸಹಬಾಳ್ವೆ ಮತ್ತು ಸಹಿಷ್ಣುತೆಯ ಪರಂಪರೆಯನ್ನು ಹೊಂದಿರುವ ಬಹುಸಂಸ್ಕೃತಿಯ ಭಾರತ ನಿಧಾನವಾಗಿ ವಿಘಟನೆಯ ಹಾದಿ ಹಿಡಿಯುತ್ತಿರುವುದು ಆರೋಗ್ಯಕರ ಲಕ್ಷಣವಂತೂ ಅಲ್ಲ. ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ 'ಆರ್ಗ್ಯುಮೆಂಟೇಟಿವ್ ಇಂಡಿಯನ್' ಕೃತಿಯಲ್ಲಿ ಗುರುತಿಸಿರುವಂತೆ, ಧಾರ್ಮಿಕ, ಆಧ್ಯಾತ್ಮಿಕ ಅನುಸಂಧಾನ ಮತ್ತು ಚರ್ಚೆಯ ಪರಂಪರೆ ಹಿಂದೂ ಸಂಸ್ಕೃತಿ ಮತ್ತು ಭಾರತೀಯ ಅಸ್ಮಿತೆಯ ಅತಿ ಮುಖ್ಯ ಲಕ್ಷಣ.




ಈ ಸಂಕೀರ್ಣವಾದ ಪರಂಪರೆಯಲ್ಲಿ ಭಕ್ತಿ ಪಂಥದ ದಾಸರ ದೈವ ಶರಣಾಗತಿಯ ಕೀರ್ತನೆಗಳು, ಪದಗಳೂ ಇವೆ; ಅಲ್ಲಮ ಪ್ರಭುವಿನ ಕ್ರಾಂತಿಕಾರಿ ವಚನಗಳ ಶೈವ ಪ್ರತಿಭೆಯೂ ಇದೆ; ಹಿಂದೂ ಪುನರುಜ್ಜೀವನದ ಹರಿಕಾರ ಶಂಕರಾಚಾರ್ಯರ ಮೇರು ಕಾವ್ಯಾಭಿವ್ಯಕ್ತಿಯೂ ಇದೆ. ಸಂತ ಕಬೀರ, ರವಿದಾಸರ ಆಧ್ಯಾತ್ಮಿಕ ದೋಹೆಗಳು, ಹಾಗೂ ಚಾರ್ವಾಕನ ನಾಸ್ತಿಕತೆಯ ಸಂವಾದವೂ ಇದೆ. ಇಂಥ ವೈವಿಧ್ಯಮಯ ಪರಂಪರೆಯನ್ನು ಹೊಂದಿರುವ ಭಾರತೀಯತೆಯನ್ನು ಏಕರೂಪಿ ಸಂಸ್ಕೃತಿಯನ್ನಾಗಿ ಬದಲಿಸಲು ಸಾಧ್ಯವೇ? ಅಥವಾ ಕೇವಲ ಎರಡು ಕವಲುಗಳಾಗಿ ವಿಂಗಡಿಸಲು ಸಾಧ್ಯವೇ?

ಮುಖ್ಯವಾಹಿನಿಯ ಈ ವಿರಾಟ್ ಪರಂಪರೆಯ ಸಾಗರಕ್ಕೆ ಬಂದು ಸೇರುವ 'ಪ್ರತಿ ಸಂಸ್ಕೃತಿ'ಯ ಸಾವಿರಾರು ನದಿಗಳು ಬಹುಸಂಸ್ಕೃತಿಯ ಭಾರತೀಯ ಅಸ್ಮಿತೆಯೊಂದನ್ನು ಸೃಷ್ಟಿಸಿವೆ. ಇತ್ತೀಚೆಗೆ ಸಾರ್ವಜನಿಕ ವಲಯದಲ್ಲಿ ಪ್ರದರ್ಶಿತವಾಗುತ್ತಿರುವ ಆಕ್ರಮಣಕಾರಿ ಪ್ರತಿಮೆಗಳು, ನಿಜವಾದ ಈ ಭಾರತೀಯ ಸಾಕ್ಷಿಪ್ರಜ್ಞೆಯನ್ನು ವಿರೂಪಗೊಳಿಸದಿರಲಿ. ಕಾನೂನಿನ ಚೌಕಟ್ಟನ್ನು ಮೀರಿ, ಧಾರ್ಮಿಕ ನಂಬಿಕೆಯ ತಳಹದಿಯ ಮೇಲೆ ನಿಂತ ಸಂಕೇತಗಳ ಈ ಶೀತಲ ಸಮರ ಸಹಿಷ್ಣುತೆಯ ತಿಳಿನೀರನ್ನು ಕದಡದಿರಲಿ. ❖

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ನೇಗಿಲ ಯೋಗಿ



ಕುವೆಂಪು ಅವರು ರೈತನನ್ನು 'ನೇಗಿಲಯೋಗಿ' ಎಂದು ಕರೆದಿದ್ದಾರೆ. 'ನೊಗ'ವನ್ನು 'ಯೋಗ' ಎಂದು ಕರೆಯುವರು. ನೊಗ ಕಟ್ಟುವಿಕೆಗೆ 'ಯೋಗ'ವೆನ್ನುವರು. ಹೊಲ ಉಳಲು ನೇಗಿಲಿಗೆ ಎತ್ತನ್ನು ಕಟ್ಟುವುದನ್ನು ನೊಗ ಹೂಡು, ಆರು ಕಟ್ಟು ಎಂದು ಹೇಳುತ್ತಾರೆ. ಅದು ಅವರಿಗೆ 'ಹೊನ್ನಾರು'. ಯೋಗಿಯೆಂದರೆ 'ಚಿತ್ತವೃತ್ತಿ ನಿರೋಧ ಮಾಡುವವನು; ಯತಿ, ತಪಸ್ವಿ'. ರೈತನು ಮಳೆಬಿದ್ದು ಹದಗೊಂಡ ನೆಲವನ್ನು ನೇಗಿಲಿನಿಂದ ಉಳುಮೆ ಮಾಡಲು ತೊಡಗಿದಾಗಿನಿಂದ ಬೆಳೆ ಬಂದು ಕಣ ಮಾಡಿ ಧಾನ್ಯವನ್ನು ಕಣಜಕ್ಕೆ ತುಂಬುವವರೆಗೆ ವ್ಯವಸಾಯದಲ್ಲಿ ತದೇಕ ಚಿತ್ತನಾಗಿರುತ್ತಾನೆ. ಅದು ಅವನು ತನ್ನ 'ಮನಸ್ಸು ಹಾಗೂ ಇಂದ್ರಿಯಗಳನ್ನು ಏಕಚಿತ್ತದಿಂದಿರಿಸಿಕೊಂಡು ದುಡಿವ ಕರ್ಮಯೋಗಿಯ ಲಕ್ಷಣ. 'ಕರ್ಮ ಕೌಶಲ್ಯವೇ ಯೋಗ' ಎಂಬ ಭಾರತೀಯ ಸಂಸ್ಕøತಿ ಚಿಂತನೆಯ ಸಾಕಾರ ರೂಪ. ಈ ಎಲ್ಲ ಯುಕ್ತಾರ್ಥಗಳ ಹಿನ್ನೆಲೆಯಲ್ಲಿ ಕುವೆಂಪು ಅವರು ರೈತನನ್ನು 'ನೇಗಿಲಯೋಗಿ' ಎಂದು ಕರೆದಿದ್ದಾರೆ.

'ಯಾರೂ ಅರಿಯದ ನೇಗಿಲಯೋಗಿಯೆ
ಲೋಕಕೆ ಅನ್ನವನೀಯುವನು.
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸಿದೆ
ನೇಗಿಲಕುಳದೊಲಗಡಗಿದೆ ಕರ್ಮ;
ನೇಗಿಲ ಮೇಲೆಯೆ ನಿಂತಿದೆ ಧರ್ಮ. (ನೇಗಿಲಯೋಗಿ – ಕೊಳಲು)
ನಮ್ಮ ಕಷ್ಟಕೆ ನಷ್ಟವಿಲ್ಲವು, ನಾವೆ ಚಾಗಿಗಳು
ಬ್ರಹ್ಮ ಸೃಷ್ಟಿಯ ದಿವ್ಯದೃಷ್ಟಿಗೆ ನಾವೆ ಯೋಗಿಗಳು! (ಸುಗ್ಗಿಹಾಡು – ಕೊಳಲು)
ಹಾಡು, ನೇಗಿಲಯೋಗಿ;
ಹಾಡೆ ಹದ ಗೆಂಪಾಗಿ
ಹಲದ ಕುಳ ಹರಿತಾಗಿ
ಹೊಲದ ಹೃದಯಕೆ ತಾಗಿ
ಹಾಡು, ನೇಗಿಲಯೋಗಿ
(ಹಾಡು ನೇಗಿಲಯೋಗಿ-ಕದರಡಕೆ) ❖


ಮೊದಲ ಓದು

ಬಿಡಿ ಬಿಡಿ ಬರಹಗಳ ಸಂಗ್ರಹ

ಪತ್ರಕರ್ತ ವಿ.ಹನುಮಂತಪ್ಪನವರ ಬಿಡಿ ಬರಹಗಳ ಸಂಗ್ರಹ ಕೃತಿ 'ಆಕಾಶಕ್ಕೆ ಏಣಿ'. ಆಯಾ ಕಾಲದಲ್ಲಿ ವಿವಿಧ ವಿಷಯಗಳ ಕುರಿತು ಬರೆದ 37 ಬರಹಗಳು ಈ ಕೃತಿಯಲ್ಲಿದೆ. ಮಾಹಿತಿಯುತ, ಕುತೂಹಲಭರಿತ ಲೇಖನಗಳ ಗುಚ್ಛವಿದು. ಕೃತಿಯ ಮೊದಲ ಲೇಖನ 'ಎವರೆಸ್ಟ್‌ಗಿಂತ ಎತ್ತರವಾದ ಶಿಖರ ಆಮ್ನೆಮಾಚಿನ್'. ಚೀನಾ ಮತ್ತು ಟಿಬೆಟ್ ಗಡಿಯರಲ್ಲಿರುವ ಪರ್ವತದ ಕುರಿತಾಗಿನ ಮಾಹಿತಿಯುತ ಬರಹವಿದು.

'ಅದ್ಭುತಗಳ ಲೋಕ ಸಾಲಾರ್‌ಜಂಗ್ ಮ್ಯೂಸಿಯಂ' ಲೇಖನದಲ್ಲಿ ಕಲಾಕೃತಿಗಳ ವಿಶಿಷ್ಟ ಸಂಗ್ರಹ ಹೊಂದಿರುವ ಈ ಮ್ಯೂಸಿಯಂನ ಪರಿಚಯ ಮಾಡಿಕೊಡುತ್ತಾರೆ. ಸಂತೆಬೆನ್ನೂರಿನ ಪುಷ್ಕರಣಿ ಪರಿಚಯಿಸುವ ಲೇಖನವಿದೆ. 'ಗೀತ ಗೋವಿಂದ' ಕಾವ್ಯದ ಕರ್ತೃ ಜಯದೇವನ ಕುರಿತಾದ ಲೇಖನ ಈ ಕವಿಯ ಕುರಿತು ಸಾಕಷ್ಟು ಗೊತ್ತಿಲ್ಲದ ಸಂಗತಿಗಳನ್ನು ಹೇಳುತ್ತದೆ.

ಐತಿಹಾಸಿಕ ಸ್ಥಳಗಳು, ವ್ಯಕ್ತಿಗಳ ಕುರಿತಾಗಿನ ಲೇಖನಗಳೇ ಈ ಕೃತಿಯಲ್ಲಿ ಹೆಚ್ಚಿವೆ. ನಾಡಿನ ವಿವಿಧ ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟಗೊಂಡಿರುವ ಈ ಬರಹಗಳು ಸುಲಭವಾಗಿ ಓದಿಸಿಕೊಂಡು ಹೋಗುವ ಶೈಲಿಯಲ್ಲಿವೆ. ❖



ಪು: 152 ₹200


ಆಕಾಶಕ್ಕೆ ಏಣಿ
ಲೇ: ವಿ.ಹನುಮಂತಪ್ಪ
ಪ್ರ: ಜಿಲ್ಲೆ ಸಮಾಚಾರ ದಿನಪತ್ರಿಕೆ
ಸಂ: 9740112249

ಕಥೆಗಳ ಗುಚ್ಛ 'ಒಂದರ್ಧ ಗುಟುಕು ಚಾ'

ನಾಡಿನ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳ ಗುಚ್ಛ 'ಒಂದರ್ಧ ಗುಟುಕು ಚಾ' ಎಂಬ ಕೃತಿಯಾಗಿ ಮೂಡಿ ಬಂದಿದೆ.

'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ 'ಘಾತ' ಕಾದಂಬರಿಯ ಲೇಖಕ ಎಸ್. ರಮೇಶ್ ನಾಯಕ್ ಅವರ ವಿವಿಧ ಕಥೆಗಳನ್ನು ಸಂಕಲನದ ರೂಪದಲ್ಲಿ ಹೊರತರುವ ಕೆಲಸ ಮಾಡಿರುವುದು ಹುಬ್ಬಳ್ಳಿಯ ನಿಹೀರಾ ಪ್ರಕಾಶನ. ಒಟ್ಟು 20 ಕಥೆಗಳು ಇಲ್ಲಿವೆ. ಎಲ್ಲವೂ ವಿಷಯ ವೈವಿಧ್ಯದಿಂದ ಗಮನ ಸೆಳೆಯುತ್ತವೆ. ಅಂತ್ಯ ಏನಾಗಬಹುದು ಎಂಬ ಕುತೂಹಲವನ್ನು ಕೊನೆಯವರೆಗೂ ಉಳಿಸಿಕೊಳ್ಳುತ್ತವೆ. ಊಹಿಸಲಾಗದ ಅಂತ್ಯವೂ ಹಲವು ಕಥೆಗಳಿಗೆ ಇದೆ. ಮಾನವೀಯ ಅಂತಃಕರಣ ಕಥೆಗಳಾದ್ಯಂತ ಮಿಡಿಯುತ್ತದೆ.

ಬಡತನದ ಹೊಡೆತಕ್ಕೆ ವಂಚಕನಾಗುವ ಚಂದ್ರಪ್ಪನಿಗೆ ಅಮ್ಮನ ಭಾವಚಿತ್ರ ಕಂಡೊಡನೆ ಮನಃಪರಿವರ್ತನೆಯಾಗುವ ಕಥೆಯುಳ್ಳ 'ಒಂದರ್ಧ ಗುಟುಕು ಚಾ' ಈ ಕೃತಿಯ ಜೀವಾಳ. ನಿರುದ್ಯೋಗದ ಕರಾಳತೆ ದರ್ಶಿಸುವ 'ಕೊಲ್ಲುವ ಕಾಯಕ', ಪತ್ತೆದಾರಿ ಕಥೆ 'ಕಾಣೆಯಾದ ಕ್ಯಾಷ್'ನ ರಹಸ್ಯ, ಇಂದಿನ ಮಕ್ಕಳ ಮನಸ್ಥಿತಿ ಹಾಗೂ ಅಂಕಗಳ ಬೆನ್ನುಹತ್ತುವ ಪೋಷಕರ ಸಂಬಂಧದ ಚಿತ್ರಣ ನೀಡುವ 'ಈ ಹುಡುಗಿಗೆ ಏನಾಗಿದೆ?' ಕಥೆ, ಕೌಟುಂಬಿಕ ಸಂಬಂಧಗಳಲ್ಲಿ ಮೂಡುವ ವಾತ್ಸಲ್ಯದ ಸೆಲೆಯ 'ಕ್ಷಣ ಭಂಗುರ', ಭ್ರಮಾಲೋಕದಲ್ಲಿ ಬದುಕದೇ ಜೀವನದ ವಾಸ್ತವಗಳನ್ನು ಎದುರಿಸಿ ಬದುಕಬೇಕೆಂಬ ಆಶಯ ವ್ಯಕ್ತಪಡಿಸುವ 'ಆ ಒಂದು ಕ್ಷಣ', ಮಾನವೀಯತೆಯ ಮೇಲ್ಮೆ ಸಾರುವ 'ಹೊಟ್ಟೆ ಉರಿಸಿದ ಹುಡುಗ', ಹೆಣ್ಣು ಭ್ರೂಣ ಹತ್ಯೆಯ ದಾರುಣತೆ ದರ್ಶಿಸುವ 'ಗಗನ ಚುಂಬನ'... ಹೀಗೆ ಇಲ್ಲಿರುವ ಬಹುತೇಕ ಕಥೆಗಳು ನಮ್ಮ ಸುತ್ತಲೂ ನಡೆಯುವ ಘಟನೆಗಳಂತೆ ಭಾಸವಾಗುತ್ತವೆ. ❖




ಪು: 170 ₹265

ಒಂದರ್ಧ ಗುಟುಕು ಚಾ
ಲೇ: ಎಸ್. ರಮೇಶ್ ನಾಯಕ್
ಪ್ರ: ನಿಹೀರಾ ಪ್ರಕಾಶನ, ಹುಬ್ಬಳ್ಳಿ
ಸಂ: 9632391008

ಕಥೆಯೊಂದಿಗೆ ಪ್ರಕೃತಿ ದರ್ಶನ

ಅರಸಿಕೆರೆಯ ಅಬ್ಬೆಪಾರಿಯೊಬ್ಬನ ಕಥೆಯನ್ನು ಹೊಂದಿರುವ ಕಾದಂಬರಿ 'ಅಬ್ಬೆ'. 'ಇದೊಂದು ಆತ್ಮಕಥಾನಕ ಸ್ವರೂಪದ ಕಥನ. ಕೃತಿಯಲ್ಲಿ ನಿರೂಪಣೆ ಉತ್ತಮಪುರುಷದಲ್ಲಿದ್ದರೂ ಕಥಾ ಹಂದರ ಕಾಲ್ಪನಿಕ. ಬರುವ ಕೆಲವು ಊರುಗಳು, ಬೆಟ್ಟ,ಗುಡ್ಡಗಳು ವಾಸ್ತವಕ್ಕೆ ಹತ್ತಿರವಿದ್ದರೂ ಪಾತ್ರಗಳು ಕಾಲ್ಪನಿಕ' ಎಂದು ಲೇಖಕ ಶಶಿಧರ ಹಾಲಾಡಿ ಪ್ರಾರಂಭದಲ್ಲಿಯೇ ಹೇಳುತ್ತಾರೆ.

ವ್ಯಕ್ತಿಯೊಬ್ಬನ ನೈಜ ಕಥೆಯಂತೆ ನಿರೂಪಣೆ ಸಾಗುತ್ತದೆ. 'ಕಟ್ಟು ಕಥೆಯ ವ್ಯಾಪ್ತಿಯಿಂದ ಒಟ್ಟು ಕಥೆಯನ್ನು ಹೊರಗಿಡುವ ಎರಡು ಆಯಾಮಗಳನ್ನು ಇಲ್ಲಿನ ಕಥಾಶಿಲ್ಪದಿಂದ ಪ್ರತ್ಯೇಕಿಸಿ ಗುರುತಿಸಿದಾಗ ಹಾಲಾಡಿಯವರ ಕಥನ ಕಲೆಯ ವೈವಿಧ್ಯ ಮತ್ತು ವೈಶಿಷ್ಟ್ಯ ಮನದಟ್ಟಾಗುತ್ತದೆ. ಅಬ್ಬೆ ಜೇಡ, ಫ್ಲಾಮಿಂಗೋ ಹಕ್ಕಿಗಳು, ಕಲ್ಕೆರೆಯ ಕೆರೆ ಏರಿಯ ಮರದಲ್ಲಿ ಗೂಡು ಕಟ್ಟಿಕೊಂಡಿರುವ ಕೊಕ್ಕರೆಗಳಂತಹ ಸಾಕಷ್ಟು ಪ್ರಾಣಿ, ಪಕ್ಷಿಗಳು, ಬೆಟ್ಟ–ಗುಡ್ಡಗಳ ವಿವರಣೆ ಕಥೆಯ ಜೊತೆಗೆ ಸಿಗುತ್ತದೆ' ಎಂದು ಬೆಳಗೋಡು ರಮೇಶ ಭಟ್ಟರು ಕೃತಿಯ ಬೆನ್ನುಡಿಯಲ್ಲಿ ಬರೆಯುತ್ತಾರೆ. ಸರಳ ಕಥೆಯೊಂದಿಗೆ ಸಾಕಷ್ಟು ಮಾಹಿತಿ ಒಳಗೊಂಡಿರುವ ಕೃತಿಯಿದು. ❖



ಪು: 264 ₹250

ಅಬ್ಬೆ
ಲೇ: ಶಶಿಧರ ಹಾಲಾಡಿ
ಪ್ರ: ಅಂಕಿತ ಪುಸ್ತಕ
ಸಂ: 9019190502

‘ಸ್ವಂದನ’ಕ್ಕೆ ಐವತ್ತು – ‘ಪಾರಿಜಾತ’ ಹುಟ್ಟಿತ್ತು

ಬಿ. ಸುರೇಶ

ರಂಗಭೂಮಿ

ಕನ್ನಡ ಹವ್ಯಾಸೀ ರಂಗಭೂಮಿಯ ಪ್ರಮುಖ ತಂಡಗಳಲ್ಲಿ ‘ಸ್ಪಂದನ’ ಪ್ರಮುಖವಾದುದು. ಎಪ್ಪತ್ತರ ದಶಕದ ಕನ್ನಡ ಹವ್ಯಾಸೀ ರಂಗಭೂಮಿಯ ಉಚ್ಛ್ರಾಯದ ಕಾಲದಲ್ಲಿ ಹುಟ್ಟಿದ ಹಲವು ರಂಗತಂಡಗಳಂತೆ ಎಚ್. ವಿ. ವೆಂಕಟಸುಬ್ಬಯ್ಯ ಮತ್ತು ರಾಣಿರಾವ್ ಅವರ ನಾಯಕತ್ವದಲ್ಲಿ ಹುಟ್ಟಿದ ತಂಡ ‘ಸ್ಪಂದನ’. ಆ ತಂಡಕ್ಕೆ ಪಾತ್ರಧಾರಿಯಾಗಿ ಬಂದ ಬಿ. ಜಯಶ್ರೀ ಅವರು ನಂತರ ‘ಜಸ್ಮಾಓಡನ್’ ನಾಟಕದ ನಿರ್ದೇಶನದ ಮೂಲಕ ‘ಸ್ಪಂದನ’ ದ ರೂವಾರಿ ಆದರು. ಅಲ್ಲಿಂದಾಚೆಗೆ ‘ಕರಿಮಾಯಿ’, ‘ಲಕ್ಷಾಪತಿ ರಾಜನ ಕತೆ’, ‘ಅಗ್ನಿವರ್ಣ’, ‘ಗಿರಿಜಾ ಕಲ್ಯಾಣ’ ಮುಂತಾದ ಜನಪದ ಪ್ರಕಾರಗಳನ್ನು ಬಳಸಿಕೊಂಡು ಯಶಸ್ವಿ ರಂಗಪ್ರದರ್ಶನಗಳನ್ನು ಕಟ್ಟುತ್ತಾ ಬಂದಿರುವ ‘ಸ್ಪಂದನ’ ತಂಡವು ‘ವೈಶಾಖ’, ‘ಬಾಳೂರ ಗುಡಿಕಾರ’ದಂತಹ ಜನಪದವಲ್ಲದ ರಂಗಶೈಲಿಯನ್ನು ಬಳಸಿದ ನಾಟಕಗಳನ್ನೂ ಕಟ್ಟಿರುವುದುಂಟು. ಇವುಗಳಲ್ಲಿ ಬಹುತೇಕ ನಾಟಕಗಳನ್ನು ಸ್ವತಃ ಬಿ. ಜಯಶ್ರೀ ಅವರು ನಿರ್ದೇಶಿಸಿದ್ದಾರೆ ಮತ್ತು ಪ್ರಧಾನ ಕಲಾವಿದರಾಗಿ ಮೇಳವನ್ನು ಮುನ್ನಡೆಸಿದ್ದಾರೆ. ನಮ್ಮ ನಾಡಿನ ಶ್ರೇಷ್ಠ ರಂಗಸಂಗೀತ ಪ್ರಸ್ತುತಿಗಾರರಲ್ಲಿ ಒಬ್ಬರಾದ ಬಿ. ಜಯಶ್ರೀ ಅವರು ಸ್ವತಃ ಅದ್ಭುತ ನಟಿಯೂ ಹೌದು. ಗುಬ್ಬಿ ವೀರಣ್ಣನವರ ಮೊಮ್ಮಕ್ಕಳಲ್ಲಿ ಒಬ್ಬರಾದ ಬಿ. ಜಯಶ್ರೀ ಬಾಲ್ಯದಿಂದಲೇ ರಂಗಸಾಂಗತ್ಯದಲ್ಲಿ ಇದ್ದವರು. ತಾಯಿ ಮಾಲತಮ್ಮನವರ ಮೂಲಕ ವೃತ್ತಿ ರಂಗಭೂಮಿಯ ಹಾಡುಗಳನ್ನು ಮತ್ತು ರಂಗಪ್ರಸ್ತುತಿಯ ವಿಶೇಷಗಳನ್ನು ಕಲಿತವರು. ನಂತರ ಎನ್.ಎಸ್.ಡಿ. ಪದವಿಯನ್ನೂ ಪಡೆದು ಕೇವಲ ಕರುನಾಡಿಗಲ್ಲದೆ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ತಮ್ಮ ನಾಟಕಗಳನ್ನು ಪ್ರದರ್ಶಿಸಿದವರು. ಇಂತಹ ಇತಿಹಾಸವುಳ್ಳ ರಂಗತಂಡವೊಂದು ತನ್ನ ಐವತ್ತನೆಯ ಹುಟ್ಟುಹಬ್ಬ ಆಚರಿಸಿಕೊಳ್ಳಲು ಹೊಸ ನಾಟಕವೊಂದನ್ನು ಕಟ್ಟುವ ಯೋಚನೆ ಮಾಡುವುದೇ ಮೆಚ್ಚತಕ್ಕ ಅಂಶ. ಈ ಸಂದರ್ಭಕ್ಕೆ ‘ಸ್ಪಂದನ’ ಆರಿಸಿಕೊಂಡದ್ದು ಕೆ.ವೈ. ನಾರಾಯಣಸ್ವಾಮಿ ಅವರು ಬರೆದ ‘ಪಾರಿಜಾತ’ ನಾಟಕವನ್ನು.

‘ಪಾರಿಜಾತ’ದ ಹಾದಿ

ನಮ್ಮ ನಾಡಿನ ನೃತ್ಯ-ಸಂಗೀತ ಎರಡನ್ನೂ ಬಳಸಿಕೊಳ್ಳುವ ಜನಪದ ಪ್ರಕಾರಗಳಲ್ಲಿ ದೊಡ್ಡಾಟ ಹಾಗೂ ಸಣ್ಣಾಟ ಪ್ರಖ್ಯಾತವಾದುದು. ಅದರಲ್ಲಿ ಸಣ್ಣಾಟವು ಕಾಲಾಂತರದಲ್ಲಿ ‘ಪಾರಿಜಾತ’ ಎಂಬ ಹೆಸರಲ್ಲಿ ನಮ್ಮ ನಾಡಲ್ಲಿ ಬಳಕೆಗೆ ಬಂದುದು ಭಕ್ತಿ ಚಳವಳಿಯ ಕಾಲದಲ್ಲಿ. ಸರಿಸುಮಾರು ಹದಿನೈದನೇ ಶತಮಾನದಿಂದ ಮರಾಠಿ ಮತ್ತು ಕನ್ನಡದ ನುಡಿಯಾಡುವ ಜನರ ನಡುವೆ ಕೃಷ್ಣಭಕ್ತಿಯ ಈ ಕತೆ ಹಲವು ಸ್ವರೂಪಗಳಲ್ಲಿ ಪ್ರದರ್ಶನವಾಗುತ್ತಾ ಇದೆ. ಈ ಹಾದಿಯಲ್ಲಿ ಹಲವರು ‘ಪಾರಿಜಾತ’ ಬಳಸಿ ಶಿವಭಕ್ತಿಯ ಕತೆಗಳನ್ನು ಹೇಳಿರುವುದೂ ಉಂಟು. ಇಂದಿಗೂ ಪಾರಿಜಾತವನ್ನು ಅಭಿನಯಿಸುವ ಹಲವು ಜನಪದ ತಂಡಗಳು ಬೆಳಗಾವಿ, ಬಾಗಲಕೋಟೆ, ಧಾರಾವಾಡದಲ್ಲಿವೆ.



ಪಾರಿಜಾತದ ನಾಟಕ ದೃಶ್ಯ ಚಿತ್ರ (ತಾಯಿ ಲೋಕೋಶ್)

ಕೃಷ್ಣನ ಬಳಿಗೆ ಬರುವ ನಾರದನು ಆತ ರುಕ್ಮಿಣಿಯ ಜೊತೆಗಿರುವಾಗ ತಾನು ನಾಕದಿಂದ ತಂದಿದ್ದ ಏಕೈಕ ಪಾರಿಜಾತದ ಹೂವನ್ನು ನೀಡುತ್ತಾನೆ. ಅದನ್ನು ರುಕ್ಮಿಣಿಯು ತಾನೇ ಮುಡಿದುದನ್ನು ಕಂಡ ನಾರದನು ಈ ವಿಷಯವನ್ನು ಸತ್ಯಭಾಮೆಗೆ ತಿಳಿಸಿ, ಕೃಷ್ಣನ ಪ್ರೀತಿ ಅತ್ತ ಕಡೆಗೆ ಹೆಚ್ಚು ಎಂದು ಚಾಡಿ ಹೇಳುತ್ತಾನೆ. ಇದರಿಂದ ಮುನಿಸಿಕೊಂಡ ಸತ್ಯಭಾಮೆಯನ್ನು ಒಲಿಸಲು ಸ್ವತಃ ಕೊರವಂಜಿ ವೇಷ ಧರಿಸಿ ಬರುವ ಕೃಷ್ಣನನ್ನು ರುಕ್ಮಿಣಿಯು ಆರಾಧಿಸಿದರೆ, ಸತ್ಯಭಾಮೆಯು ಇನ್ನೂ ಸಿಟ್ಟಲ್ಲಿಯೇ ಇರುತ್ತಾಳೆ. ಅವಳಿಗಾಗಿ ತಾನು ಪಾರಿಜಾತದ ಮರವನ್ನೇ ತರುವುದಾಗಿ ಹೇಳಿ ಸ್ವರ್ಗಕ್ಕೆ ಸಾಗಿ, ಇಂದ್ರನ ಜೊತೆಗೆ ಯುದ್ಧ ಮಾಡಿ ಪಾರಿಜಾತದ ಗಿಡ ತರುವಾಗ, ಆ ಗಿಡವು ಹುಡುಗಿಯಾಗಿ ಅಮೃತಮಥನದ ಕಾಲದಲ್ಲಿ ನೆಲಕ್ಕೆ ಬಿದ್ದ ಏಕೈಕ ಅಮೃತದ ಹನಿಯನ್ನು ಕಶ್ಯಪರು ಹೆಣ್ಣಾಗಿಸಿದ್ದು, ಆ ಹೆಣ್ಣನ್ನು ಗಿಡವಾಗಿಸಿ ಸ್ವರ್ಗಕ್ಕೆ ಸಾಗಿಸಿ ಇಂದ್ರನಿಗೆ ಒಪ್ಪಿಸಿದ್ದು, ಮರಳಿ ವಿಷ್ಣುವು ಹೆಣ್ಣಾಗಿ ಪಾರಿಜಾತವನ್ನು ಮುಟ್ಟಿದಾಗ ಆ ಗಿಡವು ಮರಳಿ ಹೆಣ್ಣಾಗುವುದು ಎಂಬ ಹಳೆಯ ಕತೆಯು ಬಿಚ್ಚಿಕೊಂಡು, ಕೃಷ್ಣನು ಆ ಪಾರಿಜಾತ ಎಂಬ ಹೆಣ್ಣನ್ನೇ ಮನೆಗೆ ತಂದಾಗ ಮತ್ತೊಬ್ಬ ಸವತಿ ಬಂದಳೆಂದು ಸತ್ಯಭಾಮೆಯ ಹುಯಿಲೆಬ್ಬಿಸುವುದು, ಪಾರಿಜಾತವು ತಾನು ಗಿಡವಾಗಿಯೇ ಉಳಿಯಲು ಬೇಡಿಕೊಳ್ಳುವುದು ಈ ಶ್ರೀಕೃಷ್ಣ ಪಾರಿಜಾತದ ಕಥಾವಸ್ತು. ಜನಪದರು ಈ ಕತೆಯಲ್ಲಿ ಕೃಷ್ಣನ ಪವಾಡವನ್ನು ಮತ್ತು ಆ ಮೂಲಕ ಆತನ ಭಕ್ತಿಯನ್ನು ತಿಳಿಸಲು ವಾರಗಟ್ಟಲೆ ಅಭಿನಯಿಸುವ ಸಂಪ್ರದಾಯವಿದೆ. ಈ ಬಗೆಯ ಆಟದಲ್ಲಿ ಭಾಗವತನ ಪಾತ್ರವೇ ಪ್ರಧಾನವಾಗಿ ಇಡಿಯ ನಾಟಕವನ್ನು ನಿರ್ವಹಿಸುತ್ತದೆ. ಈ ಭಾಗವತ ಕೇಳುವ ಪ್ರಶ್ನೆಗಳು, ಅದಕ್ಕೆ ಪಾತ್ರಗಳು ಉತ್ತರಿಸುತ್ತಾ ಮೂಡುವ ತಮಾಷೆಗಳು ಇಲ್ಲಿ ಪ್ರಧಾನ. ಕಾಲಾಂತರದಲ್ಲಿ ಈ ‘ಪಾರಿಜಾತ’ದ ಪ್ರದರ್ಶನಗಳಲ್ಲಿ ಅಶ್ಲೀಲತೆ ಹೆಚ್ಚಾಗಿದೆ ಎಂಬ ಮಾತಿದೆ.

‘ಸ್ಪಂದನ’ದ ಪಾರಿಜಾತ

ಕೆ.ವೈ.ನಾರಾಯಣಸ್ವಾಮಿ ಕನ್ನಡ ರಂಗಭೂಮಿಯ ಪ್ರಧಾನ ನಾಟಕಕಾರರಲ್ಲಿ ಒಬ್ಬರು. ಅವರು ಬರೆದ ‘ಅಭಿಜ್ಞಾನ’, ‘ಭಾರತ’, ‘ಮಲ್ಲಿಗೆ’ ಮುಂತಾದ ನಾಟಕಗಳು ಜನಪ್ರಿಯವಾಗಿ ಹಲವು ಪ್ರದರ್ಶನಗಳನ್ನು ಕಂಡಿವೆ. ಈಗ ‘ಸ್ಪಂದನ’ ತಂಡಕ್ಕಾಗಿಯೇ ಕೆ.ವೈ. ಎನ್. ‘ಪಾರಿಜಾತ’ ಬರೆದಿದ್ದಾರೆ. ಜನಪದ ಪಾರಿಜಾತದಲ್ಲಿ ಕೃಷ್ಣಭಕ್ತಿಯೇ ಪ್ರಧಾನವಾದರೆ, ಈ ನಾಟಕದಲ್ಲಿ ಹೆಣ್ಣಿನ ಸ್ವಾತಂತ್ರ್ಯವನ್ನು ಆಧುನಿಕ ಸ್ತ್ರೀವಾದದ ಹಿನ್ನೆಲೆಯಲ್ಲಿ ಮುಂದಿರಿಸಿಲಾಗಿದೆ.

ನಾಟಕದ ಅಂತ್ಯದಲ್ಲಿ ತನ್ನ ಕಾರಣವಾಗಿ ಸತ್ಯಭಾಮೆ ಮತ್ತು ಕೃಷ್ಣನ ನಡುವೆ ಜಗಳವಾಗುವಾಗ ಮುಂದೆ ಬಂದು ಮಾತಾಡುವ ಪಾರಿಜಾತ, ಹೇಗೆ ಹುಟ್ಟಿನಿಂದ ಗಂಡಾಳ್ವಿಕೆಯು ತನ್ನನ್ನು ವಸ್ತುವನ್ನಾಗಿ ನೋಡಿದೆ ಎಂದು ಹೇಳುತ್ತಾ ತನಗೊಂದು ಹಿಡಿ ಮಣ್ಣು ಕಾಲಿನ ಬಳಿ ಇದ್ದರೆ ಸಾಕು ತಾನು ಮರಳಿ ಗಿಡವಾಗಿ ಉಳಿದುಹೋಗುತ್ತೇನೆ ಎನ್ನುವ ಮೂಲಕ ಒಟ್ಟಾರೆ ಸ್ತ್ರೀಕುಲದ ದನಿಯಾಗುತ್ತಾಳೆ. ಈ ಹಂತದಲ್ಲಿ ಕೆ.ವೈ. ಎನ್. ಅವರ ಲೇಖನಿಯು ಕಾವ್ಯಾತ್ಮಕವಾಗಿ ಇಡಿಯ ಪ್ರಸಂಗವನ್ನು ನಿರ್ವಹಿಸಿರುವುದು ಗಮನಿಸಬೇಕಾದ ವಿಷಯವಾಗಿದೆ.

ನಾರದನು ಪಾರಿಜಾತದ ಹೂ ಹಿಡಿದು ಭೂಲೋಕಕ್ಕೆ ಬಂದಾಗಲೇ ಆತನಿಗೆ ಪಾರಿಜಾತ ಅಭಿನಯಿಸುವ ತಂಡ ಸಿಗುತ್ತದೆ. ಆ ತಂಡದವರ ಒತ್ತಾಯಕ್ಕೆ ನಾರದನೇ ಭಾಗವತನಾಗಿ ಆ ನಾಟಕವನ್ನು ಮುನ್ನಡೆಸುವುದು ಈ ನಾಟಕದ ಆರಂಭಕ್ಕೆ ಒಂದು ಚೇತೋಹಾರಿ ಓಘವನ್ನು ಸೃಷ್ಟಿಸುತ್ತದೆ. ನಂತರ ನಾಟಕದುದ್ದಕ್ಕೂ ಭಾಗವತನೂ ಆಗಿ, ನಾರದನೂ ಆಗಿ ಕಥನದ ಸೂತ್ರವನ್ನು ಎಳೆದೊಯ್ಯುವ ನಾರದನ ಪಾತ್ರಧಾರಿಯು ಪ್ರದರ್ಶನದುದ್ದಕ್ಕೂ ಉತ್ಸಾಹ ತುಂಬುತ್ತಾರೆ.

‘ಸ್ಪಂದನ’ ತಂಡದ ನಾಟಕವೆಂದರೆ ಹಾಡು ಮತ್ತು ಕುಣಿತವು ಪ್ರಧಾನ. ಈ ನಾಟಕದಲ್ಲಿಯೂ ವೃತ್ತಿಪರ ಹಾಡುಗಾರರ ಜೊತೆಗೆ ಸ್ವತಃ ಬಿ. ಜಯಶ್ರೀ ಅವರು ಮೇಳವನ್ನು ಮುನ್ನಡೆಸುತ್ತಾರೆ. ನಾಟಕದುದ್ದಕ್ಕೂ ಮೇಳವೂ ನಾಟಕದ ಪಾತ್ರವಾಗಿ, ಪಾತ್ರಗಳು ಮೇಳದವರಾಗಿ ಹಲವು ಕೆಲಸಗಳನ್ನು ನಿರ್ವಹಿಸುತ್ತಾ ಇಡಿಯ ನಾಟಕಕ್ಕೆ ಲವಲವಿಕೆ ತುಂಬುವುದು ಈ ಪ್ರದರ್ಶನದ ವಿಶೇಷ. ಬಹುತೇಕ ಪ್ರಧಾನ ಪಾತ್ರಗಳನ್ನು ಕೃಷ್ಣನೂ ಸೇರಿದಂತೆ ನೃತ್ಯವನ್ನು ಚೆನ್ನಾಗಿ ಬಲ್ಲ ಹೆಣ್ಣುಮಕ್ಕಳು ನಿರ್ವಹಿಸಿದ್ದಾರೆ. ಹಾಗಾಗಿ ಹಾಡುಗಳ ಲಯಕ್ಕೆ ತಕ್ಕಂತೆ ನೃತ್ಯವನ್ನು ಮಾಡುತ್ತಾ ನಟನೆಯನ್ನೂ ಮಾಡಿರುವುದರಿಂದಾಗಿ ಇಡಿಯ ಪ್ರದರ್ಶನಕ್ಕೆ ವಿಶಿಷ್ಟವಾದ ಚೈತನ್ಯ ಒದಗಿದೆ. ನಾಟಕದ ನಡುವಲ್ಲಿ ಕೊರವಂಜಿಯಾಗಿ, ಅಂತ್ಯದಲ್ಲಿ ಪಾರಿಜಾತ ಪಾತ್ರವಾಗಿ ಲಹರಿ ಭಾರಿಘಾಟ್ ಅವರು ನೃತ್ಯವನ್ನಷ್ಟೇ ಅಲ್ಲದೆ ವಾಚಿಕವನ್ನೂ ನಿರ್ವಹಿಸುವ ರೀತಿ ಬಹುಕಾಲ ನೆನಪಲ್ಲಿ ಉಳಿಯುತ್ತದೆ.

ಒಟ್ಟಾರೆಯಾಗಿ ‘ಸ್ಪಂದನ’ ತಂಡವು ತನ್ನ ಐವತ್ತನೆಯ ವಸಂತದ ನೆನಪಿನಲ್ಲಿ ಕನ್ನಡ ರಂಗಭೂಮಿಯು ಬಹುಕಾಲ ಉಳಿಸಿಕೊಳ್ಳುವ ಸಾಧ್ಯತೆಯನ್ನುಳ್ಳ ನಾಟಕವೊಂದನ್ನು ನೀಡಿದೆ. ಇದಕ್ಕಾಗಿ ಬಿ. ಜಯಶ್ರೀ ಅವರಾದಿಯಾಗಿ ತಂಡದ ಎಲ್ಲರೂ ಅಭಿನಂದನಾರ್ಹರು.

ಏಕೀಕರಣದ ಏಕೈಕ ಹುತಾತ್ಮ ‘ರಂಜಾನಸಾಬ’

ಡಿ.ಎಸ್.ಚೌಗಲೆ

ನೆನಕೆ

ಕರ್ನಾಟಕ ಏಕೀಕರಣದ ಹೋರಾಟಗಾರನಾಗಿ ಹುತಾತ್ಮರಾದವರು ಬಳ್ಳಾರಿಯ ರಂಜಾನಸಾಬ. ಕನ್ನಡ ರಾಜ್ಯೋತ್ಸವ ಸಂಭ್ರಮದ ಹೊತ್ತಿನಲ್ಲಿ ಅವರನ್ನೊಮ್ಮೆ ನೆನಪಿಸಿಕೊಳ್ಳಲೇಬೇಕು...


ಆಗಸ್ಟ್ 14,1913ರಂದು ಬಳ್ಳಾರಿಯಲ್ಲಿ ರಂಜಾನಸಾಬ ಹುಟ್ಟಿದ್ದು. ತಂದೆ ಹುಸೇನಸಾಬ, ತಾಯಿ ಜಂಗಲಮ್ಮ ಅವರ ಏಕಮೇವ ಪುತ್ರ. ಹದಿನೆಂಟನೆಯ ಶತಮಾನದಲ್ಲಿನ ಕ್ಷಾಮದ ಕಾರಣದಿಂದಾಗಿ ಈ ಮನೆತನ ಬಳ್ಳಾರಿ ತಾಲೂಕಿನ ಹಲಕುಂದಿಯಿಂದ ಪಿಂಜಾರ ಗಲ್ಲಿಗೆ ವಲಸೆ ಬಂದಿತು.

ಹತ್ತಿ ಸಂಗ್ರಹಿಸಿ ಗಾದಿ, ತಡಿಗಳನ್ನು ಸಿದ್ಧಗೊಳಿಸುವ ವೃತ್ತಿ ಹುಸೇನಸಾಬರದು. ತಾಯಿ ಜಂಗಲಮ್ಮ ಅವರಿಗೆ ಮನೆಯ ಹೊಣೆ. ಕನ್ನಡವನ್ನು ಓದಲು-ಬರೆಯಲು ಬಲ್ಲ ಜಂಗಲಮ್ಮ ರಂಜಾನಸಾಬರ ಮೇಲೆ ಪ್ರಭಾವ ಬೀರಿದವರು. ರಂಜಾನಸಾಬರ ಮನೆಯ ಮಾತೂ ಕನ್ನಡವೇ. ಕಾಯಕ ಸಂದರ್ಭದಲ್ಲಿ ಜನಪದ ಗೀತೆ, ಗೀಗೀ ಪದ ಹಾಡುತ್ತ, ಒಡಪುಗಳಲ್ಲಿ ದಣಿವು ಕಳೆದವರು. ಆತ್ಮಶುದ್ಧಿಯ ಪ್ರತೀಕವಾದ ರಂಜಾನ್ ಹೆಸರನ್ನು ಮೊಮ್ಮಗನಿಗೆ ಸೂಚಿಸಿ ಇಟ್ಟವರು ಅಜ್ಜಿ ಹೊನ್ನೂರಬೀ. ರಂಜಾನ್ ‘ಸರ್ವೆಶಾವಲಿ’(ಮಸೀದಿ)ಯಲ್ಲಿ ನಾಲ್ಕನೆಯ ಇಯತ್ತೆಯಲ್ಲಿ ಅನುತ್ತೀರ್ಣ ಹೊಂದಿ ಶಾಲೆಗೆ ವಿದಾಯ ಹೇಳಿದರು. ಇಲ್ಲಿ ಕನ್ನಡ, ಉರ್ದು ಎರಡನ್ನೂ ಕಲಿಸುತ್ತಿದ್ದರು. ಬಳಿಕ ಗಾದಿ, ತಡಿಗಳ ಕಾಯಕದಲ್ಲಿ ತಂದೆಯವರಿಗೆ ನೆರವಾದರು.

